ಶನಿವಾರ, ಅಕ್ಟೋಬರ್ 30, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೊಂಬೆ ಪ್ರದರ್ಶನ

ದೀಪಾವಳಿ ಹಬ್ಬದ ನಿಮಿತ್ತ ಶುಕ್ರವಾರ ಪಟ್ನಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿಯ ವಿದ್ಯಾರ್ಥಿನಿಯರು ಕ್ರಾಫ್ಟ್ ಮೇಳದಲ್ಲಿ ಸಾಂಪ್ರದಾಯಿಕ ಬೊಂಬೆಗಳನ್ನು ಪ್ರದರ್ಶಿಸಿದರು













ನಟ ಪುನೀತ್ ರಾಜಕುಮಾರ್ ಪಾರ್ಥಿವ ಶರೀರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಷ್ಟ್ರಧ್ವಜ ಹೊದಿಸಿ ಸರ್ಕಾರಿ ಗೌರವ ಸಲ್ಲಿಸಿದರು (ಚಿತ್ರ: 1) ಸದಾಶಿವನಗರದ ಮನೆ ಬಳಿ ನಟ ಶಿವರಾಜ್‌ಕುಮಾರ್ ಅವರಿಗೆ ನಟಿ ಬಿ. ಸರೋಜಾ ಸಾಂತ್ವನ ಹೇಳಿದರು (ಚಿತ್ರ:2) ವಿಕ್ರಮ್ ಆಸ್ಪತ್ರೆಗೆ ಓಡೋಡಿ ಬಂದ ನಟ ಗಣೇಶ್ (ಚಿತ್ರ:3) ಕಂಠೀರವ ಕ್ರೀಡಾಂಗಣದಲ್ಲಿ ನಟ ಪುನೀತ್ ರಾಜಕುಮಾರ್ ಪಾರ್ಥಿವ ಶರೀರಕ್ಕೆ ನಟ ವಿಜಯ್ ಅಂತಿಮ ನಮನ ಸಲ್ಲಿಸಿದರು (ಚಿತ್ರ:4) –ಪ್ರಜಾವಾಣಿ ಚಿತ್ರಗಳು

ರಾಜಧಾನಿಯಲ್ಲಿ ನೀರವ ಮೌನ; ನಾಗರಿಕರ ಕಂಬನಿ • ಜನರ ನಿಯಂತ್ರಣಕ್ಕೆ ಲಘು ಲಾಠಿ ಪ್ರಹಾರ • ಮುಗಿಲು ಮುಟ್ಟಿದ ಪುನೀತ್ ಪರ ಘೋಷಣೆ

‘ಕಂಠೀರವ’ದಲ್ಲಿ ಪುನೀತ; ಅಂತಿಮ ದರ್ಶನಕ್ಕೆ ಜನಸಾಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಪಾರ್ಥಿವ ಶರೀರವನ್ನು ನಗರದ ಕಂಠೀರವ ಕ್ರೀಡಾಂಗಣದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗಿದ್ದು, ಶುಕ್ರವಾರ ಸಂಜೆಯಿಂದಲೇ ಜನಸಾಗರವೇ ಹರಿದು ಬಂತು.

ಸದಾಶಿವನಗರದ ಮನೆಯಲ್ಲಿ ಪೂಜಾ ವಿಧಿ-ವಿಧಾನಗಳನ್ನು ನೆರವೇರಿಸಿದ ನಂತರ, ಸಂಜೆ 7 ಗಂಟೆ ಸುಮಾರಿಗೆ ಪಾರ್ಥಿವ ಶರೀರರನ್ನು ಕ್ರೀಡಾಂಗಣಕ್ಕೆ ತರಲಾಯಿತು. ಇದಕ್ಕೂ ಮುನ್ನವೇ, ಕ್ರೀಡಾಂಗಣದಲ್ಲಿ ಪುನೀತ್ ರಾಜ್‌ಕುಮಾರ್ ಭಾವಚಿತ್ರ ಹಾಗೂ ಬ್ಯಾನರ್‌ಗಳನ್ನು ಹಾಕಿ ಹೂವಿನ ಅಲಂಕಾರದೊಂದಿಗೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಅದೇ ಸ್ಥಳದಲ್ಲಿ ಶರೀರವನ್ನು ಇರಿಸಿ, ಅಭಿಮಾನಿಗಳ ದರ್ಶನಕ್ಕೆ ಅವಕಾಶ ನೀಡಲಾಯಿತು.

ನೆಚ್ಚಿನ ನಟನನ್ನು ಕೊನೆಯ ಬಾರಿ ಕಣ್ತುಂಬಿಕೊಳ್ಳಲು ನಗರ ಹಾಗೂ ಹೊರ ಜಿಲ್ಲೆಗಳ ಸಾವಿರಾರು ಮಂದಿ ಕ್ರೀಡಾಂಗಣಕ್ಕೆ ಲಗ್ಗೆ ಇಟ್ಟಿದ್ದರು. ಕ್ರೀಡಾಂಗಣ ಸುತ್ತಲಿನ ವಿಠ್ಠಲ್ ಮಲ್ಯ ರಸ್ತೆ, ರಾಜಾರಾಮ್ ಮೋಹನ್ ರಾಯ್ ರಸ್ತೆ, ಕಸ್ತೂರ್‌ಬಾ ರಸ್ತೆ, ಕಾರ್ಪೋರೇಷನ್ ವೃತ್ತ ಹಾಗೂ ಕೆಂಪೇಗೌಡ ರಸ್ತೆಗಳಲ್ಲಿ ಜನದಟ್ಟಣೆ ಹೆಚ್ಚಿತ್ತು.

ಪ್ರತಿಯೊಂದು ರಸ್ತೆಗಳಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದರು. ಯಾವುದನ್ನೂ ಲೆಕ್ಕಿಸದ ಅಭಿಮಾನಿಗಳು, ಪುನೀತ್ ಅವರ ಅಂತಿಮ ದರ್ಶನ ಪಡೆಯಲು ಕ್ರೀಡಾಂಗಣದೊಳಗೆ ಎಲ್ಲ ದ್ವಾರಗಳ ಮೂಲಕ ಒಳ ನುಗ್ಗಲು ಯತ್ನಿಸಿದರು.

ಇದೇ ಸಂದರ್ಭದಲ್ಲಿ ಪೊಲೀಸರು, ಅಭಿಮಾನಿಗಳ ಮೇಲೆ ಲಘು ಲಾಠಿ ಪ್ರಹಾರ ನಡೆಸಿ ಚದುರಿಸಿದರು. ಅಭಿಮಾನಿಗಳು ದಿಕ್ಕಾಪಾಲಾಗಿ ಓಡಿದರು. ಸ್ಥಳದಲ್ಲಿದ್ದ ಬ್ಯಾರಿಕೇಡ್‌ಗಳು, ಪ್ಲೈವುಡ್‌ಗಳು ಹಾಗೂ ಜನರ ಚಪ್ಪಲಿಗಳು ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು ಕಂಡುಬಂತು. ಕೆಲವರು ಗಾಯಗೊಂಡರು.

ಸಾಲಿನಲ್ಲಿ ಹೋಗಿ ದರ್ಶನ: ಪ್ರತಿಯೊಬ್ಬರು ಅಂತಿಮ ದರ್ಶನ ಪಡೆಯಲು ಅನುಕೂಲವಾಗುವಂತೆ ಕ್ರೀಡಾಂಗಣದ ಮಧ್ಯದಲ್ಲಿ ಶೆಡ್ ನಿರ್ಮಿಸಿ ಶರೀರವನ್ನು ಇರಿಸಲಾಗಿದೆ. ಕ್ರೀಡಾಂಗಣದ ದ್ವಾರದಿಂದಲೇ ಸಾಲಾಗಿ ಶೆಡ್ ಬಳಿ ಹೋಗಲು ವ್ಯವಸ್ಥೆ ಮಾಡಲಾಗಿದೆ. ಆದರೆ, ಕೆಲ ಅಭಿಮಾನಿಗಳು ಏಕಾಏಕಿ ನುಗ್ಗಿದ್ದರಿಂದ ನೂಕುನುಗ್ಗಲು ಉಂಟಾಯಿತು. ಆಗ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ, ಜನರನ್ನು ನಿಗ್ರಹಿಸಿದರು.

ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತಿದ್ದಂತೆ ಅಭಿಮಾನಿಗಳನ್ನು ಸಾಲಿನಲ್ಲಿ ಕ್ರೀಡಾಂಗಣದ ಒಳಗೆ ಕಳುಹಿಸಲಾಯಿತು. ಜನರ ಸಾಲು ಸಮಯ ಕಳೆದಂತೆ ದೊಡ್ಡದಾಗುತ್ತಲೇ ಇತ್ತು. ಪುನೀತ್ ರಾಜ್‌ಕುಮಾರ್ ಪರ ಘೋಷಣೆಗಳು ಮುಗಿಲು ಮುಟ್ಟಿದ್ದವು.

ಪಾರ್ಥಿವ ಶರೀರದ ಫೋಟೊ ಹಾಗೂ ವಿಡಿಯೊ ಸೆರೆ ಹಿಡಿಯಲು ಅಭಿಮಾನಿಗಳು ಮುಗಿಬಿದ್ದರು. ಕೆಲವರು ಸೆಲ್ಫಿ ಕ್ಲಿಕ್ಕಿಸಿಕೊಂಡರು.

‘ಪವರ್ ಸ್ಟಾರ್‌ಗೆ ಜೈ...’, ‘ಅಪ್ಪು ಬಾಸ್‌ಗೆ ಜೈ’, ‘ಜೂನಿಯರ್ ರಾಜ್‌ಕುಮಾರ್‌ಗೆ ಜೈ’ ಎಂಬ ಘೋಷಣೆಗಳನ್ನು ಕೂಗಿದರು. ಪಾರ್ಥಿವ ಶರೀರಕ್ಕೆ ಕೆಲವರು ಕೈ ಮುಗಿದು ನಮಸ್ಕರಿಸಿದರೆ, ಹಲವರು ಸಾಷ್ಟಾಂಗ ನಮಸ್ಕಾರ ಹೇಳಿದರು.

ಅಂತಿಮ ದರ್ಶನ ಮಾಡುತ್ತಿದ್ದ ವೇಳೆ ಯುವಕರೊಬ್ಬರು, ಪ್ರಜ್ಞೆ ತಪ್ಪಿ ಬಿದ್ದರು. ಅವರನ್ನು ಪೊಲೀಸರು, ಹೊತ್ತೊಯ್ದು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕಳುಹಿಸಿದರು.

ಮುಖ್ಯಮಂತ್ರಿ ಮೊಕ್ಕಾಂ: ಪಾರ್ಥಿವ ಶರೀರಕ್ಕೂ ಮುನ್ನವೇ ಕ್ರೀಡಾಂಗಣಕ್ಕೆ ಬಂದಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದರು. ಸಚಿವರಾದ ಆರಗ ಜ್ಞಾನೇಂದ್ರ, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಮುರುಗೇಶ್ ನಿರಾಣಿ, ಬಿ.ಸಿ. ನಾಗೇಶ್, ಆರ್. ಅಶೋಕ, ಕೆ.ಸಿ. ನಾರಾಯಣಗೌಡ ಜೊತೆಗಿದ್ದರು.

ಮುಖ್ಯಮಂತ್ರಿ ಅವರೇ ಪುನೀತ್ ರಾಜ್‌ಕುಮಾರ್ ಪಾರ್ಥಿವ ಶರೀರದ ಮೇಲೆ ತ್ರಿವರ್ಣ ಧ್ವಜ ಹೊದಿಸಿ ಗೌರವ ಸಲ್ಲಿಸಿದರು. ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸಹ ಹಾಜರಿದ್ದರು.



ಪುನೀತ್ ರಾಜ್‌ಕುಮಾರ್ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಲು ಕಂಠೀರವ ಕ್ರೀಡಾಂಗಣದಲ್ಲಿ ಸಾಲುಗಟ್ಟಿ ನಿಂತಿದ್ದ ಅಭಿಮಾನಿಗಳು
– ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

‘ರಸ್ತೆಗಳಲ್ಲಿ ವಾಹನಗಳ ಸಂಚಾರ ಬಂದ್’

ಕನ್ನಿಂಗ್‌ಹ್ಯಾಮ್ ರಸ್ತೆ, ಮಿಲ್ಲರ್ಸ್ ರಸ್ತೆ ಹಾಗೂ ಸುತ್ತಮುತ್ತಲ ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿತ್ತು. ಸರ್ಕಾರದ ಅಧಿಕಾರಿಗಳು, ಪೊಲೀಸರು ಹಾಗೂ ಚಿತ್ರರಂಗದ ಗಣ್ಯರ ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶ ನೀಡಲಾಗಿತ್ತು.

ರಸ್ತೆಯ ಪ್ರವೇಶ ದ್ವಾರದಲ್ಲಿ ಬ್ಯಾರಿಕೇಡ್‌ಗಳನ್ನು ನಿಲ್ಲಿಸಿ, ವಾಹನಗಳನ್ನು ತಡೆಯಲಾಯಿತು. ಬದಲಿ ಮಾರ್ಗದ ಮೂಲಕ ವಾಹನಗಳನ್ನು ಕಳುಹಿಸಲಾಯಿತು. ಇದರಿಂದ ಹಲವೆಡೆ ದಟ್ಟಣೆಯೂ ಕಂಡುಬಂತು.



ವಿಕ್ರಮ್ ಆಸ್ಪತ್ರೆಗೆ ಬಂದಿದ್ದ ನಟರಾದ ಸುದೀಪ್ ಹಾಗೂ ಉಪೇಂದ್ರ

‘ಜೇಮ್ಸ್’ ಚಿತ್ರಕ್ಕೆ ಹೊಸಪೇಟೆ ಉದ್ಯಮಿ ಹೂಡಿಕೆ

ಹೊಸಪೇಟೆ (ವಿಜಯನಗರ): ನಟ ಪುನೀತ್ ರಾಜಕುಮಾರ್ ನಟನೆಯ ‘ಜೇಮ್ಸ್’ ಚಿತ್ರಕ್ಕೆ ಇಲ್ಲಿನ ಸ್ಥಳೀಯ ಉದ್ಯಮಿ ಕಿಶೋರ್ ಪತ್ತಿಕೊಂಡ ಹಣ ಹೂಡಿಕೆ ಮಾಡಿದ್ದಾರೆ.

ಭಾರಿ ಬಜೆಟ್‌ನ ಈ ಚಿತ್ರದ ಶೇ 80ರಷ್ಟು ಚಿತ್ರೀಕರಣ ಪೂರ್ಣಗೊಂಡಿತ್ತು. ಈ ವರ್ಷವೇ ಚಿತ್ರ ತೆರೆಗೆ ಬರಬೇಕಿತ್ತು. ಆದರೆ, ಕೋವಿಡ್ ಲಾಕ್‌ಡೌನ್‌ನಿಂದ ಚಿತ್ರೀಕರಣಕ್ಕೆ ಹಿನ್ನಡೆಯಾಗಿದೆ.

ಮೂಲಗಳ ಪ್ರಕಾರ, ಈಗಾಗಲೇ ಚಿತ್ರೀಕರಣಕ್ಕೆ ₹50 ಕೋಟಿಗೂ ಹೆಚ್ಚು ಖರ್ಚಾಗಿದೆ. ಪುನೀತ್ ಅವರ ಅಕಾಲಿಕ ನಿಧನದಿಂದ ಭಾರಿ ಹಿನ್ನಡೆಯಾಗಿದೆ. ಕಿಶೋರ್ ಪತ್ತಿಕೊಂಡ ನಗರದ ಬಾಲ ಚಿತ್ರಮಂದಿರದ ಮಾಲೀಕರೂ ಹೌದು. ಪುನೀತ್ ಅವರ ಎಲ್ಲ ಚಿತ್ರಗಳು ಅವರ ಚಿತ್ರಮಂದಿರದಲ್ಲಿ ಮಧ್ಯರಾತ್ರಿ ತೆರೆ ಕಾಣುತ್ತಿದ್ದವು. ಕಿಶೋರ್ ಅವರನ್ನು ‘ಪ್ರಜಾವಾಣಿ’ ಸಂಪರ್ಕಿಸಿದಾಗ ಅವರು ಮಾಹಿತಿಗೆ ಲಭ್ಯರಾಗಲಿಲ್ಲ.

ಗುರುಕಿರಣ್ ಜನ್ಮದಿನವೇ ಕೊನೆಯ ಕಾರ್ಯಕ್ರಮ

ಕನ್ನಡ ಚಿತ್ರರಂಗದ ಸಂಗೀತ ನಿರ್ದೇಶಕ ಗುರುಕಿರಣ್ ಅವರ ಜನ್ಮದಿನದ ಸಂಭ್ರಮಾಚರಣೆಯೇ ಚಿತ್ರನಟ ಪುನೀತ್ ರಾಜ್‌ಕುಮಾರ್ ಪಾಲ್ಗೊಂಡಿದ್ದ ಕೊನೆಯ ಕಾರ್ಯಕ್ರಮ.

ಗುರುಕಿರಣ್ ಜನ್ಮದಿನದ ಸಂಭ್ರಮಾಚರಣೆಗಾಗಿ ಗುರುವಾರ ರಾತ್ರಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪುನೀತ್ ಕೂಡ ಪಾಲ್ಗೊಂಡಿದ್ದರು. ಅಲ್ಲಿ, ಉಪೇಂದ್ರ ಅಭಿನಯದ ‘ಎ’ ಚಿತ್ರದ ‘ಸುಮ್ ಸುಮ್ನೇ ನಗ್ತಾಳೆ... ಯೌವ್ವನವೇ ಐ ಲೈಲು. . ಹೃದಯಗಳ ಬ್ರೇಕ್‌ಫೇಲು ಆ್ಯಕ್ಸಿಡೆಂಟಾಗೋಗಿದೆ‘ ಎಂದು ಹಾಡಿದ್ದರು. ಸಂಸದೆ ಸುಮಲತಾ ಅಂಬರೀಷ್, ಉಪೇಂದ್ರ, ಗಣೇಶ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿದ್ದರು. ರಾತ್ರಿ 11ರ ಬಳಿಕ ಪುನೀತ್ ಅಲ್ಲಿಂದ ನಿರ್ಗಮಿಸಿದ್ದರು.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಗುರುಕಿರಣ್, ‘ರಾತ್ರಿ 11ರವರೆಗೂ ಪುನೀತ್ ನಮ್ಮೊಂದಿಗೆ ಇದ್ದರು. ಅಲ್ಲಿಯವರೆಗೂ ಅವರು ಆರಾಮದಿಂದ ಇದ್ದರು. ಆರೋಗ್ಯದಲ್ಲಿ ಯಾವುದೇ ಸಮಸ್ಯೆಯೂ ಕಾಣಿಸಿಕೊಂಡಿರಲಿಲ್ಲ. ಅವರು ಈ ಬಗ್ಗೆ ಏನನ್ನೂ ಹೇಳಿರಲಿಲ್ಲ’ ಎಂದರು.

ಶುಕ್ರವಾರ ಬೆಳಿಗ್ಗೆ ಪುನೀತ್ ತಾವೇ ಕಾರು ಚಾಲನೆ ಮಾಡಿಕೊಂಡು ಜಿಮ್‌ಗೆ ತೆರಳಿದ್ದರು ಎಂದು ಪುನೀತ್ ರಾಜ್‌ಕುಮಾರ್ ಅವರ ಮನೆಯ ಪಕ್ಕದಲ್ಲೇ ಇರುವ ರಾಘವೇಂದ್ರ ರಾಜ್‌ಕುಮಾರ್ ಅವರ ಮನೆಯ ಭದ್ರತಾ ಸಿಬ್ಬಂದಿಯೊಬ್ಬರು ತಿಳಿಸಿದರು.

‘ಜಿಮ್‌ನಲ್ಲಿ ಕಸರತ್ತು ನಡೆಸುತ್ತಿರುವಾಗಲೇ ಪುನೀತ್ ಅವರಲ್ಲಿ ಎದೆನೋವು ಕಾಣಿಸಿಕೊಂಡಿತ್ತು’ ಎಂದು ಜಿಮ್‌ನ ಭದ್ರತಾ ಸಿಬ್ಬಂದಿಯೊಬ್ಬರು ತಿಳಿಸಿದರು.

ನಗರದಲ್ಲಿ ಮದ್ಯ ಮಾರಾಟ ನಿಷೇಧ

ಬೆಂಗಳೂರು: ನಗರದಲ್ಲಿ ಮುಂಜಾಗ್ರತಾ ಕ್ರಮವಾಗಿ ಮದ್ಯ ಮಾರಾಟ ನಿಷೇಧಿಸಿ ಪೊಲೀಸ್ ಕಮಿಷನರ್ ಕಮಲ್ ಪಂತ್ ಆದೇಶ ಹೊರಡಿಸಿದ್ದಾರೆ.

‘ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಅ. 29ರಿಂದ ಅ.31ರ ರಾತ್ರಿ 12 ಗಂಟೆವರೆಗೆ ಎಲ್ಲ ಬಾರ್ ಹಾಗೂ ರೆಸ್ಟೋರೆಂಟ್, ಮದ್ಯದಂಗಡಿ ಹಾಗೂ ಇತರೆಡೆ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಯಾರಾದರೂ ಮದ್ಯ ಮಾರಾಟಕ್ಕೆ ಯತ್ನಿಸಿದರೆ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ಆದೇಶದಲ್ಲಿ ಎಚ್ಚರಿಸಲಾಗಿದೆ.

‘ಆಸ್ಪತ್ರೆಗಳು, ಸದಾಶಿವನಗರದಲ್ಲಿರುವ ನಟನ ಮನೆ ಹಾಗೂ ವಿವಿಧ ಪ್ರದೇಶಗಳಲ್ಲಿ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಸಾಮಾಜಿಕ ಮಾಧ್ಯಮಗಳನ್ನು ಸುಳ್ಳು ಸುದ್ದಿ ಹಬ್ಬಿಸಲು ಕೆಲವರು ಯತ್ನಿಸಿರುವ ಸಾಧ್ಯತೆ ಇದ್ದು, ಈ ಬಗ್ಗೆ ನಿಗಾ ವಹಿಸಲಾಗಿದೆ’ ಎಂದೂ ಹೇಳಲಾಗಿದೆ.

ತಲೆಮಾಂಸ, ಚಿಬ್ಲು ಇಡ್ಲಿ ಪ್ರಿಯ ಅಪ್ಪು

ಮಂಡ್ಯ: ಮೈಸೂರು– ಬೆಂಗಳೂರು ನಡುವೆ ಪ್ರಯಾಣಿಸುವಾಗ ಶ್ರೀರಂಗಪಟ್ಟಣಕ್ಕೂ ಮೊದಲು ಸಿಗುವ ಬಾಬುರಾಯನ ಕೊಪ್ಪಲು ಜೈಭುವನೇಶ್ವರಿ ಹೋಟೆಲ್‌ಗೆ ಪುನೀತ್ ರಾಜ್‌ಕುಮಾರ್ ಭೇಟಿ ಕೊಡುತ್ತಿದ್ದರು. ತಲೆಮಾಂಸ ಹಾಗೂ ಕಾಲು ಸೂಪ್ ರುಚಿ ನೋಡಿಯೇ ಮುಂದಕ್ಕೆ ತೆರಳುತ್ತಿದ್ದರು.

ಜಿಲ್ಲೆಯಲ್ಲಿ ಎಲ್ಲೇ ಶೂಟಿಂಗ್ ನಡೆದರೂ ಅದೇ ಹೋಟೆಲ್‌ನಿಂದ ತಲೆ ಮಾಂಸ ತರಿಸಿಕೊಂಡು ಸವಿಯುತ್ತಿದ್ದರು. ಬಾಬುರಾಯನಕೊಪ್ಪಲಿನ ಹೋಟೆಲ್ ಜೊತೆಗಿನ ಸಂಬಂಧ ಡಾ.ರಾಜ್‌ಕುಮಾರ್ ಅವರ ಕಾಲದಿಂದಲೂ ಇತ್ತು. ಹೋಟೆಲ್ ಸಣ್ಣ ಗುಡಿಸಲಿನ ಜಾಗದಲ್ಲಿದ್ದಾಗಲೂ ಡಾ.ರಾಜ್ ಅಲ್ಲಿಗೆ ಭೇಟಿ ನೀಡಿ ತಲೆ ಮಾಂಸ ಸವಿಯುತ್ತಿದ್ದರು. ತಮ್ಮ ಮಕ್ಕಳನ್ನೂ ಕರೆದೊಯ್ಯುತ್ತಿದ್ದರು.

ಚಿಬ್ಲು ಇಡ್ಲಿ ರುಚಿ: ಹಲಗೂರು ಪಟ್ಟಣದಲ್ಲಿರುವ ಬಾಬು ಹೋಟೆಲ್‌ನ ಚಿಬ್ಲು ಇಡ್ಲಿ ಕೂಡ ಪುನೀತ್‌ಗೆ ಅಚ್ಚುಮೆಚ್ಚಾಗಿತ್ತು. ಶಿವರಾಜ್‌ಕುಮಾರ್ ಈ ಹೋಟೆಲ್‌ಗೆ ಹಲವು ಬಾರಿ ಬಂದಿದ್ದರು. ಬಂದಾಗಲೆಲ್ಲಾ ಪುನೀತ್‌ಗಾಗಿ ಇಡ್ಲಿ ಕಟ್ಟಿಸಿಕೊಂಡು ಹೋಗುತ್ತಿದ್ದರು. ಹೋಟೆಲ್ ಮಾಲೀಕ ಕೃಷ್ಣ ಅವರೇ ಹಲವು ಬಾರಿ ಚಿಬ್ಲು ಇಡ್ಲಿಯನ್ನು ಪುನೀತ್‌ಗೆ ಒಯ್ದುಕೊಟ್ಟಿದ್ದರು.

‘ಮುತ್ತತ್ತಿಯಲ್ಲಿ ಅರಸು ಚಿತ್ರದ ಚಿತ್ರೀಕರಣದಲ್ಲಿದ್ದಾಗ ಇಡ್ಲಿ ಕೊಟ್ಟು ಬಂದಿದ್ದೆ. ಈ ಥರದ ಇಡ್ಲಿ ಎಲ್ಲೂ ಸಿಗುವುದಿಲ್ಲ ಎಂದು ಮೆಚ್ಚುಗೆಯ ಮಾತುಗಳನ್ನಾಡಿದ್ದರು. ಕಳೆದ ವಾರ ಬೆಂಗಳೂರಿಗೆ ತೆರಳಿ ಅಪ್ಪುವನ್ನು ಭೇಟಿಯಾಗಿದ್ದೆ, ಶೀಘ್ರ ಹೋಟೆಲ್‌ಗೆ ಬರುವುದಾಗಿ ತಿಳಿಸಿದ್ದರು’ ಎಂದು ಕೃಷ್ಣ ಕಣ್ಣೀರಾದರು.

ಸಭೆಯ ಮಧ್ಯೆ ಬೊಮ್ಮಾಯಿಗೆ ಆಘಾತ ತಂದ ಪುನೀತ್ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಯ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ರಾಜ್ಯೋತ್ಸವ ಪ್ರಶಸ್ತಿ ವಿಜೇತರ ಪಟ್ಟಿಯನ್ನು ಅಂತಿಮಗೊಳಿಸುವ ಸಭೆ ಶುಕ್ರವಾರ ಬೆಳಿಗ್ಗೆ ನಡೆದಿತ್ತು. ಸಭೆ ಆರಂಭವಾಗಿ ಕೆಲವೇ ನಿಮಿಷಗಳಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆಪ್ತ ಸಿಬ್ಬಂದಿ ತರಾತುರಿಯಲ್ಲಿ ಅವರಿಗೆ ಸೆಲ್ ಫೋನ್ ನೀಡಿದರು.

ದೂರವಾಣಿಯಲ್ಲಿ ಆ ಕಡೆಯಿಂದ ಬಂದ ಮಾಹಿತಿ ಬೊಮ್ಮಾಯಿಯವರನ್ನು ಕಂಗಾಲು ಮಾಡಿತು. ಪುನೀತ್ ರಾಜ್‌ಕುಮಾರ್, ವಿಕ್ರಮ್ ಆಸ್ಪತ್ರೆಯಲ್ಲಿ ಜೀವನ್ಮರಣದ ಮಧ್ಯೆ ಹೋರಾಟ ಮಾಡುತ್ತಿರುವ ಮಾಹಿತಿ ಬಂದಿತ್ತು. ತಮ್ಮ ಕುರ್ಚಿಯನ್ನು ಹಿಂದಕ್ಕೆ ಸರಿಸಿ, ಒಂದು ಕ್ಷಣ ಗರಬಡಿದವರಂತೆ ಕುಳಿತರು. ಬಳಿಕ ಸಭೆ ಮುಂದುವರಿಸಿದರು. ಸಭೆ ಮುಗಿಯುವ ತನಕ ಆ ಸುದ್ದಿಯನ್ನು ಅವರು ಯಾರಿಗೂ ಹೇಳಲಿಲ್ಲ. ಸಭೆ ಮುಗಿಯುತ್ತಿದ್ದಂತೆ ತಕ್ಷಣವೇ ಆಸ್ಪತ್ರೆಗೆ ದೌಡಾಯಿಸಿದರು.

ಆಸ್ಪತ್ರೆಯಲ್ಲಿ ಸುಮಾರು ಎರಡು ತಾಸು ಪುನೀತ್ ಕುಟುಂಬದ ಸದಸ್ಯರ ಜತೆ ಮಾತುಕತೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪುನೀತ್ ಯುವ ಜನತೆಯ ಕಣ್ಮಣಿಯಾಗಿದ್ದರು. ಅವರು ಚಿಕ್ಕ ವಯಸ್ಸಿನಲ್ಲಿ ಸಾಕಷ್ಟು ಸಾಧನೆಗಳನ್ನು ಮಾಡಿದ್ದರು. ಅವರಲ್ಲಿ ನಾಯಕತ್ವದ ಗುಣವೂ ಇತ್ತು. ಈಗಾಗಲೇ ಸಾಧಿಸಿದ್ದಕ್ಕಿಂತ ಭವಿಷ್ಯದಲ್ಲಿ ಹೆಚ್ಚು ಸಾಧಿಸುವ ಸಾಮರ್ಥ್ಯ ಅವರಲ್ಲಿ ಇತ್ತು’ ಎಂದರು.

‘ಕೇವಲ ಎರಡು ತಿಂಗಳ ಹಿಂದಷ್ಟೇ ‘ಡಾ.ರಾಜ್‌ಕುಮಾರ್ ಲರ್ನಿಂಗ್ ಆ್ಯಪ್’ ಉದ್ಘಾಟನೆ ಮಾಡಿದ್ದೆ. ಶೈಕ್ಷಣಿಕ ಆ್ಯಪ್ ಪುನೀತ್ ಅವರ ಪ್ರಯತ್ನದ ಫಲವಾಗಿತ್ತು. ಆ ಕಾರ್ಯಕ್ರಮದಲ್ಲಿ ಎರಡು ಗಂಟೆ ಕಳೆದಿದ್ದೆ. ವಿಧಿ ತುಂಬಾ ಕ್ರೂರ, ಈ ನಷ್ಟವನ್ನು ತುಂಬಲು ಸಾಧ್ಯವಿಲ್ಲ’ ಎಂದು ಗದ್ಗದಿತರಾಗಿ ಸ್ಮರಿಸಿಕೊಂಡರು.

ಬೊಮ್ಮಾಯಿ ಅವರು ದಿನದ ಎಲ್ಲ ಅಧಿಕೃತ ಕಾರ್ಯಕ್ರಮಗಳನ್ನು ರದ್ದುಗೊಳಿಸಿದರು. ಶನಿವಾರಕ್ಕೆ ನಿಗದಿಯಾಗಿದ್ದ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ಪ್ರವಾಸವನ್ನು ರದ್ದುಗೊಳಿಸಿದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಂತಿಮ ಸ್ಪರ್ಶ
ಕಾಳಿ ಪೂಜೆಗೆ ಪೂರ್ವಭಾವಿಯಾಗಿ ಕೋಲ್ಕತ್ತದಲ್ಲಿ ಕಲಾವಿದರೊಬ್ಬರು ಶುಕ್ರವಾರ ಕಾಳಿ ಮೂರ್ತಿಗೆ ಅಂತಿಮ ಸ್ಪರ್ಶ ನೀಡಿದರು



ಶನಿವಾರ, ಅಕ್ಟೋಬರ್ 30, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 301 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಶಾಲೆಗಳಿಗೆ ಹೋಗಲಾರಂಭಿಸಿದ ಚಿಣ್ಣರಲ್ಲಿ ಹೇಳಿಕೊಳ್ಳಲಾರದ ಭೀತಿ ಮನೆ ಮಾಡಿದೆ. ಅವರಲ್ಲಿ ಸುರಕ್ಷತೆಯ ಭಾವನೆಯನ್ನು ಪೋಷಕರು ಹೇಗೆ ಮೂಡಿಸಬೇಕು?



ಇಂಟರ್‌ಪೋಲ್‌ಗೆ ಶಿಫಾರಸು ಮಾಡಿದ್ದೇ ನಾವು: ಬೊಮ್ಮಾಯಿ 5

‘ಎಸ್‌ಟಿಗೆ ಶೇ 7.5 ಮೀಸಲಾತಿಗೆ ಬದ್ಧ’ 5

ಸೆನ್ಸೆಕ್ಸ್	ನಿಫ್ಟಿ	₹/$
59,306 ▼	17,671 ▼	74.88 ▲

ಒಳ ಪುಟಗಳು



ಪಪ್ಪಿ ಕೊಡುವೆವು ಎದ್ದು ಬನ್ನಿ ‘ಅಪ್ಪು’ 9
ಅಪ್ಪನಿಗೆ ತಕ್ಕ ಮಗ ‘ಅಪ್ಪು’ 8
ಜೊತೆಗಿರದ ಜೀವ ಎಂದಿಗೂ ಜೀವಂತ 8
ಗುಪ್ತಚರ ಮಾಹಿತಿ ಹಂಚಿಕೆಗೆ ಅಮೆರಿಕದ ಜತೆ ಒಪ್ಪಂದ 10
ವೆಸ್ಟ್ ಇಂಡೀಸ್‌ಗೆ ರೋಚಕ ಜಯ 12

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕಾಣದಂತೆ ಮಾಯವಾದನು...


17-03-1975 - 29-10-2021

• ರಘುನಾಥ ಚ.ಹ.

ಕನ್ನಡ ಸಿನಿಮಾ ಎನ್ನುವ ಬಳ್ಳಿಯಲ್ಲಿ ನಸುಬಿರಿದ ಹೂವೊಂದು ಇದ್ದಕ್ಕಿದ್ದಂತೆ ಉದುರಿ ಮಣ್ಣು ಸೇರಿದಂತೆ ಪುನೀತ್ ರಾಜ್‌ಕುಮಾರ್ ಸಾವಿಗೀಡಾಗಿದ್ದಾರೆ.

ನಾಲ್ಕು ದಶಕಗಳ ಹಿಂದೆ ತೆರೆಕಂಡ ‘ಚಲಿಸುವ ಮೋಡಗಳು’ ಸಿನಿಮಾದಲ್ಲಿ ‘ಕಾಣದಂತೆ ಮಾಯವಾದನು’ ಎಂದು ಹಾಡಿದ್ದ ಚೋಟುದ್ದದ ಹುಡುಗ, ‘ಅಣ್ಣಾಬಾಂಡ್’ ರೂಪದಲ್ಲಿ ಅದೇ ಹಾಡನ್ನು ಹೊಸಧಾಟಿಯಲ್ಲಿ ಹಾಡಿದ್ದರು. ಈಗ ತಾವೇ ಮಾಯವಾಗಿದ್ದಾರೆ.

ಪುನೀತ್ ಎಂದಾಕ್ಷಣ ಕಣ್ಮುಂದೆ ಬರುವುದು ಅವರ ನಗು ಮತ್ತು ಮಗುತನ. ಕುಟುಂಬದವರ ನೆಚ್ಚಿನ ‘ಅಪ್ಪು’ ನಲವತ್ತಾರು ವರ್ಷಗಳ ನಂತರವೂ ತಮ್ಮ ಆತ್ಮೀಯರಿಗೆ–ಅಭಿಮಾನಿಗಳಿಗೆ ಅಪ್ಪು ಆಗಿಯೇ ಉಳಿದದ್ದು ಅವರೊಳಗಿದ್ದ ಮಗುತನದಿಂದಲೇ. ಅಪ್ಪು ಎನ್ನುವುದು ಅವರ ಹೆಸರಷ್ಟೇ ಆಗಿರಲಿಲ್ಲ; ಎಲ್ಲರನ್ನೂ ಸ್ನೇಹದಿಂದ ಅಪ್ಪುವ ಗುಣವೂ ಆಗಿತ್ತು. ರಾಜ್‌ಕುಮಾರ್ ನಂತರ ಮಕ್ಕಳನ್ನು ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿಗಳನ್ನಾಗಿ ಪಡೆದ ಅಗ್ಗಳಿಕೆ ಅವರದ್ದೇ ಇರಬೇಕು. ಸ್ಟಾರ್ ನಟರ ಹೊಸ ಸಿನಿಮಾಗಳು ತೆರೆಕಂಡ ಸಂದರ್ಭದಲ್ಲಿ ಚಿತ್ರಮಂದಿರ-ಗಳಲ್ಲಿ ಉನ್ಮಾದದ ಯುವಕರೇ ಕಿಕ್ಕಿರಿಯುವುದು ಸಾಮಾನ್ಯ. ಆದರೆ, ಪುನೀತ್ ಸಿನಿಮಾಗಳು ತೆರೆಕಂಡಾಗ ಮಹಿಳೆಯರನ್ನೂ ಮಕ್ಕಳನ್ನೂ ಕಾಣಬಹುದಿತ್ತು. ನಿಜವಾದ ಅರ್ಥದಲ್ಲಿ ಅವರು ‘ಕುಟುಂಬದ ನಟ.’ ಮಕ್ಕಳಿಂದ ಹಿರಿಯ ನಾಗರಿಕರವರೆಗೆ ಎಲ್ಲ ವರ್ಗದ ಪ್ರೇಕ್ಷಕರನ್ನೂ ರಂಜಿಸಬಲ್ಲ, ಮನಸೂರೆಗೊಳ್ಳಬಲ್ಲ ಸಾಮರ್ಥ್ಯ ಅವರಿಗಿತ್ತು.

ಸಿನಿಮಾಗಳಲ್ಲಿನ ‘ಪವರ್ ಸ್ಟಾರ್’ ಮೈಕಟ್ಟು ನಿಜಜೀವನದಲ್ಲಿ ಕಾಣಿಸುತ್ತಿರಲಿಲ್ಲ. ಅವರದು ತಿದ್ದಿತೀಡಿದ ಪುತ್ಥಳಿಯಂಥ ಮೈಕಟ್ಟಾಗಿರಲಿಲ್ಲ.

7ನೇ ಪುಟ ನೋಡಿ

ರಾಜ್ ಸ್ಮಾರಕದ ಆವರಣದಲ್ಲಿ ಅಂತ್ಯಕ್ರಿಯೆ

ಬೆಂಗಳೂರು: ಚಿತ್ರನಟ ಪುನೀತ್ ರಾಜ್‌ಕುಮಾರ್ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ನಗರದ ಕಂಠೀರವ ಸ್ಟುಡಿಯೋ ಆವರಣದಲ್ಲಿ-ರುವ ಡಾ.ರಾಜ್‌ಕುಮಾರ್ ಪ್ರತಿಷ್ಠಾನದ ಸ್ವಾಮ್ಯದಲ್ಲಿರುವ ಜಮೀನಿನಲ್ಲಿ ನೆರವೇರಿಸಲು ನಿರ್ಧರಿಸಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸೂಚನೆಯಂತೆ ಡಾ.ರಾಜ್ ಸ್ಮಾರಕದ ಆವರಣದಲ್ಲಿ ಪುನೀತ್ ಅಂತ್ಯಕ್ರಿಯೆಗೆ ಅವಕಾಶ ಕಲ್ಪಿಸಿ ಸರ್ಕಾರ ಆದೇಶ ಹೊರಡಿಸಿದೆ.

ದಿನವಿಡೀ ದರ್ಶನಕ್ಕೆ ಅವಕಾಶ: ಕಂಠೀರವ ಒಳಾಂಗಣ ಕ್ರೀಡಾಂಗಣದ ಆವರಣದಲ್ಲಿ ಶನಿವಾರ ಇಡೀ ದಿನ ಪುನೀತ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶವಿದೆ.

ವಿಶೇಷ ಪುಟಗಳು 7, 7B, 8, 9

ಪುನೀತ್ ರಾಜ್‌ಕುಮಾರ್ ನಿಧನ


ಬೆಂಗಳೂರು: ವರನಟ ದಿವಂಗತ ಡಾ.ರಾಜ್‌ಕುಮಾರ್ ಅವರ ಕಿರಿಯ ಪುತ್ರ, ನಟ ಪುನೀತ್ ರಾಜ್‌ಕುಮಾರ್ (46) ತೀವ್ರ ಹೃದಯಾಘಾತದಿಂದ ಶುಕ್ರವಾರ ನಿಧನರಾದರು.

ಅವರಿಗೆ ಪತ್ನಿ ಅಶ್ವಿನಿ, ಪುತ್ರಿಯರಾದ ವಂದಿತಾ ಮತ್ತು ಧೃತಿ, ಸಹೋದರರಾದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಸಹೋದರಿಯರಾದ ಪೂರ್ಣಿಮಾ ಮತ್ತು ಲಕ್ಷ್ಮೀ ಇದ್ದಾರೆ. 1975ರ ಮಾರ್ಚ್ 17ರಂದು ಚೆನ್ನೈನಲ್ಲಿ ಜನಿಸಿದ್ದ ಪುನೀತ್ ಬಾಲನಟನಾಗಿ ಬೆಳ್ಳಿತೆರೆಗೆ ಪ್ರವೇಶಿಸಿದ್ದರು. ‘ಅಪ್ಪು’ ಸಿನಿಮಾದ ಮೂಲಕ ನಾಯಕನಾಗಿ ತೆರೆಯ ಮೇಲೆ ಕಾಣಿಸಿಕೊಂಡ ಅಪ್ಪು, 29 ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಅಲ್ಲದೇ ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ರಾಯಭಾರಿಯಾಗಿ, ಸಾಮಾಜಿಕ ಜಾಗೃತಿಯ ಪ್ರಚಾರಕರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.



ವಿಧಿಯ ಕ್ರೂರ ಆಟವು ಮೇರು ಮತ್ತು ಪ್ರತಿಭಾವಂತ ನಟ ಪುನೀತ್ ರಾಜ್‌ಕುಮಾರ್ ಅವರನ್ನು ನಮ್ಮಿಂದ ಕಸಿದುಕೊಂಡಿದೆ. ಇದು ಸಾಯುವ ವಯಸ್ಸಲ್ಲ. ಮುಂಬರುವ ಪೀಳಿಗೆಯೂ ಅವರ ಅದ್ಭುತ ವ್ಯಕ್ತಿತ್ವ ಮತ್ತು ಕಾರ್ಯಕ್ಕಾಗಿ ಅವರನ್ನು ಪ್ರೀತಿಯಿಂದ ಸ್ಮರಿಸಲಿದೆ.

ನರೇಂದ್ರ ಮೋದಿ, ಪ್ರಧಾನಿ



ಮೊದಲು ನಾನು ಹೋಗಬೇಕಿತ್ತು. ನನ್ನನ್ನು ಅವನೇ ಎರಡು ಸಲ ಆಸ್ಪತ್ರೆಗೆ ದಾಖಲಿಸಿ ಉಳಿಸಿದ್ದ. ಆದರೆ, ನನಗೆ ಆತನನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅಪ್ಪ–ಅಮ್ಮನನ್ನು ನೋಡಲು ಬೇಗ ಹೋಗಿದ್ದಾನೆ. ಕಲಾವಿದರಿಗೆ ಸಾವಿಲ್ಲ. ಅವನು ಜೊತೆಗಿರುತ್ತಾನೆ, ಅವನ ಸಿನಿಮಾ ಜೊತೆಗಿರುತ್ತದೆ. ಅಪ್ಪು ನಮಗೆ ಚಿಕ್ಕಮಗುವಿದ್ದಂತೆ. ಅಪ್ಪ ಅಮ್ಮನನ್ನು ನೋಡಬೇಕೆಂದು ಬೇಗ ಹೋಗಿದ್ದಾನೆ ಎನಿಸುತ್ತಿದೆ. ಅಪ್ಪಾಜಿ ಮೃತಪಟ್ಟ ವೇಳೆ ನಡೆಯಬಾರದ ಘಟನೆ ನಡೆದಿತ್ತು. ನಮ್ಮಿಂದ ಇನ್ನೊಂದು ಜೀವಕ್ಕೆ ನೋವಾಗಬಾರದು.

ರಾಘವೇಂದ್ರ ರಾಜ್‌ಕುಮಾರ್, ನಟ

ಬೆಳಿಗ್ಗೆಯಿಂದ ಸಂಜೆವರೆಗಿನ ಬೆಳವಣಿಗೆ

ಬೆಳಿಗ್ಗೆ 7.33: ‘ಭಜರಂಗಿ–2’ ಸಿನಿಮಾಕ್ಕೆ ಶುಭಹಾರೈಸಿ ಟ್ವೀಟ್ ಮಾಡಿದ್ದ ಪುನೀತ್

8.30: ಜಿಮ್‌ನಲ್ಲಿ ವ್ಯಾಯಾಮ

10.30: ಕಾಣಿಸಿಕೊಂಡ ಎದೆನೋವು

10.45: ಡಾ.ರಮಣ ರಾವ್ ಕ್ಲಿನಿಕ್‌ನಲ್ಲಿ ಇಸಿಜಿ

11.30: ವಿಕ್ರಮ್ ಆಸ್ಪತ್ರೆಗೆ ದಾಖಲು

11.40: ತುರ್ತು ಚಿಕಿತ್ಸಾ ವಿಭಾಗದಲ್ಲಿ ಚಿಕಿತ್ಸೆ

ಮಧ್ಯಾಹ್ನ **2.30:** ಮೃತಪಟ್ಟಿರುವ ಬಗ್ಗೆ ಆಸ್ಪತ್ರೆಯಿಂದ ಅಧಿಕೃತ ಘೋಷಣೆ

2.50: ನೇತ್ರದಾನ ಪ್ರಕ್ರಿಯೆ ಪೂರ್ಣ

3.30: ಆಸ್ಪತ್ರೆಯಿಂದ ಸದಾಶಿವನಗರದ ಮನೆಗೆ ಪಾರ್ಥಿವ ಶರೀರ ರವಾನೆ

ಸಂಜೆ **7.10:** ಅಂತಿಮ ದರ್ಶನಕ್ಕೆ ಕಂಠೀರವ ಕ್ರೀಡಾಂಗಣ ತಲುಪಿದ ಪಾರ್ಥಿವ ಶರೀರ

ಸರ್ಕಾರಿ ಜಾಲತಾಣದಿಂದ ₹46 ಕೋಟಿ ದೋಚಿದ್ದ !

ಬೆಂಗಳೂರು: ‘ಬಿಟ್ ಕಾಯಿನ್’ ಹಗರಣದ ಮೂಲ ಸೂತ್ರದಾರ ಎನ್ನಲಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26), ರಾಜ್ಯ ಸರ್ಕಾರದ ಜಾಲತಾಣವನ್ನೇ ಹ್ಯಾಕ್ ಮಾಡಿ ₹ 46 ಕೋಟಿ ದೋಚಿದ್ದನೆಂಬ ಸಂಗತಿ ಸಿಸಿಬಿ ಪೊಲೀಸರ ತನಿಖೆಯಿಂದ ಪತ್ತೆಯಾಗಿದೆ. 5

ಹಾನಗಲ್, ಸಿಂದಗಿ: ಇಂದು ಮತದಾನ

ಹಾವೇರಿ: ಹಾನಗಲ್ ವಿಧಾನ ಸಭಾ ಕ್ಷೇತ್ರದ ಉಪಚುನಾವಣೆಯ ಮತದಾನ ಅ.30ರಂದು ನಡೆಯಲಿದ್ದು, ಅಂತಿಮ ಕಣದಲ್ಲಿರುವ 13 ಅಭ್ಯರ್ಥಿಗಳ ಹಣೆಬರಹವನ್ನು ಮತದಾರರು ನಿರ್ಧರಿಸಲಿದ್ದಾರೆ. 5

ಪಿಎಫ್: ಶೇ 8.5ರಷ್ಟು ಬಡ್ಡಿ ನೀಡಲು ಕೇಂದ್ರ ಒಪ್ಪಿಗೆ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಠೇವಣಿಗಳಿಗೆ 2020–21ನೇ ಸಾಲಿಗೆ ಶೇಕಡ 8.5ರಷ್ಟು ಬಡ್ಡಿ ನೀಡಲು ಕೇಂದ್ರ ಸರ್ಕಾರವು ಶುಕ್ರವಾರ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ. 10

ಆಡಳಿತ ಸೂಚ್ಯಂಕ: ರಾಜ್ಯದ ಸ್ಥಾನ ಕುಸಿತ

ಬೆಂಗಳೂರು: ಸಾರ್ವಜನಿಕ ಆಡಳಿತ ಸೂಚ್ಯಂಕದಲ್ಲಿ (ಪಿಎಐ) ಈ ಬಾರಿ ಕೇರಳ ಅಗ್ರ ಸ್ಥಾನ ಪಡೆದಿದೆ. ಕೇರಳವು ದೊಡ್ಡ ರಾಜ್ಯಗಳ ವಿಭಾಗದಲ್ಲಿ ಈ ಸ್ಥಾನ ಪಡೆದಿದ್ದು, ಕರ್ನಾಟಕವು ಏಳನೇ ಸ್ಥಾನ ಪಡೆದಿದೆ. 10

ಆರ್‌ಬಿಐ ಗವರ್ನರ್ ಆಗಿ ದಾಸ್ ಅಧಿಕಾರ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರ ಅಧಿಕಾರ ಅವಧಿಯನ್ನು ಕೇಂದ್ರ ಸರ್ಕಾರವು ಮೂರು ವರ್ಷಗಳಿಗೆ ವಿಸ್ತರಿಸಿದೆ. 10

ಜಿಯೊ ಸ್ಮಾರ್ಟ್‌ಫೋನ್ ಬೆಲೆ ₹ 6,499

ಬೆಂಗಳೂರು: ರಿಲಯನ್ಸ್ ಜಿಯೊ ಕಂಪನಿಯು ಗೂಗಲ್ ಜೊತೆಗೂಡಿ ತಾನು ಅಭಿವೃದ್ಧಿಪಡಿಸಿರುವ ಹೊಸ ಸ್ಮಾರ್ಟ್‌ಫೋನ್ ಬೆಲೆಯನ್ನು ಬಹಿರಂಗಪಡಿಸಿದೆ. ಈ ಫೋನ್‌ನ ಬೆಲೆ ₹ 6,499. 10

ಆರ್ಯನ್ ಇಂದು ಬಿಡುಗಡೆ ಸಾಧ್ಯತೆ

ಮುಂಬೈ: ಬಾಲಿವುಡ್ ಸೂಪರ್ ಸ್ಟಾರ್ ಶಾರುಕ್ ಖಾನ್ ಮಗ, ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಪ್ರಕರಣದ ಆರೋಪಿ ಆರ್ಯನ್ ಖಾನ್ ಅವರಿಗೆ ಬಾಂಬೆ ಹೈಕೋರ್ಟ್ ಜಾಮೀನು ನೀಡಿದ್ದರೂ ಅವರ ಬಿಡುಗಡೆ ಶುಕ್ರವಾರ ಸಾಧ್ಯವಾಗಿಲ್ಲ. ಶನಿವಾರ ಬಿಡುಗಡೆ ಆಗಬಹುದು ಎನ್ನಲಾಗಿದೆ. 10

ಬಿಟ್ ಕಾಯಿನ್ ಹಗರಣ ● ತಪ್ಪೊಪ್ಪಿಗೆ ನೀಡಿರುವ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕಿ

ಸರ್ಕಾರಿ ಜಾಲತಾಣದಿಂದ ₹46 ಕೋಟಿ ದೋಚಿದ್ದ!

● ಸಂತೋಷ ಜಿಗಳಿಕೊಪ್ಪ



ಶ್ರೀಕೃಷ್ಣ

ಬೆಂಗಳೂರು: 'ಬಿಟ್ ಕಾಯಿನ್' ಹಗರಣದ ಮೂಲ ಸೂತ್ರಧಾರ ಎನ್ನಲಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26), ರಾಜ್ಯ ಸರ್ಕಾರದ ಜಾಲತಾಣವನ್ನೇ ಹ್ಯಾಕ್ ಮಾಡಿ ₹ 46 ಕೋಟಿ ದೋಚಿದ್ದನ್ನು ಸಂಗತಿ ಸಿಸಿಬಿ ಪೊಲೀಸರ ತನಿಖೆಯಿಂದ ಪತ್ತೆಯಾಗಿದೆ.

ಕೆಂಪೇಗೌಡನಗರ ಠಾಣೆಯಲ್ಲಿ ದಾಖಲಾಗಿದ್ದ ಡ್ರಗ್ಸ್ ಪ್ರಕರಣದಲ್ಲಿ ಶ್ರೀಕೃಷ್ಣನನ್ನು ಬಂಧಿಸಿದ್ದ ಸಿಸಿಬಿ ಪೊಲೀಸರು, ಆತನ ಹಿನ್ನೆಲೆ ಕೇಳಿ ದಂಗಾಗಿದ್ದರು. 'ಅಂತರರಾಷ್ಟ್ರೀಯ ಹ್ಯಾಕರ್' ಎಂಬ ಮಾಹಿತಿ ಗೊತ್ತಾಗುತ್ತಿದ್ದಂತೆ, ಹೊಸ ಆಯಾಮದಲ್ಲೇ ತನಿಖೆ ಮುಂದುವರಿಸಿದ್ದರು.

'ಬಿಟ್ ಕಾಯಿನ್' ಅಕ್ರಮದಲ್ಲಿ ಶ್ರೀಕಿ ಭಾಗಿಯಾಗಿರುವ ಮಾಹಿತಿ ಲಭ್ಯವಾಗುತ್ತಿದ್ದಂತೆ, ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಕಾಟನ್‌ಪೇಟೆ ಠಾಣೆಯಲ್ಲಿ ಎರಡನೇ ಎಫ್‌ಐಆರ್ ದಾಖಲಿಸಲಾಗಿತ್ತು. ಇದರ ತನಿಖೆ ಕೈಗೊಂಡಿದ್ದ ಸಿಸಿಬಿ ಪೊಲೀಸರು, ಹಲವು ಹ್ಯಾಕಿಂಗ್ ಪ್ರಕರಣಗಳನ್ನು ಪತ್ತೆ ಮಾಡಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಪ್ರಜಾವಾಣಿ ವಿಶೇಷ

ರಾಜ್ಯ ಸರ್ಕಾರದ ಇ-ಸಂಗ್ರಹಣಾ ಪೋರ್ಟಲ್ (https://eproc.karnataka.gov.in) ಜಾಲತಾಣ ಹ್ಯಾಕ್ ಬಗ್ಗೆಯೂ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

'ನೆದರ್ಲೆಂಡ್ಸ್‌ನಲ್ಲಿ ಬಿ.ಎಸ್ಸಿ ಮುಗಿಸಿ ಬೆಂಗಳೂರಿಗೆ ಬಂದಿದ್ದ ಶ್ರೀಕೃಷ್ಣ, ಸ್ಥಳೀಯ ಸ್ನೇಹಿತರ ಜೊತೆ ಹೆಚ್ಚು ಓಡಾಡುತ್ತಿದ್ದ. ಆತನಿಗೆ ಸುನೀಶ್ ಹೆಗ್ಡೆ, ಹೇಮಂತ್ ಮುದ್ದಪ್ಪ ಹಾಗೂ ಇತರರ ಪರಿಚಯವಾಗಿತ್ತು. ಅವರ ಜೊತೆ ಸೇರಿಕೊಂಡು ರಾಜ್ಯ ಸರ್ಕಾರದ ಇ-ಸಂಗ್ರಹಣಾ ಪೋರ್ಟಲ್ ಜಾಲತಾಣವನ್ನು ಮೂರು ಬಾರಿ (2019ರ ಮೇ ಹಾಗೂ ಜೂನ್‌ನ) ಶ್ರೀಕೃಷ್ಣ ಹ್ಯಾಕ್ ಮಾಡಿದ್ದ. ಒಂದು ಪ್ರಯತ್ನ ವಿಫಲವಾಗಿತ್ತು. ಎರಡು ಪ್ರಯತ್ನದಲ್ಲಿ ಯಶಸ್ಸು ಸಾಧಿಸಿದ್ದ' ಎಂಬ ಮಾಹಿತಿ ಪಟ್ಟಿಯಲ್ಲಿದೆ.

'ಉತ್ತರಾಖಂಡದ ಹಿಮಾಲಯಸ್ ಆನಂದ ಸ್ಪಾ ಆ್ಯಂಡ್ ರೆಸಾರ್ಟ್‌ನಲ್ಲಿ ಇದ್ದುಕೊಂಡು ಆರೋಪಿ ಈ ಕೃತ್ಯ ಎಸಗಿದ್ದ. ಟೆಂಡರ್ ಬಿಡ್ ಮಾಡಿದ್ದ ಗುತ್ತಿಗೆದಾರರ ವೈಯಕ್ತಿಕ ಮಾಹಿತಿ ಹಾಗೂ ಅವರು ಬ್ಯಾಂಕ್‌ಗೆ ಪಾವತಿಸಿದ್ದ ಹಣದ ಮಾಹಿತಿಯನ್ನು ಶ್ರೀಕೃಷ್ಣ ಕದ್ದಿದ್ದ. ಇದಕ್ಕಾಗಿ ಆರೋಪಿ, 'ಎಸ್‌ಕ್ಯೂಎಲ್ ಮ್ಯಾಪ್' ತಂತ್ರಜ್ಞಾನ ಬಳಸಿದ್ದ.'

'ಜಾಲತಾಣದ ದತ್ತಾಂಶ ಬಳಸಿಕೊಂಡು, ಆರೋಪಿ ಹೇಮಂತ್ ಮುದ್ದಪ್ಪ ನೀಡಿದ್ದ ಎರಡು ಖಾತೆಗಳಿಗೆ ಪ್ರತ್ಯೇಕವಾಗಿ ₹ 18 ಕೋಟಿ ಹಾಗೂ ₹ 28 ಕೋಟಿಯನ್ನು ಆರೋಪಿ ವರ್ಗಾವಣೆ ಮಾಡಿದ್ದ. ಅದರಲ್ಲಿ ₹ 2 ಕೋಟಿಯನ್ನು ಆಯೂಬ್ ಎಂಬಾತ ಪಡೆದಿದ್ದ. ಆದರೆ, ಆತ ಯಾರು ಎಂಬುದನ್ನು ಶ್ರೀಕೃಷ್ಣ ಬಾಯ್ಬಿಟ್ಟಿಲ್ಲ' ಎಂಬ ಸಂಗತಿಯೂ ಆರೋಪ ಪಟ್ಟಿಯಲ್ಲಿದೆ.

'ಜಾಲತಾಣ ಹ್ಯಾಕ್ ಆಗಿರುವ ಮಾಹಿತಿ ತಿಳಿಯುತ್ತಿದ್ದಂತೆ ಇ-ಸಂಗ್ರಹಣಾ ಪೋರ್ಟಲ್ ಘಟಕದ ಆರ್ಥಿಕ ಸಲಹೆಗಾರ್ತಿ ಎಸ್.ಕೆ. ಶೈಲಜಾ, ಸಿಐಡಿ ಸೈಬರ್ ವಿಭಾಗಕ್ಕೆ ದೂರು ನೀಡಿದ್ದರು. ಅಕ್ರಮ ವರ್ಗಾವಣೆಯಿಂದ ಸರ್ಕಾರಕ್ಕೆ ₹ 1.05 ಕೋಟಿ ನಷ್ಟವಾಗಿರುವುದಾಗಿ ತಿಳಿಸಿದ್ದರು. ತನಿಖೆ ಕೈಗೊಂಡಾಗಲೇ, ₹ 46 ಕೋಟಿ ಅಕ್ರಮ ವರ್ಗಾವಣೆ ಆಗಿರುವುದು ಗೊತ್ತಾಗಿದೆ. ಇದೇ ಹಣ, ಬಿಟ್ ಕಾಯಿನ್ ಆಗಿ ಪರಿವರ್ತನೆ ಆಗಿರುವ ಅನುಮಾನ ಇದೆ. ಆರೋಪಿ ಸಹ ತನ್ನ ಹೇಳಿಕೆಯಲ್ಲಿ ಇದನ್ನು ಒಪ್ಪಿಕೊಂಡಿದ್ದಾನೆ' ಎಂಬ ಮಾಹಿತಿಯೂ ದೋಷಾರೋಪ ಪಟ್ಟಿಯಲ್ಲಿದೆ.

ಇ-ಸಂಗ್ರಹಣಾ ಪೋರ್ಟಲ್ ಜಾಲತಾಣ ಹ್ಯಾಕ್ ಪ್ರಕರಣದ ತನಿಖೆಯನ್ನು ಸದ್ಯ ಸಿಐಡಿ ಸೈಬರ್ ಕ್ರೈಂ ವಿಭಾಗದ ಅಧಿಕಾರಿಗಳು ನಡೆಸುತ್ತಿದ್ದಾರೆ. ಈ ಪ್ರಕರಣದಲ್ಲಿ ಶ್ರೀಕೃಷ್ಣನನ್ನು ವಿಚಾರಣೆ ಸಹ ನಡೆಸಿದ್ದಾರೆ ಎಂಬ ಮಾಹಿತಿಯನ್ನೂ ಸಿಸಿಬಿ ಪೊಲೀಸರು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.

'ಬಿಟ್ ಕಾಯಿನ್ ಯಾರಿಗೆಷ್ಟು ಪಾಲು'



ಏನಿದು ಬಿಟ್ ಕಾಯಿನ್?

ರೂಪಾಯಿ ಹಾಗೂ ಡಾಲರ್‌ನಂತೆಯೇ 'ಬಿಟ್ ಕಾಯಿನ್' (ಬಿಟಿಸಿ) ಕೂಡ ಒಂದು ನಾಣ್ಯ. ಆದರೆ, ಇದು ನಿಗೂಢ ಹಣ (ಕ್ರಿಪ್ಟೊ ಕರೆನ್ಸಿ). ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿ ಅಂಕಿಗಳ ರೂಪದಲ್ಲಷ್ಟೇ ಇದನ್ನು ನಾವು ನೋಡಬಹುದು. 2009ರಲ್ಲಿ 'ಕ್ರಿಪ್ಟೊಗ್ರಫಿ' ಎಂಬ ತಂತ್ರಜ್ಞಾನದ ಮೂಲಕ ಈ ಡಿಜಿಟಲ್ ಕರೆನ್ಸಿಯನ್ನು ಸೃಷ್ಟಿಸಲಾಯಿತು. ಬ್ಯಾಂಕ್ ಹಾಗೂ ಇತರೆ ಯಾವುದೇ ಮಧ್ಯವರ್ತಿಗಳಿಲ್ಲದೆ, ಅತಿ ಕಡಿಮೆ ವರ್ಗಾವಣೆ ಶುಲ್ಕದಲ್ಲಿ ವ್ಯವಹಾರ ನಡೆಸಲು ಬಿಟ್ ಕಾಯಿನ್ ಬಳಕೆಯಾಗುತ್ತದೆ.

'ಇಂಥ ಬಿಟ್ ಕಾಯಿನ್‌ಗಳನ್ನು ಬಳಕೆದಾರರೇ ಸೃಷ್ಟಿಸುತ್ತಾರೆ. ಈ ಪ್ರಕ್ರಿಯೆ 'ಮೈನಿಂಗ್' ಎನ್ನಲಾಗುತ್ತದೆ. ಚಿನ್ನವನ್ನು ಗಣಿಗಾರಿಕೆ ಮಾಡುವಂತೆ ಬಿಟ್ ಕಾಯಿನ್‌ಗಳ ಗಣಿಗಾರಿಕೆಯೂ ನಡೆಯುತ್ತದೆ. ಇದಕ್ಕಾಗಿ ಕಂಪ್ಯೂಟರ್‌ನಲ್ಲಿ ಕೆಲ ಗಣಿತದ ಸಮಸ್ಯೆಗಳನ್ನು ಬಗೆಹರಿಸಬೇಕಾಗುತ್ತದೆ. ಇದಕ್ಕೆ 'ಹ್ಯಾಷ್ ಫಂಕ್ಷನ್' ಎನ್ನಲಾಗುತ್ತದೆ. ಈ ಹಂತ ಪ್ರವೇಶಿಸಿದರೆ, ಬಿಟ್ ಕಾಯಿನ್ ವ್ಯವಹಾರ ನಡೆಸುವ ಕಂಪನಿ ಜತೆ ಸಂಪರ್ಕ ಸಾಧ್ಯವಾಗುತ್ತದೆ. ಆ ನಂತರ ಕಂಪನಿ ಹಾಗೂ ಗ್ರಾಹಕರ ನಡುವೆ ಬಿಟ್ ಕಾಯಿನ್ ಮಾರಾಟ-ಖರೀದಿಯ ಗೋಪ್ಯ ವ್ಯವಹಾರ ನಡೆಯುತ್ತದೆ.

ಬಿಟ್ ಕಾಯಿನ್ ವ್ಯವಹಾರಕ್ಕೆ ಬಳಕೆದಾರರ ವೈಯಕ್ತಿಕ ವಿವರದ ಅಗತ್ಯವಿಲ್ಲ. ಅನಾಮಧೇಯರಾಗಿ ವ್ಯವಹಾರ ನಡೆಸಬಹುದು. ಇದರಿಂದಾಗಿ ಬಿಟ್ ಕಾಯಿನ್ ವ್ಯವಹಾರ ನಡೆಸುವವರನ್ನು ಪತ್ತೆ ಹಚ್ಚುವುದು ತೀರಾ ಕಷ್ಟ. ಯಾವುದೇ ರಾಷ್ಟ್ರದ ಏಜೆನ್ಸಿಗಳ ನಿಗಾ ಅಥವಾ ಹಣಕಾಸು ನಿಯಮಗಳು, ಆದಾಯ ತೆರಿಗೆ ಇಲಾಖೆಯ ಅಡ್ಡಿ-ಆತಂಕಗಳು ಬಿಟ್ ಕಾಯಿನ್‌ಗೆ ಸದ್ಯಕ್ಕಿಲ್ಲ. ಇದೇ ಕಾರಣಕ್ಕೆ, ದಂಧೆಕೋರರಿಗೆ ಬಿಟ್ ಕಾಯಿನ್ ವ್ಯವಹಾರ ಸಲೀಸಾಗಿದೆ.

ಮುಖ್ಯಾಂಶಗಳು

- ಮೂರು ಬಾರಿ ಹ್ಯಾಕ್
- ಕೃತ್ಯಕ್ಕೆ ಸ್ನೇಹಿತರ ಸಹಕಾರ
- ಎರಡು ಖಾತೆಗಳಿಗೆ ಹಣ ವರ್ಗಾವಣೆ

ಹಾನಗಲ್, ಸಿಂದಗಿ: ಇಂದು ಮತದಾನ

ಪ್ರಜಾವಾಣಿ ವಾರ್ತೆ

ಹಾವೇರಿ: ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಮತದಾನ ಅ.30ರಂದು ನಡೆಯಲಿದ್ದು, ಅಂತಿಮ ಕಣದಲ್ಲಿರುವ 13 ಅಭ್ಯರ್ಥಿಗಳ ಹಣೆಬರಹವನ್ನು ಮತದಾರರು ನಿರ್ಧರಿಸಲಿದ್ದಾರೆ.

ಹಾನಗಲ್ ಪಟ್ಟಣದ ಕುಮಾರೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಶುಕ್ರವಾರ ನಡೆದ ಮಸ್ಟರಿಂಗ್ ಕಾರ್ಯಕ್ರಮದ ಚಟುವಟಿಕೆಗಳನ್ನು ಜಿಲ್ಲಾ ಚುನಾವಣಾಧಿಕಾರಿ ಸಂಜಯ ಶೆಟ್ಟೆಣ್ಣವರ ವೀಕ್ಷಿಸಿದರು.

'ಮಸ್ಟರಿಂಗ್ ಕೇಂದ್ರದಿಂದ ವಿದ್ಯುನ್ಮಾನ ಮತಯಂತ್ರಗಳನ್ನು ನಿಯೋಜಿತ ಸಿಬ್ಬಂದಿಯೊಂದಿಗೆ ಎಲ್ಲ ಮತಗಟ್ಟೆಗಳಿಗೆ ಈಗಾಗಲೇ ಕಳುಹಿಸಲಾಗಿದೆ. ಅ.30ರ ಬೆಳಿಗ್ಗೆ 5.45ರಿಂದ ಬೆಳಿಗ್ಗೆ 6.15ರವರೆಗೆ 'ಅಣುಕು ಮತದಾನ' ನಡೆಯಲಿದೆ. ಬೆಳಿಗ್ಗೆ 7ರಿಂದ ಸಂಜೆ 7ರವರೆಗೆ ಮತದಾನ ಪ್ರಕ್ರಿಯೆ ನಡೆಯಲಿದೆ. ಸುಗಮ ಮತ್ತು ಶಾಂತಿಯುತ ಮತದಾನಕ್ಕೆ ಅಗತ್ಯವಾದ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ' ಎಂದು ಜಿಲ್ಲಾ ಚುನಾವಣಾಧಿಕಾರಿ ತಿಳಿಸಿದರು.



ಹಾನಗಲ್ ಪಟ್ಟಣದ ಕುಮಾರೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಮಸ್ಟರಿಂಗ್ ಕೇಂದ್ರದಿಂದ ಉಪಚುನಾವಣೆಯ ವಿವಿಧ ಮತಗಟ್ಟೆಗಳಿಗೆ ನಿಯೋಜಿತ ಚುನಾವಣಾ ಸಿಬ್ಬಂದಿ ವಿದ್ಯುನ್ಮಾನ ಮತಯಂತ್ರಗಳೊಂದಿಗೆ ಶುಕ್ರವಾರ ತೆರಳಿದರು– ಪ್ರಜಾವಾಣಿ ಚಿತ್ರ

263 ಮತಗಟ್ಟೆಗಳಿಗೆ ಕರ್ತವ್ಯಕ್ಕೆ 1,155 ಸಿಬ್ಬಂದಿ ನಿಯೋಜಿಸಲಾಗಿದೆ. 1,05,525 ಪುರುಷ ಹಾಗೂ 98,953 ಮಹಿಳೆ ಹಾಗೂ ಮೂರು ಜನ ಇತರ ಮತದಾರರು ಸೇರಿ ಒಟ್ಟು 2,04,481 ಮತದಾರರಿದ್ದಾರೆ. 83 ಸೇವಾ ಮತದಾರರಿದ್ದಾರೆ.

ಕಣದಲ್ಲಿರುವ ಅಭ್ಯರ್ಥಿಗಳ ವಿವರ:

ನಿಯಾಜ್‌ಶೇಖ್ (ಜೆಡಿಎಸ್), ಶಿವರಾಜ ಸಜ್ಜನರ (ಬಿಜೆಪಿ), ಶ್ರೀನಿವಾಸ ಮಾನೆ (ಕಾಂಗ್ರೆಸ್), ಉಡಚಪ್ಪ ಉದ್ದನಕಾಲ (ಕೆಆರ್‌ಎಸ್), ಫಕ್ಕೀರಗೌಡ್ರ ಗಾಜೀಗೌಡ್ರ (ರೈತ ಭಾರತ ಪಕ್ಷ), ಶಿವಕುಮಾರ ತಳವಾರ (ಲೋಕಶಕ್ತಿ) ಹಾಗೂ ಪಕ್ಷೇತರ ಅಭ್ಯರ್ಥಿಗಳಾದ ಉಮೇಶ ದೈವಜ್ಞ, ನಜೀರ್ ಅಹಮದ್ ಸವಣೂರ, ಪರಶುರಾಮ ಹೊಂಗಲ, ಸಿದ್ದಪ್ಪ ಕಲ್ಲಪ್ಪ ಪೂಜಾರ, ಎಸ್.ಎಸ್. ದೊಡ್ಡಲಿಂಗಣ್ಣವರ, ಕೋತಂಬರಿ ಸೋಮಶೇಖರ ಮಹಾದೇವಪ್ಪ, ಹೊನ್ನಪ್ಪ ಅಕ್ಕಿವಳ್ಳಿ ಸೇರಿದಂತೆ 13 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಸಿಂದಗಿ: 57 ಅತೀ ಸೂಕ್ಷ್ಮ ಮತಗಟ್ಟೆ

ಸಿಂದಗಿ(ವಿಜಯಪುರ): ಸಿಂದಗಿ ವಿಧಾನಸಭಾ ಮತಕ್ಷೇತ್ರದ ಉಪಚುನಾವಣೆಗೆ ಶನಿವಾರ ಬೆಳಿಗ್ಗೆ 7ರಿಂದ ಸಂಜೆ 7ರವರೆಗೆ ಮತದಾನ ನಡೆಯಲಿದೆ.

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಕಣದಲ್ಲಿ ಆರು ಜನ ಅಭ್ಯರ್ಥಿಗಳಿದ್ದಾರೆ. ಜೊತೆಗೆ 'ನೋಟಾ' ಚಲಾವಣೆಗೆ ಅವಕಾಶ ಕಲ್ಪಿಸಲಾಗಿದೆ. ಮತದಾನಕ್ಕಾಗಿ 101 ಗ್ರಾಮಗಳ ವ್ಯಾಪ್ತಿಯಲ್ಲಿ 297 ಮತಗಟ್ಟೆಗಳನ್ನು ತೆರೆಯಲಾಗಿದೆ. ಇದರಲ್ಲಿ 57 ಅತೀ ಸೂಕ್ಷ್ಮ ಮತ ಕೇಂದ್ರಗಳನ್ನು ಗುರುತಿಸಲಾಗಿದೆ.

ಸಿಂದಗಿ ಟಿಪ್ಪುಸುಲ್ತಾನ್ ವೃತ್ತ, ಡಾ.ಅಂಬೇಡ್ಕರ್ ವೃತ್ತ, ಬಸವೇಶ್ವರ ವೃತ್ತ ಹಾಗೂ ಆಲಮೇಲ, ತಾಂಬಾ, ದೇವಣಗಾಂವ ಮತಗಟ್ಟೆಗಳನ್ನು ಅತೀ ಸೂಕ್ಷ್ಮ ಪ್ರದೇಶ ಎಂದು ಗುರುತಿಸಲಾಗಿದೆ. ಈ ಪ್ರದೇಶಗಳಲ್ಲಿ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ.

1302 ಜನ ಸಿಬ್ಬಂದಿ ಚುನಾವಣೆ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಭದ್ರತೆಗಾಗಿ 980 ಪೊಲೀಸರನ್ನು ನಿಯೋಜಿಸಲಾಗಿದೆ.

ಹಿಂದುಳಿದ ಜಾತಿಗಳ ಒಕ್ಕೂಟದ ಧರಣಿ ರದ್ದು

ಶಿವಮೊಗ್ಗ: ನಗರದ ನೆಹರೂ ಕ್ರೀಡಾಂಗಣದಲ್ಲಿ ಅ.30ರಂದು ಆಯೋಜಿಸಿದ್ದ ಹಿಂದುಳಿದ ಜಾತಿಗಳ ಒಕ್ಕೂಟದ ಧರಣಿ ಕಾರ್ಯಕ್ರಮವನ್ನು ನಟ ಪುನೀತ್ ರಾಜ್‌ಕುಮಾರ್ ನಿಧನದ ಕಾರಣಕ್ಕೆ ರದ್ದುಪಡಿಸಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ವಿ.ರಾಜು ತಿಳಿಸಿದ್ದಾರೆ.


'ಎಸ್‌ಟಿಗೆ ಶೇ 7.5 ಮೀಸಲಾತಿಗೆ ಬದ್ಧ'

ಅರಸೀಕೆರೆ: 'ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲೇ ಪರಿಶಿಷ್ಟ ವರ್ಗಕ್ಕೆ ಶೇ 7.5 ಮೀಸಲಾತಿ ಕಲ್ಪಿಸಲು ಬದ್ಧರಾಗಿದ್ದೇವೆ' ಎಂದು ಸಾರಿಗೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಶ್ರೀರಾಮುಲು ಭರವಸೆ ನೀಡಿದರು.

ತಾಲ್ಲೂಕಿನ ಕಣಕಟ್ಟೆ ಹೋಬಳಿಯ ಕಲ್ಲುಸಾದರಹಳ್ಳಿ ಗ್ರಾಮದಲ್ಲಿ ವಾಲ್ಮೀಕಿ ಸಮಾಜದ ವತಿಯಿಂದ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕೊರೊನಾ ಕಾರಣದಿಂದ ಗ್ರಾಮೀಣ ಪ್ರದೇಶಗಳಿಗೆ ನಿಲ್ಲಿಸಿದ್ದ ಸಾರಿಗೆ ಬಸ್‌ಗಳ ಸಂಚಾರವನ್ನು ಶೀಘ್ರವೇ ಪುನಃ ಆರಂಭಿಸಲಾಗುವುದು' ಎಂದು ತಿಳಿಸಿದರು.

'ಇಂಟರ್‌ಪೋಲ್‌ಗೆ ಶಿಫಾರಸು ಮಾಡಿದ್ದೇ ನಾವು'



ಬೊಮ್ಮಾಯಿ

ಬೆಂಗಳೂರು: ಹ್ಯಾಕರ್ ಶ್ರೀಕೃಷ್ಣ ಭಾಗಿಯಾಗಿರುವ ಬಿಟ್ ಕಾಯಿನ್ ಮತ್ತು ಹ್ಯಾಕಿಂಗ್ ಹಗರಣಕ್ಕೆ ಸಂಬಂಧಿಸಿದಂತೆ ಇಂಟರ್‌ಪೋಲ್ ತನಿಖೆಗೆ ಶಿಫಾರಸು ಮಾಡಿರುವುದೇ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಈ ಪ್ರಕರಣ ಕುರಿತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಟ್ವೀಟ್‌ಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, 'ಬಿಟ್ ಕಾಯಿನ್ ಮತ್ತು ಹ್ಯಾಕಿಂಗ್ ಹಗರಣ ಅಂತರರಾಷ್ಟ್ರೀಯ ಮಟ್ಟದವರೆಗೆ ವ್ಯಾಪಿಸಿದೆ. ಈ ಬಗ್ಗೆ ನಾವೇ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಸಿಬಿಐ ಇಂಟರ್‌ಪೋಲ್ ಘಟಕಕ್ಕೆ ಪತ್ರ ಬರೆದು ತನಿಖೆಗೆ ಶಿಫಾರಸು ಮಾಡಿದ್ದೇವೆ' ಎಂದರು.


> **ಬಿಟ್ ಕಾಯಿನ್ ಪ್ರಕರಣದಿಂದ ಕಾಂಗ್ರೆಸ್ ಮುಖಂಡರಿಗೆ ಸಂಕಟ ಎದುರಾಗಬಹುದೇ ಹೊರತು ಸರ್ಕಾರಕ್ಕೆ ಯಾವುದೇ ಕಂಟಕ ಇಲ್ಲ**
> **ಆರಗ ಜ್ಞಾನೇಂದ್ರ,** ಗೃಹ ಸಚಿವ

ಶ್ರೀಕೃಷ್ಣ ವಿರುದ್ಧದ ಪ್ರಕರಣಗಳ ಕುರಿತು ಹೆಚ್ಚಿನ ತನಿಖೆಗೆ 2021ರ ಮಾರ್ಚ್ 3ರಂದು ಇ.ಡಿಗೆ ಶಿಫಾರಸು ಮಾಡಲಾಗಿತ್ತು. 2021ರ ಏಪ್ರಿಲ್ 28ರಂದು ಸಿಬಿಐ ಇಂಟರ್‌ಪೋಲ್ ಘಟಕಕ್ಕೆ ಶಿಫಾರಸು ಮಾಡಲಾಗಿತ್ತು. ಬಳಿಕ ಅವರು ಕೆಲವು ಸ್ಪಷ್ಟನೆ ಕೋರಿದ್ದರು. ಅವುಗಳನ್ನೂ ಒದಗಿಸಲಾಗಿತ್ತು. ಈಗ ಎರಡೂ ತನಿಖಾ ಸಂಸ್ಥೆಗಳು ತನಿಖೆ ಆರಂಭಿಸಿವೆ ಎಂದು ಹೇಳಿದರು.

ಪ್ರಕರಣದಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಅಂತಹ ಉದ್ದೇಶವಿದ್ದರೆ ಇ.ಡಿ ಮತ್ತು ಸಿಬಿಐ ಇಂಟರ್‌ಪೋಲ್ ಘಟಕಕ್ಕೆ ಶಿಫಾರಸು ಮಾಡಲಾಗುತ್ತಿತ್ತೇ ಎಂದು ಕೇಳಿದರು.

2018ರಲ್ಲಿ ಯು.ಬಿ ಸಿಟಿಯಲ್ಲಿ ನಡೆದ ದಾಂಧಲೆ ಪ್ರಕರಣದಲ್ಲಿ ಶ್ರೀಕೃಷ್ಣ ಜಾಮೀನು ಪಡೆಯಲು ಅವಕಾಶ ದೊರಕಿತ್ತು. ಜಾಮೀನು ದೊರೆತ ಬಳಿಕವೂ ವಿಚಾರಣೆಗೆ ಅವಕಾಶವಿತ್ತು. ಆಗಲೂ ಸರಿಯಾಗಿ ಕ್ರಮ ಕೈಗೊಂಡಿರಲಿಲ್ಲ ಎಂದು ದೂರಿದರು.

2020ರಲ್ಲಿ ಆತನ ಬಂಧನವಾದ ಬಳಿಕವೇ ಎಲ್ಲವೂ ಬಯಲಿಗೆ ಬಂತು. ಸಿಸಿಬಿ ಪೊಲೀಸರು ಮೂರು ಪ್ರಕರಣ ದಾಖಲಿಸಿದ್ದಾರೆ. ರಾಜ್ಯ ಸರ್ಕಾರದ ಇ-ಸಂಗ್ರಹಣಾ ಪೋರ್ಟಲ್ ಹ್ಯಾಕ್ ಮಾಡಿದ್ದ ಪ್ರಕರಣದ ತನಿಖೆಯನ್ನು ಸಿಐಡಿ ನಡೆಸುತ್ತಿದೆ ಎಂದರು.



ಸುಭಾಷಿತ

ನಮ್ಮ ಸಮಸ್ಯೆಗಳು ಸೃಷ್ಟಿಯಾದಾಗ ನಾವು ಹೊಂದಿದ್ದ ಆಲೋಚನೆಯಲ್ಲೇ ಮುಂದಡಿ ಇಟ್ಟರೆ, ಆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಅಸಾಧ್ಯ.

–ಆಲ್ಬರ್ಟ್ ಐನ್‌ಸ್ಟೀನ್

ಸಿಬಿಐ ಮೇಲೆ ರಾಜ್ಯಗಳ ನಿರ್ಬಂಧ ದುರ್ಬಳಕೆ ತಡೆಯಲು ಸಕಾರಣದ ನಡೆ

ಕೆಲವು ರಾಜ್ಯ ಸರ್ಕಾರಗಳು ತಮ್ಮ ರಾಜ್ಯಗಳಲ್ಲಿ ತನಿಖೆ ನಡೆಸಲು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ನೀಡಿದ್ದ ಮುಕ್ತ ಅನುಮತಿಯನ್ನು ಹಿಂದಕ್ಕೆ ಪಡೆದಿವೆ. ರಾಜ್ಯ ಸರ್ಕಾರಗಳ ಈ ಕ್ರಮವನ್ನು ಸುಪ್ರೀಂ ಕೋರ್ಟ್‌ನಲ್ಲಿ ಸಿಬಿಐ ಪ್ರಶ್ನಿಸಿದೆ. ಈ ವಿದ್ಯಮಾನವು ಸಿಬಿಐ ವಿಚಾರವಾಗಿ ರಾಜ್ಯಗಳು ಹೊಂದಿರುವ ಅಧಿಕಾರದ ಬಗ್ಗೆ ಚರ್ಚೆಗಳನ್ನು ಹುಟ್ಟುಹಾಕಿದೆ. ರಾಜ್ಯ ಸರ್ಕಾರಗಳು ತಮ್ಮ ರಾಜ್ಯದ ಗಡಿಯೊಳಗೆ ತನಿಖೆ ನಡೆಸಲು ಹಾಗೂ ಕ್ರಮ ಜರುಗಿಸಲು ನೀಡಿದ್ದ ಮುಕ್ತ ಅನುಮತಿಯನ್ನು ಹಿಂದಕ್ಕೆ ಪಡೆದಿರುವುದರಿಂದ ತನ್ನ ಕೆಲಸಕ್ಕೆ ಅಡ್ಡಿಯಾಗಿದೆ ಎಂದು ಕೋರ್ಟ್‌ಗೆ ಸಿಬಿಐ ವಿವರಿಸಿದೆ. ಕೇಂದ್ರ ಸರ್ಕಾರವು ಸಿಬಿಐ ವಾದಕ್ಕೆ ಬೆಂಬಲವಾಗಿ ನಿಂತಿದೆ. ಸಿಬಿಐಗೆ ತನಿಖೆ ನಡೆಸಲು ಇರುವ ಅನುಮತಿಯನ್ನು ಹಿಂದಕ್ಕೆ ಪಡೆದುಕೊಳ್ಳುವ ಪ್ರಶ್ನಾತೀತ ಅಧಿಕಾರವು ರಾಜ್ಯ ಸರ್ಕಾರಗಳಿಗೆ ಇಲ್ಲ ಎಂದು ಕೇಂದ್ರವು ಕೋರ್ಟ್‌ಗೆ ಹೇಳಿದೆ. ಪಶ್ಚಿಮ ಬಂಗಾಳ ಸರ್ಕಾರವು ಸಿಬಿಐ ವಿರುದ್ಧ ಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಯೊಂದರ ವಿಚಾರಣೆ ವೇಳೆ ಈ ವಿಷಯಗಳು ಪ್ರಸ್ತಾಪ ಆಗಿವೆ. ಸಿಬಿಐನ ಕಾರ್ಯಚಟುವಟಿಕೆಗಳು ದೆಹಲಿ ವಿಶೇಷ ಪೊಲೀಸ್ ಕಾಯ್ದೆಯ ವ್ಯಾಪ್ತಿಗೆ ಬರುತ್ತವೆ. ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಕೇರಳ ಸೇರಿದಂತೆ ಕೆಲವು ರಾಜ್ಯಗಳು ಸಿಬಿಐಗೆ ನೀಡಿದ್ದ ಮುಕ್ತ ಅನುಮತಿಯನ್ನು ಹಿಂದಕ್ಕೆ ಪಡೆದಿವೆ. ಹೀಗೆ ಅನುಮತಿ ಹಿಂಪಡೆದ ನಂತರದಲ್ಲಿ ಸಿಬಿಐ, ಆ ರಾಜ್ಯ ಸರ್ಕಾರದ ಕಡೆಯಿಂದ ನಿರ್ದಿಷ್ಟ ಪ್ರಕರಣವೊಂದರ ತನಿಖೆಗೆ ಕೋರಿಕೆ ಬಂದರೆ ಅಥವಾ ನ್ಯಾಯಾಲಯದ ಆದೇಶ ಬಂದರೆ ಮಾತ್ರ ತನಿಖೆ ನಡೆಸಬಹುದು.



ರಾಜ್ಯಗಳ ವ್ಯಾಪ್ತಿಯಲ್ಲಿ ಸಿಬಿಐ ಕಾರ್ಯಾಚರಣೆ ಮೇಲೆ ನಿಯಂತ್ರಣ ಹೇರಿರುವುದು ತರ್ಕಬದ್ಧವಾಗಿಯೇ ಇದೆ.

ಕಾನೂನಿನ ಈ ಅಂಶವು ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ ಪ್ರಮುಖವಾದುದು. ಇದು ರಾಜ್ಯಗಳ ಅಧಿಕಾರವನ್ನು ರಕ್ಷಿಸುತ್ತದೆ. ಅಷ್ಟೇ ಅಲ್ಲ, ಕೇಂದ್ರ ಸರ್ಕಾರವು ತನ್ನ ಅಧಿಕಾರವನ್ನು ಮನಸೋಇಚ್ಛೆ ಬಳಸಿಕೊಳ್ಳುವುದನ್ನು ತಡೆಯುತ್ತದೆ. ಪೊಲೀಸ್ ವ್ಯವಸ್ಥೆಯನ್ನು ನಿರ್ವಹಿಸುವುದು ಹಾಗೂ ಆ ವ್ಯವಸ್ಥೆಯ ಮೂಲಕ ಆಗಬೇಕಿರುವ ಕೆಲಸಗಳನ್ನು ನಿಯಂತ್ರಿಸುವುದು ರಾಜ್ಯಗಳ ಅಧಿಕಾರ ವ್ಯಾಪ್ತಿಯಲ್ಲಿದೆ. ಹೀಗಾಗಿ, ರಾಜ್ಯಗಳ ವ್ಯಾಪ್ತಿಯಲ್ಲಿ ಸಿಬಿಐ ಕಾರ್ಯಾಚರಣೆಗಳ ಮೇಲೆ ನಿಯಂತ್ರಣ ಹೇರಿರುವುದು ತರ್ಕ ಬದ್ಧವಾಗಿಯೇ ಇದೆ. ಅಲ್ಲದೆ, ಒಕ್ಕೂಟ ವ್ಯವಸ್ಥೆಯ ನಿಯಮಗಳಿಗೆ ಅನುಗುಣವಾಗಿಯೇ ಇದೆ. ಸುಪ್ರೀಂ ಕೋರ್ಟ್ ಈ ಹಿಂದೆ ಹೇಳಿದಂತೆ ಸಿಬಿಐ ‘ಪಂಜರದ ಗಿಣಿ’ ಯಂತೆ ಇದೆ. ಅದು ಕೇಂದ್ರ ಸರ್ಕಾರ ಹೇಳಿದಂತೆ ಕೇಳುತ್ತಿದೆ. ಈ ತನಿಖಾ ದಳವನ್ನು ಕೇಂದ್ರ ಸರ್ಕಾರವು ದುರ್ಬಳಕೆ ಮಾಡಿಕೊಂಡಿರುವ ಹತ್ತು ಹಲವು ನಿದರ್ಶನಗಳು ಇವೆ. ವಿರೋಧ ಪಕ್ಷಗಳಿಗೆ ಸೇರಿದ ನಾಯಕರನ್ನು ಬೆದರಿಸಲು ಇದನ್ನು ಬಳಸಿಕೊಳ್ಳಲಾಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಅಧಿಕಾರದಲ್ಲಿ ಇರುವ ಬಿಜೆಪಿಯೇತರ ಪಕ್ಷಗಳ ನೇತೃತ್ವದ ಸರ್ಕಾರಗಳಿಗೆ ತೊಂದರೆ ಕೊಡಲು ಈ ತನಿಖಾ ದಳವನ್ನು ಬಳಸಿಕೊಂಡಿರುವುದೂ ಇದೆ. ಕೇಂದ್ರದ ಮಾಜಿ ಹಣಕಾಸು ಸಚಿವ, ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಅವರ ಬಂಧನ, ಸುಶಾಂತ್ ಸಿಂಗ್ ಸಾವಿನ ಪ್ರಕರಣವನ್ನು ಸಿಬಿಐಗೆ ವಹಿಸಿದ್ದು, ತೃಣಮೂಲ ಕಾಂಗ್ರೆಸ್ಸಿನ ಕೆಲವು ನಾಯಕರ ವಿರುದ್ಧದ ಪ್ರಕರಣಗಳು, ಮಹಾರಾಷ್ಟ್ರದಲ್ಲಿ ಎನ್‌ಸಿಪಿಯ ಕೆಲವು ನಾಯಕರ ವಿರುದ್ಧದ ಪ್ರಕರಣಗಳು, ಹರಿಯಾಣದ ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡ ಅವರ ಮೇಲಿನ ಪ್ರಕರಣ ಕೂಡ ಕೆಲವು ಉದಾಹರಣೆಗಳು.

ಸಿಬಿಐಗೆ ನೀಡಿದ್ದ ಮುಕ್ತ ಅನುಮತಿಯನ್ನು ಹಿಂದಕ್ಕೆ ಪಡೆದಿರುವ ರಾಜ್ಯಗಳಲ್ಲಿ ಹೆಚ್ಚಿನ ಕಡೆ ಬಿಜೆಪಿಯೇತರ ಪಕ್ಷಗಳು ಸರ್ಕಾರದ ಚುಕ್ಕಾಣಿ ಹಿಡಿದಿವೆ. ಕೇಂದ್ರ ಸರ್ಕಾರವು ಈ ತನಿಖಾ ದಳವನ್ನು ತಮ್ಮ ವಿರುದ್ಧ ದುರ್ಬಳಕೆ ಮಾಡಿಕೊಳ್ಳದಿರಲಿ ಎಂಬ ಉದ್ದೇಶದಿಂದಲೇ ಈ ರಾಜ್ಯ ಸರ್ಕಾರಗಳು ಈ ರೀತಿ ಮಾಡಿವೆ ಎಂಬುದು ಸ್ಪಷ್ಟ. ಈ ರೀತಿಯ ಕ್ರಮಕ್ಕೆ ಮುಂದಾಗುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ಕಾನೂನು ನೀಡಿದೆ. ಕೇಂದ್ರವು ಸಿಬಿಐ ಅನ್ನು ವ್ಯಾಪಕವಾಗಿ ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಇಂಥದ್ದೊಂದು ಕಾನೂನಿನ ಅಗತ್ಯವನ್ನು ಇನ್ನಷ್ಟು ಒತ್ತಿ ಹೇಳುತ್ತಿದೆ. ಇದು ಒಕ್ಕೂಟ ವ್ಯವಸ್ಥೆಯಲ್ಲಿ ಅಂತರ್ಗತವಾಗಿ ಇರುವ, ಅಧಿಕಾರದ ಸಮತೋಲನದ ಒಂದು ಭಾಗ. ಕೆಲವು ರಾಜ್ಯ ಸರ್ಕಾರಗಳು ಸಿಬಿಐ ಮೇಲೆ ಅಥವಾ ಕೇಂದ್ರ ಸರ್ಕಾರದ ಮೇಲೆ ವಿಶ್ವಾಸ ತೋರಿಸಿಲ್ಲ ಎಂದಾದರೆ, ಅದಕ್ಕೆ ದೂಷಣೆಯನ್ನು ಬೇರೆಯವರ ಮೇಲೆ ಹೊರಿಸಲು ಆಗದು. ತಾವು ಹೊಂದಿರುವ ಶಾಸನಾತ್ಮಕ ಅಧಿಕಾರವೊಂದನ್ನು ರಾಜ್ಯ ಸರ್ಕಾರಗಳು ಬಿಟ್ಟುಕೊಡಬೇಕು ಎಂದು ನಿರೀಕ್ಷಿಸಲಾಗದು. ತಮ್ಮ ಅಧಿಕಾರವನ್ನು ಬಳಸಿಕೊಂಡಿರುವುದಕ್ಕೆ ಅವುಗಳನ್ನು ದೂಷಿಸಲು ಕೂಡ ಸಾಧ್ಯವಿಲ್ಲ.

ಬೈಗುಳಗಳ ಮೂಲಕ ಒಣಪ್ರತಿಷ್ಠೆ ಕಾಪಾಡಿಕೊಳ್ಳಬಹುದು, ಜನರಿಗೆ ಬಿಟ್ಟಿ ಮನರಂಜನೆಯನ್ನೂ ನೀಡಬಹುದು!

ಅಕಟಕಟಾ ಶಬ್ದದ ಲಜ್ಜೆಯ ನೋಡಾ...



ವಿಶ್ಲೇಷಣೆ

ಡಾ. ಟಿ.ಎನ್.ವಾಸುದೇವಮೂರ್ತಿ

‘**ನಿರಕ್ಷರಕುಕ್ಷಿಗಳ** ಪೈಕಿ ರಾಜಕೀಯ ನಿರಕ್ಷರಕುಕ್ಷಿ ಪರಮ ಮೂರ್ಖನಾಗಿರುತ್ತಾನೆ. ಏಕೆಂದರೆ ಅವನು ಏನನ್ನೂ ಆಲಿಸಲಾರ, ಏನನ್ನೂ ನುಡಿಯಲಾರ, ಯಾವುದರಲ್ಲೂ ಪಾಲ್ಗೊಳ್ಳಲಾರ. ಅವನಿಗೆ ಬದುಕಿನ ಮೌಲ್ಯ ಹಾಗಿರಲಿ; ಅಕ್ಕಿ, ಬೇಳೆ, ಮನೆಬಾಡಿಗೆ, ಇಂಧನ, ಔಷಧ ಮುಂತಾದ ದೈನಂದಿನ ಅಗತ್ಯಗಳ ಬೆಲೆಯಾಗಲಿ, ಈ ಮಾರುಕಟ್ಟೆ ಧಾರಣೆಗಳು ರಾಜಕೀಯ ನಿರ್ಧಾರಗಳನ್ನು ಅವಲಂಬಿಸಿರುತ್ತವೆ ಎಂಬ ಸಂಗತಿಯಾಗಲಿ ಗೊತ್ತಿರುವುದಿಲ್ಲ. ಅವನು ತಾನು ರಾಜಕೀಯ ಚರ್ಚೆಗಳನ್ನು ದ್ವೇಷಿಸುತ್ತೇನೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಷ್ಟು ತಿಳಿಗೇಡಿತನ ಬೆಳೆಸಿಕೊಂಡಿರುತ್ತಾನೆ. ತನ್ನ ರಾಜಕೀಯ ಅಜ್ಞಾನದಿಂದಾಗಿಯೇ ಸಮಾಜದಲ್ಲಿ ವೇಶ್ಯಾಲಯಗಳು, ಅನಾಥಾಲಯಗಳು, ಭ್ರಷ್ಟಾಚಾರದ ಅಡ್ಡೆಗಳು ಸ್ಥಾಪನೆಯಾಗುತ್ತಿವೆ ಎಂಬ ತಿಳಿವಳಿಕೆಯೂ ಅವನಿಗಿರುವುದಿಲ್ಲ’ ಎಂದು ಜರ್ಮನ್ ನಾಟಕಕಾರ ಬ್ರೆಕ್ಟ್ ತನ್ನ ಲೇಖನವೊಂದರಲ್ಲಿ ಬರೆದಿದ್ದಾನೆ.

ಆದರೆ, ಇಂದು ಕರ್ನಾಟಕದ ರಾಜಕಾರಣದ ಬಗ್ಗೆ ಯಾರಾದರೂ ಗಂಭೀರವಾಗಿ ಮಾತುಕತೆ ನಡೆಸಲಾರಂಭಿಸಿದರೆ ಅಂತಹವನು ‘ಪ್ರಜ್ಞಾವಂತ’ ಎನಿಸಿಕೊಳ್ಳುವ ಬದಲು ನಗೆಗೀಡಾಗುವ ಸಂಭವವಿದೆ. ನಮ್ಮ ರಾಜಕಾರಣಿಗಳು ಹಗುರವಾದ ಮಾತುಗಳಲ್ಲಿ, ಜಾತಿವಾದಿ ನಿಂದನೆಗಳಲ್ಲಿ, ಅಭಿರುಚಿಹೀನವಾದ ಬೈಗುಳಗಳಲ್ಲಿ ಪೈಪೋಟಿಗೆ ನಿಂತಿರುವಂತಿದೆ.


ಸಾಮಾನ್ಯ ಉಪಚುನಾವಣೆಗೂ ಅನೈತಿಕವಾಗಿ ಸಂಪಾದಿಸಿದ ಭ್ರಷ್ಟ ಹಣವನ್ನು ಸುರಿಯಬಲ್ಲ ಲೂಟಿಕೋರರೇ ಎಲ್ಲ ರಾಜಕೀಯ ಪಕ್ಷಗಳಲ್ಲೂ ತುಂಬಿರುವಾಗ, ಅಂತಹವರಿಂದ ಸದಭಿರುಚಿಯ ಮಾತುಕತೆ, ಸಂವಾದವನ್ನು ನಿರೀಕ್ಷಿಸುವುದು ವ್ಯರ್ಥ. ಅಧಿಕಾರ ವಹಿಸಿಕೊಂಡ ಪಕ್ಷದ ದೃಢ ಸಂಕಲ್ಪದಿಂದ ಮಾತ್ರ ಒಂದು ಶುದ್ಧವಾದ, ಭ್ರಷ್ಟಾಚಾರ ರಹಿತವಾದ ರಾಜಕೀಯ ವಾತಾವರಣ ನಿರ್ಮಾಣ ಸಾಧ್ಯ. ಅಂಥ ವಾತಾವರಣದಲ್ಲಿ ಒಂದು ಅರ್ಥಪೂರ್ಣ ಚರ್ಚೆ, ಸಂವಾದ ನಡೆಯಬಹುದು. ಹಣ, ಅಧಿಕಾರವನ್ನು ಹೊಂದುವುದೇ ಎಲ್ಲ ನಾಯಕರಿಗೂ ಮೊದಲ ಆದ್ಯತೆಯಾಗಿರುವಾಗ ತತ್ವ- ಸಿದ್ಧಾಂತ ಆಧರಿಸಿದ ಚರ್ಚೆ ಸಾಧ್ಯವಿಲ್ಲ.

ಅಧಿಕಾರ ವಹಿಸಿಕೊಂಡವರು ಪ್ರಜೆಗಳಲ್ಲಿ ‘ಈತ ನಮ್ಮೆಲ್ಲರ ಪ್ರತಿನಿಧಿ’ ಎಂಬ ನಂಬಿಕೆಯನ್ನು ಮೂಡಿಸಬೇಕಾಗುತ್ತದೆ. ಆದರೆ ಚುನಾವಣೆಗಳು ಬಂದಾಗ ಸರ್ಕಾರವನ್ನು ಪ್ರತಿನಿಧಿಸುವ ಮುಖ್ಯಮಂತ್ರಿ, ಪ್ರಧಾನಮಂತ್ರಿ ತಮ್ಮ ಕರ್ತವ್ಯವನ್ನು ಮರೆತು ತಾವು ನಂಬಿರುವ ರಾಜಕೀಯ ಪಕ್ಷ, ಪ್ರಣಾಳಿಕೆಗಳ ಪ್ರಚಾರಕರಂತೆ ವರ್ತಿಸುವುದು ಒಳ್ಳೆಯ ಬೆಳವಣಿಗೆಯಲ್ಲ. ನಾಡಿನ ರಾಜಕಾರಣಕ್ಕೆ ದಿಕ್ಕು ದೆಸೆ ತೋರಿಸಬೇಕಾದ ನಾಡಿನ ಹಿರಿಯ ನಾಯಕರೊಬ್ಬರು ಮೊನ್ನೆ ದಿನ ‘ನಾನು ನನ್ನ ಆಯುಷ್ಯದ ಕೊನೆಯ ಘಟ್ಟದಲ್ಲಿದ್ದೇನೆ, ಮತಭಿಕ್ಷೆ ನೀಡಿ ನನ್ನನ್ನು ಉದ್ಧರಿಸಿ’ ಎಂದು ದೈನ್ಯಭಾವದಿಂದ ಬೇಡಿಕೊಳ್ಳುತ್ತಿದ್ದರು. ಅವರ ಈ ದೀನವಾಕ್ಯಗಳು ನಮ್ಮ ರಾಜಕಾರಣದ ದುರ್ಭಿಕ್ಷ ಕಾಲಕ್ಕೆ ಹಿಡಿದ ಕೈಗನ್ನಡಿಯಾಗಿವೆ. ನಾಯಕನಾದವನು ಅನುಯಾಯಿಯನ್ನು ಮುನ್ನಡೆಸುವ ಬದಲು ಅನುಯಾಯಿಯನ್ನೇ ಅನುಸರಿಸುವ, ಅನುಯಾಯಿಯ ಮುಲಾಜಿನಲ್ಲೇ ಕೊನೆತನಕ ಇದ್ದುಬಿಡಲು ಬಯಸುವ ಕಾಲಘಟ್ಟದಲ್ಲಿ ನಾವಿದ್ದೇವೆ.

ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡಿದ್ದಾಯಿತು, ಈಗ ನಮ್ಮ ರಾಜಕಾರಣಿಗಳು ಜಾತಿಯ ಹೆಸರಿನಲ್ಲಿ ಕೀಳುಮಟ್ಟದ ಭಾಷೆ, ಬೈಗುಳಗಳನ್ನು ಬಳಸಲಾರಂಭಿಸಿದ್ದಾರೆ. ಭಾವೋದ್ರೇಕಕ್ಕೊಳಗಾದಾಗ ನಮಗರಿವಿಲ್ಲದೆಯೇ ನಮ್ಮ ಬಾಯಿಂದ ಅವಹೇಳನದ ಹಗುರವಾದ ಮಾತುಗಳು ಬರಬಹುದು. ಅಂತಹ ಸಂದರ್ಭದಲ್ಲಿ ಮರುಕ್ಷಣವೇ ನಮಗೆ ಪಶ್ಚಾತ್ತಾಪವಾಗುತ್ತದೆ. ಆದರೆ ಇವರ ಬಾಯಿಂದ ಬರುತ್ತಿರುವ ಮಾತುಗಳು ಇಂತಹ ಭಾವೋದ್ರೇಕದ ಮಾತುಗಳಲ್ಲ. ಆದ್ದರಿಂದ ಇವರಲ್ಲಿ ಪಶ್ಚಾತ್ತಾಪದ ಲಕ್ಷಣಗಳೂ ಕಾಣಿಸುತ್ತಿಲ್ಲ. ಮತ್ತೊಬ್ಬನನ್ನು ನಿಂದಿಸಿ ಬಳಿಕ ಪಶ್ಚಾತ್ತಾಪಪಡದೇ ಸಂತೃಪ್ತಿ ಪಟ್ಟುಕೊಳ್ಳುವುದು ವಿಕೃತಿಯಾಗಿದೆ.

ನಾಡಿನ ಯುವಜನ ಜಾತಿವಾದ, ಕೋಮುವಾದದ ಪ್ರೇರಣೆಯಿಂದ ಹಿಂಸಾರಭಸಮತಿಗಳಾಗಿ ಬೆಳೆಯುತ್ತಿರುವಾಗ, ನಾಯಕರೆನಿಸಿಕೊಂಡವರು ಸಂಯಮ, ಸಮಸ್ಥಿತಿಯನ್ನು ಕಾಯ್ದುಕೊಳ್ಳುವ ಮಾರ್ಗಗಳನ್ನು ತೋರಿಸಬೇಕಲ್ಲದೇ ಆ ಹಿಂಸಾರಭಸಮತಿಗೆ ಹೊರದಾರಿಗಳನ್ನು ತೋರಿಸಬಾರದು. ಸಾರ್ವಜನಿಕ ಜೀವನ ಅತ್ಯಂತ ಪವಿತ್ರವಾದ ಜೀವನಶೈಲಿಯೆಂದು ಮಹಾತ್ಮ ಗಾಂಧಿ ನಂಬಿದ್ದರು. ಗಾಂಧಿಯ ಈ ನಂಬಿಕೆ ‘ಒಬ್ಬ ಸಾರ್ವಜನಿಕ ವ್ಯಕ್ತಿಯ ಒಂದೊಂದು ಮಾತು, ಕೃತಿ, ಆಲೋಚನೆಯೂ ಸಾಮಾನ್ಯ ಸಾರ್ವಜನಿಕರ ಮೇಲೆ ಪ್ರಭಾವ ಬೀರುತ್ತವೆ. ಅವನನ್ನೇ ಸಾಮಾನ್ಯನೂ ಅನುಸರಿಸುತ್ತಾನೆ’ (ಗೀತೆ- 3.21) ಎಂಬ ಗೀತಾವಾಕ್ಯದಿಂದ ಪ್ರೇರೇಪಿತವಾಗಿತ್ತು.

ಸೈದ್ಧಾಂತಿಕ ಕಾರಣಕ್ಕೆ ವಾದ- ಪ್ರತಿವಾದ ನಡೆಸುತ್ತೇವೆ, ಪರಸ್ಪರರು ಬೈದಾಡಿಕೊಳ್ಳುತ್ತೇವೆ, ವ್ಯಕ್ತಿಗತ ಸಂಬಂಧದಲ್ಲಿ ಸ್ನೇಹಭಾವದಿಂದಲೇ ಇರುತ್ತೇವೆ ಎಂದು ನಮ್ಮ ನಾಯಕರು ಸಮಜಾಯಿಷಿ ನೀಡಬಹುದು. ಆದರೆ ಸಾರ್ವಜನಿಕ ಸಭೆ- ಸಮಾರಂಭಗಳಲ್ಲಿ, ಚುನಾವಣಾ ಪ್ರಚಾರದಂತಹ ಸಂದರ್ಭಗಳಲ್ಲಿ ಸೂಕ್ಷ್ಮವಾಗಿ ವರ್ತಿಸಬೇಕಾಗುತ್ತದೆ. ತಾವು ಯಾವುದೇ ಮಾದರಿ ಹಾಕಿಕೊಟ್ಟರೂ ಅನುಯಾಯಿಗಳು ಅದನ್ನು ಅತಿರೇಕಕ್ಕೆ ಕೊಂಡೊಯ್ಯುತ್ತಾರೆ ಎಂಬ ಎಚ್ಚರ ಅವರಿಗಿರಬೇಕಾಗುತ್ತದೆ.



ಒಂದು ವಸ್ತುನಿಷ್ಠ ಚರ್ಚೆಯನ್ನು ಮುಂದುವರಿಸುವಲ್ಲಿ ವಿಫಲರಾದಾಗ ಅಥವಾ ನಮ್ಮ ಮಾತುಗಳಲ್ಲಿ ನಮಗೇ ನಂಬಿಕೆ ಇಲ್ಲದೇ ಹೋದಾಗ ನಾವು ಬೈಗುಳ, ಅವಹೇಳನದ ಮಾತುಗಳನ್ನಾಡಲು ಪ್ರಾರಂಭಿಸುತ್ತೇವೆ. ತಮ್ಮನ್ನು ತಾವು ಪ್ರಾಮಾಣಿಕರ ನೆಲೆಯಲ್ಲಿ ನಿಲ್ಲಿಸಿಕೊಂಡು ವಿರೋಧ ಪಕ್ಷಗಳ ನಾಯಕರ ಭ್ರಷ್ಟಾಚಾರವನ್ನು ಟೀಕಿಸುವವರು, ತಮ್ಮನ್ನು ತಾವು ಸೆಕ್ಯುಲರ್ ಎಂದು ಕರೆದುಕೊಂಡು ಅಲ್ಪಸಂಖ್ಯಾತರನ್ನು ಓಲೈಸುವ ರಾಜಕಾರಣ ಮಾಡುವವರು ಅಂತಿಮವಾಗಿ ಬೈಗುಳದಲ್ಲಿ ಪರ್ಯವಸಾನವಾಗುವರು. ನಮ್ಮ ಮಾತುಗಳಲ್ಲಿನ ಸುಳ್ಳು, ಸೋಗಲಾಡಿತನಗಳು ನಮ್ಮ ಅಂತಃಸಾಕ್ಷಿಯನ್ನು ಬಾಧಿಸದೇ ಬಿಡುವುದಿಲ್ಲ. ಆ ಬಾಧೆಯನ್ನು ಹೊರಹಾಕಲು ನಾವು ನಮಗರಿವಿಲ್ಲದೆಯೇ ಬೈಗುಳಕ್ಕೆ ಮೊರೆಹೋಗಿ ಹಗುರವಾಗುತ್ತೇವೆ. ಅನ್ಯರನ್ನು ಬೈಯ್ಯುವಾಗ ನಾವು ನಮ್ಮ ವೈಫಲ್ಯ, ಕೊಳಕುತನವನ್ನು ಮರೆಮಾಚಲು ಪ್ರಯತ್ನಿಸುತ್ತೇವೆ. ಬೈಗುಳ ಒಂದು ಬಗೆಯ ಆತ್ಮರಕ್ಷಣಾ ತಂತ್ರವೂ ಆಗಿದೆ.

ಕೆಲವೊಮ್ಮೆ ನಮ್ಮ ಸಾಮರ್ಥ್ಯ- ದೌರ್ಬಲ್ಯಗಳೇನು ಎಂಬುದು ನಮಗೆ ಗೋಚರಿಸದಿರಬಹುದು. ಆದರೆ ಹೊರಜಗತ್ತಿಗೆ ಅವು ಚೆನ್ನಾಗಿ ಕಾಣಿಸುತ್ತಿರುತ್ತವೆ. ಎಷ್ಟೋ ಸಲ ನಮ್ಮನ್ನು ಟೀಕಿಸುವವರು ನಮ್ಮ ಆ ದೌರ್ಬಲ್ಯವನ್ನು ಕಂಡೇ ಟೀಕಿಸಿರುತ್ತಾರೆ. ನಮಗೆ ಕಾಣಿಸದ ಸತ್ಯ ಅವರಿಗೆ ಕಂಡು ಅವರು ಅದನ್ನು ನಮಗೆ ಕಂಡರಿಸುವಾಗ ನಾವು ಅವರಿಗೆ ಕೃತಜ್ಞರಾಗಬೇಕಲ್ಲದೇ ಅವರಿಗೆ ಪ್ರತಿ ಬೈಗುಳ ನೀಡಬಾರದು ಎಂಬ ವಿವೇಕವನ್ನು ನಮ್ಮ ರಾಜಕಾರಣಿಗಳು ಬೆಳೆಸಿಕೊಳ್ಳಬೇಕಾಗಿದೆ.

ಮನುಷ್ಯ ತನ್ನ ಸಾಮರ್ಥ್ಯದ ಮಿತಿ- ಎಲ್ಲೆಗಳನ್ನರಿತು ಬದುಕಬೇಕಾಗುತ್ತದೆ ಮತ್ತು ಆ ಎಲ್ಲೆಯನ್ನು ನಿರಂತರವಾಗಿ ವಿಸ್ತರಿಸಿಕೊಳ್ಳಲು ತನ್ನಿಡೀ ಬದುಕನ್ನು ಮುಡಿಪಾಗಿಡಬೇಕಾಗುತ್ತದೆ. ಆ ಮಿತಿಯನ್ನು ಮರೆತಾಗ ಅವನಲ್ಲಿ ಅಹಂಕಾರ ಮೂಡುತ್ತದೆ. ಆಧ್ಯಾತ್ಮಿಕ ವಿಕಾಸಕ್ಕೆ ಅಹಂಕಾರ ಬಹುದೊಡ್ಡ ಅಡಚಣೆಯಾಗಿದೆ ಎಂದು ಜಗತ್ತಿನ ಎಲ್ಲ ಧರ್ಮಗಳೂ ಸಾರುವುದು ಈ ಹಿನ್ನೆಲೆಯಲ್ಲೇ. ಆತ್ಮದ ವಿಕಾಸ, ವಿಸ್ತರಣೆಗಳು ಹಾಗಿರಲಿ ಇಲ್ಲದ ಸಾಮರ್ಥ್ಯವನ್ನು ಉಂಟೆಂದು ಅನ್ಯರಿಗೆ ರುಜುವಾತು ಮಾಡಲು ಹೊರಡುವುದು ಸಹ ಮನೋರೋಗದ ಮತ್ತೊಂದು ಲಕ್ಷಣವಾಗಿದೆ. ಹೀಗೆ ಇಲ್ಲದ ಸಾಮರ್ಥ್ಯವನ್ನು ಎತ್ತಿ ಹಿಡಿಯಲು ಪ್ರಯತ್ನಿಸುವಾಗಲೂ ನಾವು ನಿಂದನೆ, ಬೈಗುಳ, ಅವಹೇಳನಗಳಿಗೆ ಮೊರೆ ಹೋಗುವುದುಂಟು.

ನಮ್ಮ ನಾಯಕರು ಅವಹೇಳನದ ಮಾತುಗಳನ್ನಾಡುವಾಗ ಸಭಿಕರು, ಅನುಯಾಯಿಗಳು ಚಪ್ಪಾಳೆ ತಟ್ಟಬಹುದು. ಆದರೆ ಅದನ್ನು ಶ್ಲಾಘನೆ ಎಂದು ಭಾವಿಸಿದರೆ ಅದು ಮೂರ್ಖತನವಾಗುತ್ತದೆ. ಹಿಂದಿಯಲ್ಲಿ ‘ಕುಣಿಯುತ್ತಿರುವ ನವಿಲಿಗೆ ತಾನು ತನ್ನ ಬೆತ್ತಲೆ ಅಂಗಗಳನ್ನು ಜಗತ್ತಿಗೆ ಪ್ರದರ್ಶಿಸುತ್ತಿದ್ದೇನೆ ಎಂದು ಗೊತ್ತಿರುವುದಿಲ್ಲ’ ಎಂಬರ್ಥದ ಗಾದೆ ಮಾತಿದೆ. ಬೈಗುಳಗಳ ಮೂಲಕ ತನ್ನ ಒಣಪ್ರತಿಷ್ಠೆಯನ್ನು ಕಾಪಾಡಿಕೊಳ್ಳುವವನು ಸಹ ತನ್ನ ಖಾಲಿತನವನ್ನು ಜಗತ್ತಿಗೆ ತೋರಿಸುತ್ತ, ಲೋಕದ ಜನರಿಗೆ ಬಿಟ್ಟಿ ಮನರಂಜನೆ ನೀಡುತ್ತಿರುತ್ತಾನೆ. ಇಂಥವರನ್ನು ಕಂಡೇ ಘಟ್ಟಿವಾಳಯ್ಯ ‘ಭಾಷೆಯೆಂಬುದು ನಗೆಗೇಡೆಯಾಯಿತ್ತು’ ಎಂಬ ವಚನವನ್ನು ನುಡಿದಿರಬೇಕು.

ಲೇಖಕ: ಸಹಾಯಕ ಪ್ರಾಧ್ಯಾಪಕ, ಜ್ಯೋತಿನಿವಾಸ್ ಕಾಲೇಜ್, ಬೆಂಗಳೂರು

ಚುರುಮುರಿ



ಕಾಪಾಡ್ ಕನ್ನಡ

• ಮಣ್ಣೆರಾಜು

‘ಈ ಇಂಗ್ಲಿಷ್ ಮೀಡಿಯಂ ಅಮ್ಮಂದಿರಲ್ಲಿ ಕನ್ನಡ ಪ್ರೇಮ ಬೆಳೆಸುವುದು ತುಂಬಾ ಕಷ್ಟ ಕಣ್ರೀ...’ ಸುಮಿ ಬೇಸರಗೊಂಡಳು.

‘ಮಕ್ಕಳನ್ನು ಇಂಗ್ಲಿಷ್ ಮೀಡಿಯಂಗೆ ಸೇರಿಸಿ, ತಾವೂ ಅರೆಬರೆ ಇಂಗ್ಲಿಷ್ ಕಲಿತು ಕುಟುಂಬವನ್ನು ಇಂಗ್ಲಿಷ್‌ಮಯ ಮಾಡಿಕೊಂಡು ಬೀಗುವ ಅಮ್ಮಂದಿರಾ?’ ಶಂಕ್ರಿ ಕೇಳಿದ.

‘ಹೌದು, ಮಾತೆಯೇ ಮಕ್ಕಳಿಗೆ ಮಾತೃಭಾಷೆ ಕಲಿಸದಿದ್ದರೆ ಕನ್ನಡ ಬೆಳೆಯೋದು ಹೇಗೆ? ಇಂಥಾ ಅಮ್ಮಂದಿರ ಇಂಗ್ಲಿಷ್ ಗೀಳು ನಿವಾರಣೆ ಮಾಡಿ ಮನೆಯಲ್ಲಿ ಕನ್ನಡ ಬಳಸಲು ನಮ್ಮ ಮಹಿಳಾ ಸಮಾಜದಿಂದ ‘ಕಾಪಾಡ್ ಕನ್ನಡ’ ಎಂಬ ಜಾಗೃತ ಅಭಿಯಾನ ಆರಂಭಿಸಿದ್ದೇವೆ’.

‘ನಮ್ಮಲ್ಲಿ ಕನ್ನಡ ಮೀಡಿಯಂನಲ್ಲಿ ಎಂಜಿನಿಯರಿಂಗ್, ಮೆಡಿಕಲ್ ಕೋರ್ಸ್‌ಗಳಿಲ್ಲ. ಮಕ್ಕಳನ್ನು ಡಾಕ್ಟರೊ, ಇಂಜಿನಿಯರೊ ಓದಿಸಬೇಕು ಅಂತ ಅಮ್ಮಂದಿರು ಆಸೆಪಡ್ತಾರೆ. ಹೀಗಿರುವಾಗ, ಮನೆಯಲ್ಲಿ ಕನ್ನಡ ಬಳಸಿದರೆ ಮಕ್ಕಳ ಇಂಗ್ಲಿಷ್ ಮೀಡಿಯಂ ಮೇಲೆ ದುಷ್ಪರಿಣಾಮ ಬೀರುವುದಿಲ್ಲವೇ?’

‘ಅಷ್ಟೇ ಅಲ್ಲಾರೀ, ಅವರ ಸ್ನೇಹಿತರು, ಸಂಬಂಧಿಗಳ ಮಕ್ಕಳು ವಿದೇಶದಲ್ಲಿ ವಿದ್ಯೆ, ಉದ್ಯೋಗ ಮಾಡಿಕೊಂಡಿದ್ದಾರಂತೆ. ಅವರಂತೆ ತಮ್ಮ ಮಕ್ಕಳನ್ನೂ ವಿದೇಶಕ್ಕೆ ಕಳಿಸಿ ತಮ್ಮ ಕುಟುಂಬದ ಘನತೆ, ಗೌರವ ಹೆಚ್ಚಿಸಿಕೊಳ್ಳಬೇಕು ಅನ್ನೋದು ಅಮ್ಮಂದಿರ ಆಸೆ’.

‘ಕನ್ನಡ ನಂಬಿಕೊಂಡ್ರೆ ಮಕ್ಕಳು ಫಾರಿನ್ ಪ್ಲೇನ್ ಹತ್ತೋದು ಕಷ್ಟ ಅಂದುಕೊಂಡಿದ್ದಾರೇನೋ...’

‘ಮಕ್ಕಳು ಯಾವುದೇ ಮೀಡಿಯಂನಲ್ಲಿ ಓದಲಿ, ಮನೆಯಲ್ಲೂ ಅಕ್ಕಿ, ಬೇಳೆ, ಈರುಳ್ಳಿ, ಬೆಳ್ಳುಳ್ಳಿ, ಬದನೆಕಾಯಿ, ಬೆಂಡೆಕಾಯಿ, ಹಾಸಿಗೆ, ದಿಂಬು, ತಟ್ಟೆ, ಲೋಟ, ಚೊಂಬು, ಊಟ-ತಿಂಡಿಯಂತಹ ಗೃಹಬಳಕೆ ಪದಗಳನ್ನೂ ಇಂಗ್ಲಿಷಿಗೆ ಅನುವಾದಿಸಿಕೊಂಡು ಬಳಸುವುದು ಸರಿಯೇನ್ರೀ?’

‘ತಪ್ಪು, ಮನೆಗನ್ನಡ ಉಳಿಯಬೇಕು’.

‘ಅದಕ್ಕೋಸ್ಕರ, ನವೆಂಬರ್ ತಿಂಗಳಲ್ಲಾದರೂ ಮನೆಗನ್ನಡ ಬಳಸುವ ಕುಟುಂಬಗಳಿಗೆ ರೇಷ್ಮೆ ಸೀರೆ ಬಹುಮಾನ ನೀಡುವ ಆಫರ್ ಪ್ರಕಟಿಸಿದ್ದೇವೆ. ಬಹಳಷ್ಟು ಅಮ್ಮಂದಿರು ಒಪ್ಪಿ ಹೆಸರು ನೋಂದಾಯಿಸಿಕೊಂಡಿದ್ದಾರೆ ಕಣ್ರೀ...’ ಸುಮಿ ಖುಷಿಯಾಗಿ ಹೇಳಿದಳು.

ದಿನದ ಟ್ವೀಟ್




ಮಾದರಿ ನಡವಳಿಕೆ

ಸೂಪರ್‌ಸ್ಟಾರ್ ಮಾತ್ರವಲ್ಲ, ರತ್ನದಂತಹ ವ್ಯಕ್ತಿಯೂ ಹೌದು! ನತದೃಷ್ಟರ ಬಗ್ಗೆ ಸದಾ ಕರುಣಾಮಯಿ ಆಗಿದ್ದರು. ಬರೀ ಚಲನಚಿತ್ರಗಳ ಪರಂಪರೆಯನ್ನಷ್ಟೇ ಅವರು ಬಿಟ್ಟು ಹೋಗಿಲ್ಲ, ಅವರಂತಹ ಸ್ಥಾನದಲ್ಲಿ ಇರುವವರೆಲ್ಲರೂ ಅನುಸರಿಸಬೇಕಾದ ಉನ್ನತ ಮಟ್ಟದ ನಡವಳಿಕೆಯ ಪರಂಪರೆಯನ್ನು ಸಹ ಉಳಿಸಿಹೋಗಿದ್ದಾರೆ. RIP ಪುನೀತ್ ರಾಜ್‌ಕುಮಾರ್ ಅವರೇ.

ಇಶಾ ಪಂತ್, ಐಪಿಎಸ್ ಅಧಿಕಾರಿ

ಕಿಡಿನುಡಿ



ಹ್ಯಾಕರ್ ಶ್ರೀಕೃಷ್ಣ 2018ರ ಫೆಬ್ರುವರಿಯಲ್ಲಿ ಯು.ಬಿ ಸಿಟಿಯಲ್ಲಿ ನಡೆದಿದ್ದ ದಾಂದಲೆ ಪ್ರಕರಣದಲ್ಲಿ ಭಾಗಿಯಾಗಿದ್ದ. ಆ ಪ್ರಕರಣದಲ್ಲಿ ಆತನನ್ನು ಬಂಧಿಸದೇ ರಕ್ಷಣೆ ನೀಡಲಾಗಿತ್ತು. ಆಗಲೇ ಆತನನ್ನು ಬಂಧಿಸಿದ್ದರೆ ಎಲ್ಲ ಹಗರಣಗಳೂ ಬಹುಬೇಗ ಬಯಲಿಗೆ ಬರುತ್ತಿದ್ದವು. 2018ರ ಘಟನೆಯಲ್ಲಿ ಕೆಲವು ಪ್ರಭಾವಿಗಳ ಜತೆ ಆತನೂ ಇದ್ದ. ಆಗ ಬಂಧನವಾಗದಂತೆ ರಕ್ಷಿಸಿದವರು ಯಾರು?

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಬುಧವಾರ, 30-10-1996

• ಸದ್ಯಕ್ಕೆ ರಾಜ್ಯದಲ್ಲಿ ಹೊಸ ಜಿಲ್ಲೆಗಳ ರಚನೆ ಇಲ್ಲ

ಬೆಂಗಳೂರು, ಅ. 29– ರಾಜಕೀಯ ಮತ್ತು ಆರ್ಥಿಕ ಪರಿಣಾಮಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡದೆ ತಪ್ಪು ನಿರ್ಧಾರ ತೆಗೆದುಕೊಳ್ಳಬಾರದು ಎಂದು ಸಂಪುಟದ ಸಹೋದ್ಯೋಗಿಗಳಿಂದ ಬಂದಿರುವ ಒತ್ತಡದಿಂದಾಗಿ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಈ ಮುಂಚೆ ಪ್ರಕಟಿಸಿದ್ದಂತೆ ನ. 1ರಂದು ಹೊಸ ಜಿಲ್ಲೆಗಳ ಹೆಸರು ಪ್ರಕಟಿಸುವ ಸಂಭವವಿಲ್ಲ.

ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಹೊಸ ಜಿಲ್ಲೆಗಳ ರಚನೆ ವಿಚಾರ ಔಪಚಾರಿಕವಾಗಿ ಚರ್ಚೆಯಾಯಿತು. ರಾಜ್ಯದ ಬೊಕ್ಕಸಕ್ಕೆ ಭಾರಿ ಹೊರೆ ಬೀಳುವುದರಿಂದ ಸದ್ಯಕ್ಕೆ ಹೊಸ ಜಿಲ್ಲೆಗಳ ರಚನೆ ವಿಚಾರ ಕೈಬಿಡಬೇಕೆಂದು ಉಪಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರವಾಗಿ ವಾದಿಸಿದರು ಎನ್ನಲಾಗಿದೆ.

• ನಗರಪಾಲಿಕೆ: ಬಹುಮತ ಇಲ್ಲ

ಬೆಂಗಳೂರು, ಅ. 29– ಬೆಂಗಳೂರು ಮಹಾನಗರ ಪಾಲಿಕೆಯ 100 ವಾರ್ಡುಗಳಿಗೆ ಭಾನುವಾರ ನಡೆದ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಯಾವುದೇ ಪಕ್ಷಕ್ಕೂ ಸ್ಪಷ್ಟ ಬಹುಮತ ದೊರೆತಿಲ್ಲ. ಆದರೆ, 39 ವಾರ್ಡುಗಳಲ್ಲಿ ಜಯ ಗಳಿಸಿರುವ ಜನತಾದಳ ಅತಿ ಹೆಚ್ಚಿನ ಸ್ಥಾನಗಳನ್ನು ಪಡೆದ ಏಕೈಕ ಪಕ್ಷವಾಗಿ ಹೊರಹೊಮ್ಮಿದೆ.

6 ವರ್ಷಗಳ ಹಿಂದೆ ನಡೆದ ಪಾಲಿಕೆ ಚುನಾವಣೆಯಲ್ಲಿ ಕೇವಲ 6 ಸ್ಥಾನಗಳಲ್ಲಿ ಜಯ ಗಳಿಸಿದ್ದ ಬಿಜೆಪಿ ಈ ಬಾರಿ 26 ವಾರ್ಡುಗಳಲ್ಲಿ ಜಯಭೇರಿ ಬಾರಿಸಿದ್ದರೆ, ಪಾಲಿಕೆಯ ಆಡಳಿತ ಚುಕ್ಕಾಣಿ ಹಿಡಿದಿದ್ದ ಕಾಂಗ್ರೆಸ್ ಪಕ್ಷ 19 ಸ್ಥಾನಗಳನ್ನು ಗೆಲ್ಲುವ ಮೂಲಕ ಮೂರನೆಯ ಸ್ಥಾನಕ್ಕೆ ತಳ್ಳಲ್ಪಟ್ಟಿದೆ.

50 ವರ್ಷಗಳ ಹಿಂದೆ

ಶನಿವಾರ, 30-10-1971

• ಶಾನುಭೋಗರ ಹುದ್ದೆ ರದ್ದಿನ ನಿಯಮಕ್ಕೆ ಸುಪ್ರೀಂ ಕೋರ್ಟ್ ತಡೆ

ನವದೆಹಲಿ, ಅ. 29– ತಮ್ಮನ್ನು ಕೆಲಸದಿಂದ ವಜಾ ಮಾಡಿರುವುದನ್ನು ಪ್ರಶ್ನಿಸಿ ಮಂಡ್ಯ ಜಿಲ್ಲೆಯ ನರಸಿಂಹಮೂರ್ತಿ ಮತ್ತಿತರ 23 ಮಂದಿ ಶಾನುಭೋಗರುಗಳು ಸಲ್ಲಿಸಿರುವ ರಿಟ್ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಬಾರದೇಕೆ ಎಂಬುದಕ್ಕೆ ಸಮಜಾಯಿಷಿ ನೀಡುವಂತೆ ಸುಪ್ರೀಂ ಕೋರ್ಟಿನ ಸಂವಿಧಾನ ಪೀಠ ಇಂದು ಮೈಸೂರು ಸರ್ಕಾರಕ್ಕೆ ನೋಟಿಸ್ ಹೊರಡಿಸಿತು.

ಹಿಂದಿನ ಶಾನುಭೋಗರುಗಳನ್ನು ಕೆಲಸದಿಂದ ವಜಾ ಮಾಡಿ ಹೊಸ ಗ್ರಾಮ ಲೆಕ್ಕಾಧಿಕಾರಿಗಳನ್ನು ನೇಮಿಸಿಕೊಳ್ಳಲು ಅವಕಾಶ ನೀಡುವ ಮೈಸೂರು ಕಂದಾಯ ಶಾಸನದ 16 (2)ನೇ ವಿಧಿಯ ಅನ್ವಯಕ್ಕೆ ಸುಪ್ರೀಂ ಕೋರ್ಟ್ ಏಕಪಕ್ಷೀಯ ತಡೆಯಾಜ್ಞೆ ನೀಡಿದೆ.

• ಕೈಗಾರಿಕೋದ್ಯಮಿಗಳಿಗೆ ಸರ್ಕಾರದ ವಚನ ಭಂಗ: ಮೂಲಸೌಲಭ್ಯಕ್ಕೆ ಧಕ್ಕೆ

ಬೆಂಗಳೂರು, ಅ. 29– ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿಗಾಗಿ ಎರಡು ವರ್ಷಗಳ ಹಿಂದೆ ಆರಂಭಿಸಲಾದ ಸರ್ಕಾರಿ ಪ್ರೋತ್ಸಾಹ ಹಾಗೂ ಪ್ರಚಾರದ ಫಲ ಸಿಹಿಯಾಗುವ ಬದಲು ಕಹಿಯಾಗುವ ಸೂಚನೆಗಳು ತೋರಿ ಬರುತ್ತಿವೆ.

ಎಲ್ಲ ಸೌಲಭ್ಯಗಳನ್ನು ಒದಗಿಸಲಾಗುವುದೆಂದು ರಾಜ್ಯ ಸರ್ಕಾರ ನೀಡಿದ ಭರವಸೆಯನ್ನು ನಂಬಿ ನಗರದ ಹೊರವಲಯದಲ್ಲಿ ಕೈಗಾರಿಕೆಗಳನ್ನು ಆರಂಭಿಸಲು ಹೊರಟಿರುವ ದೇಶದ ನಾನಾ ಭಾಗಗಳ ಭಾರಿ ಮತ್ತು ಮಧ್ಯಮ ವರ್ಗದ ಕೈಗಾರಿಕೋದ್ಯಮಿಗಳು, ‘ಮೂಲಭೂತ ಸೌಲಭ್ಯಗಳನ್ನು ಒದಗಿಸದೆ ತಮ್ಮನ್ನು ನಡುನೀರಿನಲ್ಲಿ ಕೈಬಿಟ್ಟಿದ್ದಾರೆ’ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸಂಗತ

ಸಾಮಾಜಿಕ ಜಾಲತಾಣ: ಅಪರಾಧಿ ಯಾರು?!

ಮಾಧ್ಯಮಗಳನ್ನು ಬಳಸುವ, ಗ್ರಹಿಸುವ, ಬೆಳೆಸುವ ಮಾರ್ಗದಲ್ಲಿ ಆತ್ಮಸಾಕ್ಷಿಯ ಪಾಠವನ್ನು ನಾವು ಕಲಿಯಬೇಕಾಗಿದೆ

• ಡಾ. ಕೆ.ಎಸ್.ಪವಿತ್ರ

ಜಗತ್ತು ಕೋವಿಡ್‌ನಂತಹ ಪ್ಯಾಂಡೆಮಿಕ್ ಅನ್ನು ಹಲವು ಬಾರಿ ನೋಡಿದೆ. ಆದರೆ ‘ಸೋಷಿಯಲ್ ಮೀಡಿಯಾ ಪ್ಯಾಂಡೆಮಿಕ್’ (ಸಾಮಾಜಿಕ ಮಾಧ್ಯಮಗಳ ಸೋಂಕು) ಅನ್ನು ಮೊದಲ ಬಾರಿಗೆ ನೋಡುತ್ತಿದೆ! ಸಾಮಾಜಿಕ ಜಾಲತಾಣ ಸಂಸ್ಥೆಯೊಂದರ ವಿರುದ್ಧ ಮಾಜಿ ಉದ್ಯೋಗಿಯೊಬ್ಬರು ಮಾಡಿರುವ ಆರೋಪಗಳ ಬಗೆಗೆ ಮೊನ್ನೆ ವರದಿಯಾಗಿದೆ. ತಮ್ಮ ಸಂದರ್ಶನವೊಂದರಲ್ಲಿ ‘ತಪ್ಪು ಮಾಹಿತಿ ಹರಡುವಿಕೆಯಿಂದ, ಮುಖ್ಯವಾಗಿ ಹದಿಹರೆಯದ ಹೆಣ್ಣುಮಕ್ಕಳ ಮೇಲಾಗುತ್ತಿರುವ ಪರಿಣಾಮಗಳ ಬಗ್ಗೆ ಅರಿವಿದ್ದರೂ ಫೇಸ್‌ಬುಕ್ ಅದರ ನಿಯಂತ್ರಣಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ’ ಎಂಬ ಕಾಳಜಿಯನ್ನು ಅವರು ಹಂಚಿಕೊಂಡಿದ್ದಾರೆ. ಆದರೆ ಸಂಗತಿ ‘ಫೇಸ್‌ಬುಕ್’ ಒಂದೇ ನಿಯಂತ್ರಿಸುವಷ್ಟು ಸರಳವಾಗಿಲ್ಲ.

ಯಾವುದೇ ಮಾಧ್ಯಮಗಳ ಗುರಿ ಗ್ರಾಹಕನ ‘ಮನಸ್ಸು’. ಈವರೆಗೆ ಕೆಲವು ಗಂಟೆಗಳಷ್ಟು ಕಾಲ ಫೇಸ್‌ಬುಕ್, ವಾಟ್ಸ್‌ಆ್ಯಪ್‌ಗಳಲ್ಲಿ ನಾವು ಕಾಲ ಕಳೆಯುತ್ತಿದ್ದೆವು. ಇದೀಗ ಕೋವಿಡ್‌ನಿಂದ ಉಂಟಾದ ದೈಹಿಕ ಅಂತರದ ಕಾರಣ, ಸಾಮಾಜಿಕ ಅಂತರದ ಅಪಾಯವನ್ನು ಹೋಗಿಸಲೋಸುಗ ಸಾಮಾಜಿಕ ಮಾಧ್ಯಮಗಳಲ್ಲಿ ನಿರಂತರ ಸಂಪರ್ಕ ಕಾಯ್ದುಕೊಳ್ಳುವ ಸ್ಥಿತಿಗೆ ತಲುಪಿದ್ದೇವೆ. ಜನರೊಡನೆ ಸಂಪರ್ಕ ಸಾಧ್ಯವೋ ಇಲ್ಲವೋ ‘ತೆರೆ’ಯೊಂದಿಗಂತೂ ನಾವೆಲ್ಲರೂ ಅಬಾಧಿತವಾದ ಸಂಪರ್ಕವನ್ನು ಬಯಸುತ್ತೇವೆ. ಹೀಗಿರುವಾಗ ಇಲ್ಲಿಯವರೆಗಿದ್ದ ‘ಮಾಧ್ಯಮ’ಗಳ ಪರಿಸ್ಥಿತಿಯೂ ಬದಲಾಗಿದೆ.

ಈಗ ‘ಮಾಧ್ಯಮ’ ಎಂದರೆ? ಯಾರೂ ಆಗಬಹುದು! ಏಕೆಂದರೆ ಈಗ ಮಾಧ್ಯಮಗಳಲ್ಲಿ ಬರೆಯಲು, ಅಭಿಪ್ರಾಯ ವ್ಯಕ್ತಪಡಿಸಲು ಸಂಪಾದಕರು ತಿರಸ್ಕರಿಸಬಹುದು, ಕತ್ತರಿ ಹಾಕಬಹುದು ಎಂಬ ಭಯವೇ ಇಲ್ಲ. ನಿಮಗೆ ಅನ್ನಿಸಿದ್ದನ್ನು, ಬೇಕಾದ್ದನ್ನು, ಬೇಡವಾದ್ದನ್ನು ನೀವು ಹರಿಬಿಡಬಹುದು, ಹಂಚಬಹುದು. ಸುದ್ದಿಗಳ ‘ಜೀವಿತಾವಧಿ’ ಕಡಿಮೆಯೇ ಇರಬಹುದಾದರೂ ಒಂದಿಷ್ಟು ‘ಲೈಕ್’ಗಳಿಗೆ, ಕಮೆಂಟ್‌ಗಳಿಗೆ ಕೊರತೆಯಂತೂ ಇರಲಾರದು.

ಇವೆಲ್ಲವೂ ಸಾಮಾಜಿಕ ಬಾಂಧವ್ಯದ ದೃಷ್ಟಿಯಲ್ಲಿ ಒಳ್ಳೆಯವೇ. ಆದರೆ ಸಮಸ್ಯೆಯೆಂದರೆ ‘ತಪ್ಪು ಮಾಹಿತಿ’ಯೂ ಕತ್ತರಿ ಇಲ್ಲದೆ, ‘ಎಡಿಟರ್ ಕಣ್ಣು’ ನೋಡದೆ ಸಾಮಾಜಿಕ ಮಾಧ್ಯಮಗಳಲ್ಲಿ ಸುತ್ತುತ್ತಲೇ ಇರುವುದು. ಇಂತಹ ತಪ್ಪು ಮಾಹಿತಿಗಳಿಂದ ಜೀವ ಕಳೆದುಕೊಂಡ ಉದಾಹರಣೆಗಳೂ ಇವೆ. ಸಾಮಾಜಿಕ ಮಾಧ್ಯಮಗಳೇ ನಮ್ಮ ಸಂಪರ್ಕಸೇತುವಾಗಿದ್ದ ಲಾಕ್‌ಡೌನ್‌ನ ದಿನಗಳಲ್ಲಿ ಕೊರೊನಾ ಸೋಂಕಿನ ಬಗ್ಗೆ ಹರಿದಾಡುತ್ತಿದ್ದ ತಪ್ಪು ಮಾಹಿತಿಗಳಿಂದ ಕೆಲವರು ತಪ್ಪು ಔಷಧಿ ಸೇವಿಸಿದ್ದಾರೆ, ಪ್ರಾಣವನ್ನೂ ಕಳೆದುಕೊಂಡಿದ್ದಾರೆ. ಆತ್ಮಹತ್ಯೆಗೆ ಪ್ರಚೋದನೆಯನ್ನೂ ಈ ತಪ್ಪು ಮಾಹಿತಿಗಳು ನೀಡಿವೆ. ಆದರೆ ಇಂತಹ ಪ್ರಕರಣಗಳ ಬಗ್ಗೆ ಮಾಧ್ಯಮಗಳೆಲ್ಲವೂ ಮೌನ ವಹಿಸಿವೆ. ಅಂದರೆ ಸದ್ಯದಲ್ಲಿ ‘ಮಾಧ್ಯಮ’ದವರೇ ಆಗಿರುವ ನಾವೆಲ್ಲರೂ!

ಹಾಗಿದ್ದರೆ ‘ಮಾಧ್ಯಮಗಳು ಮತ್ತು ಆರೋಗ್ಯ’ದ ಬಗ್ಗೆ ಕೆಲಸ ಮಾಡುತ್ತಿರುವ ವಿಶ್ವ ಆರೋಗ್ಯ ಸಂಸ್ಥೆ ಏನು ಮಾಡುತ್ತಿದೆ? ಅದು ಕೋವಿಡ್‌ಗೆ ಸಂಬಂಧಿಸಿದ ತಪ್ಪು ಮಾಹಿತಿಯನ್ನು ತಡೆಯಲು ಫೇಸ್‌ಬುಕ್, ಟ್ವಿಟರ್ ಮತ್ತು ಇತರ ಜಾಲತಾಣಗಳ ಜೊತೆ ಕೈ ಜೋಡಿಸಿದೆ. ಸರಿಯಾದ ಮಾಹಿತಿಯನ್ನು ಯುಟ್ಯೂಬ್, ಇನ್‌ಸ್ಟಾಗ್ರಾಂನಂತಹ ತಾಣಗಳಲ್ಲಿ ಪ್ರಕಟಿಸಲಾಗುತ್ತಿದೆ. ಪ್ರತಿಯೊಬ್ಬರ ಫೇಸ್‌ಬುಕ್ ಖಾತೆಯಲ್ಲಿಯೂ ಗೂಗಲ್, ಮೈಕ್ರೊಸಾಫ್ಟ್, ಟ್ವಿಟರ್, ರೆಡ್ಡಿಟ್, ಯುಟ್ಯೂಬ್, ಲಿಂಕ್ಡ್ ಇನ್‌ಗಳ ಜೊತೆ ಸೇರಿ ತಪ್ಪು ಮಾಹಿತಿಯನ್ನು ತೆಗೆಯುವ, ಸರಿ ಮಾಹಿತಿಯ ಸಾಲು ಕಾಣುವಂತೆ ಕ್ರಮ ಕೈಗೊಳ್ಳಲಾಗಿದೆ. ಸಾಮಾಜಿಕ ಜಾಲತಾಣ ಕಂಪನಿಗಳು ‘ಫ್ಯಾಕ್ಟ್ ಚೆಕ್’ ಮತ್ತು ‘ಆ್ಯಕ್ಯುರೆಸಿ ನಡ್ಜ್ ಇಂಟರ್‌ವೆನ್ಷನ್ಸ್’ನಂತಹ (ನಿಖರತೆಯ ಸ್ಪಷ್ಟನೆ) ವಿಧಾನಗಳನ್ನು ಲಕ್ಷಾಂತರ ರೂಪಾಯಿ ವ್ಯಯಿಸಿ ಅಳವಡಿಸಿವೆ. ಆದರೆ ಇವು ಯಾವಾಗಲೂ ಸರಿಯಾಗಿಯೇ ಕೆಲಸ ಮಾಡುತ್ತವೆಯೆಂದು ಹೇಳಲು ಬರುವಂತಿಲ್ಲ. ಒಳ್ಳೆಯ ಕಾದಂಬರಿಯ ಮುಖಪುಟದ ಚಿತ್ರವೊಂದನ್ನು ‘ಅಶ್ಲೀಲ ವಸ್ತು’ ಹೊಂದಿದೆ ಎಂದು ‘ಫೇಸ್‌ಬುಕ್’ ತೆಗೆದುಹಾಕಿದ ಪ್ರಕರಣವನ್ನು ಉದಾಹರಿಸಬಹುದು. ಒಂದೆರಡು ಬಾರಿ ಗ್ರಾಹಕ ಬಿಡದೆ ಮತ್ತೆ ಮತ್ತೆ ಪ್ರಶ್ನಿಸಿದ ತಕ್ಷಣ ‘ಕ್ಷಮಿಸಿ, ತಪ್ಪಾಗಿದೆ’ ಎಂಬ ಸಂದೇಶ ಬರಬಹುದು, ಮಾಹಿತಿಯನ್ನು ಮತ್ತೆ ಹಾಕಲು ಬಿಡಬಹುದು. ಇದು ತಪ್ಪು ಮಾಹಿತಿಗೂ ಸಾಧ್ಯವಾಗಬಹುದಷ್ಟೆ!



‘ಸತ್ಯ ನಡೆದಾಡಲು ಇನ್ನೂ ಚಪ್ಪಲಿ ಹಾಕಿಕೊಳ್ಳುವುದರಲ್ಲಿರುವಾಗ, ಸುಳ್ಳು ಇಡೀ ಜಗತ್ತನ್ನು ಅರ್ಧ ತಿರುಗಿರುತ್ತದೆ’ ಎಂಬ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಯಾವುದೇ ಮಾಹಿತಿಯನ್ನು ‘ಶೇರ್’ ಮಾಡುವ, ‘ಫಾರ್ವರ್ಡ್’ ಮಾಡುವ ಮುನ್ನ ಅಥವಾ ನಾವೇ ‘ಸೃಷ್ಟಿ’ಸುವ ಮೊದಲು ಕನಿಷ್ಠ 20 ಸೆಕೆಂಡುಗಳನ್ನು ತೆಗೆದುಕೊಳ್ಳುವುದು, ಯಾವುದೇ ಚಿಕಿತ್ಸೆಯ ಬಗ್ಗೆ ಅಸ್ಪಷ್ಟ ಮಾಹಿತಿ ಹರಡದಿರುವುದು, ಭಯದಲ್ಲಿ ಹುಟ್ಟಿಕೊಳ್ಳುವ, ಹರಿಯಬಿಡುವ ಮಾಹಿತಿ ಬಗೆಗೆ ಎಚ್ಚರದಿಂದಿರುವುದು, ಮಾಹಿತಿ ಪ್ರಸಾರ ಮಾಡುವಾಗ ರಾಜಕಾರಣವನ್ನು ಹೊರಗಿಡುವುದು ನಮ್ಮಂತಹ ಜನಸಾಮಾನ್ಯರು ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು.

ಕೋವಿಡ್ ಪ್ಯಾಂಡೆಮಿಕ್‌ನ ಸಂದರ್ಭದಲ್ಲಿ ನಾವು ಕಲಿತ ಜೀವನಪಾಠಗಳು ಹಲವು. ಮಾಧ್ಯಮಗಳನ್ನು ಬಳಸುವ, ಗ್ರಹಿಸುವ, ಬೆಳೆಸುವ ಮಾರ್ಗದಲ್ಲಿಯೂ ‘ಆತ್ಮಸಾಕ್ಷಿ’ಯ ಪಾಠವನ್ನು ನಾವು ಕಲಿಯಬೇಕಾಗಿದೆ. ಕೇವಲ ಕೊರೊನಾ ಸಂದರ್ಭಕ್ಕಲ್ಲದೆ, ಸಮಾಜದ ಹಲವು ಸಮಸ್ಯೆಗಳಿಗೆ ಕಾರಣವಾಗುವ ಬದಲು ಪರಿಹಾರದ ಮಾರ್ಗವಾಗುವಂತೆ ಮಾಧ್ಯಮಗಳನ್ನು ದುಡಿಸಿಕೊಳ್ಳಬೇಕಾಗಿದೆ.

ವಾಚಕರ ವಾಣಿ

ಗೋವಿನ ಆರೋಗ್ಯದ ಖರ್ಚು ಭರಿಸಲಿ

ಬಲಿಪಾಡ್ಯಮಿ ದಿನದಂದು ದೇವಸ್ಥಾನಗಳಲ್ಲಿ ಕಡ್ಡಾಯವಾಗಿ ಗೋಪೂಜೆ ಮಾಡಬೇಕೆಂದು ಧಾರ್ಮಿಕ ದತ್ತಿ ಇಲಾಖೆ ಸೂಚಿಸಿದೆ. ಗೋವುಗಳಿಗೆ ಸ್ನಾನ, ಪೂಜೆ ಪುನಸ್ಕಾರ ನೆರವೇರಿಸಿ, ಅಕ್ಕಿ, ಬೆಲ್ಲವನ್ನೂ ಭುಂಜಿಸಬೇಕು, ಗೋವಿಗೆ ತಾಯಿಯ ಸ್ಥಾನವಿದೆ ಎಂಬುದೆಲ್ಲಾ ಸುತ್ತೋಲೆಯಲ್ಲಿದೆ. ಗೋಮಾತೆಯ ಹಾಲು, ಬೆರಣಿ, ಗೋಮೂತ್ರವೂ ಉಪಯುಕ್ತವಾಗುತ್ತಿರುವಾಗ, ಈ ತಾಯಿಯು ಆರೋಗ್ಯವಾಗಿರುವಂತೆ ನೋಡಿಕೊಳ್ಳಲು ಹಿಂದೂ ಸಂಪ್ರದಾಯದಲ್ಲಿ ಏನೂ ಉಲ್ಲೇಖವಿಲ್ಲವೇ? ಹಸುವನ್ನು ಸಾಕುವವರಾರೋ, ಪೂಜಿಸುವವರಾರೋ. ವರ್ಷಗಟ್ಟಲೆ ಗೋಮಾತೆಯನ್ನು ಬೆಳೆಸಿ, ಅದರ ಆರೋಗ್ಯವನ್ನು ನೋಡಿಕೊಂಡು, ಮನೆ ಮಂದಿಯಂತೆ ಉಪಚರಿಸುವ ರೈತ ಸಮುದಾಯವು ಗೋವನ್ನು ಶಾಸ್ತ್ರೋಕ್ತವಾಗಿ ಪೂಜಿಸದಿದ್ದರೂ ಸಂಸಾರದಲ್ಲಿ ಓರ್ವನಂತೆ ನೋಡಿಕೊಳ್ಳುತ್ತಿರುವುದು ಸಾಮಾನ್ಯ. ಹಿಂದೂ ಧರ್ಮದ ಬಗ್ಗೆ, ಗೋವಿನ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸಿ, ಪೂಜಿಸಬೇಕೆಂದು ಸೂಚಿಸುವ ಸರ್ಕಾರವು ಗೋವಿನ ಆರೋಗ್ಯವನ್ನು ಕೂಲಂಕಷವಾಗಿ ನೋಡಿಕೊಳ್ಳುವ ರೈತರಿಗೆ ಉದಾರ ನೆರವನ್ನು ನೀಡುವ ಬಗ್ಗೆ ಚಿಂತಿಸುವುದಿಲ್ಲವೇಕೆ? ಗೋವಿನ ಬೆಳವಣಿಗೆಗೆ, ಆರೋಗ್ಯಕ್ಕೆ ಹೆಚ್ಚಿನ ಖರ್ಚಾಗುವುದರಿಂದ, ಸರ್ಕಾರ ನೆರವಿಗೆ ಬರಬೇಕಲ್ಲವೇ?

ದೇಶದ ಅಭ್ಯುದಯದಲ್ಲಿ ಗೋವಿನ ಪಾತ್ರವೂ ಪ್ರಮುಖವಾಗಿರುವುದರಿಂದ, ಗೋವಿನ ಆರೋಗ್ಯದ ಖರ್ಚನ್ನು ಸರ್ಕಾರ ವಹಿಸಿಕೊಂಡರೆ, ಗೋವಿಗೆ ತಾಯಿಯಂತೆ ಶುಶ್ರೂಷೆ ಮಾಡಿದಂತೆ ಆಗುವುದಿಲ್ಲವೇ? ಗೋವಿನ ವಧೆಯನ್ನು ತಡೆಯುವ ಕಾನೂನನ್ನು ತಂದ ನಂತರ, ಗೋವುಗಳನ್ನು ಬೆಳೆಸಿದವರು ಅವುಗಳನ್ನು ಸಾಕಲು ಅಶಕ್ತರಾಗಿ ಬೀದಿಪಾಲು ಮಾಡುತ್ತಿದ್ದಾರೆ. ಇಂತಹ ಗೋವುಗಳ ಸಾಕಣೆಗೂ ಸರ್ಕಾರ ನೆರವಿಗೆ ಬರುವುದು ಸೂಕ್ತ. ಎಲ್ಲಾ ದೇವಸ್ಥಾನಗಳಲ್ಲಿ ಗೋವು ಮತ್ತು ಇತರ ಪ್ರಾಣಿಗಳ ಬಾಯಾರಿಕೆಯನ್ನು ನೀಗಿಸಲು ನೀರು ಶೇಖರಿಸಿಡುವ ಯೋಜನೆಯನ್ನೂ ಜಾರಿಗೆ ತರಬೇಕು.

ಕೆ.ಎನ್.ಭಗವಾನ್, ಬೆಂಗಳೂರು

ಲಂಚ ವಿರೋಧಿ ಪ್ರತಿಜ್ಞೆ ಹೀಗಿದ್ದರೆ...

ಬೃಹದಾಕಾರವಾಗಿ ಬೆಳೆದು ನಿಂತಿರುವ ಲಂಚಾವತಾರವನ್ನು ಬಗ್ಗು ಬಡಿಯುವಷ್ಟು ಸದೃಢವಾಗುವಂಥ ವಾತಾವರಣ ಸೃಷ್ಟಿಯಾಗಬೇಕಾಗಿದೆ. ಈ ದಿಸೆಯಲ್ಲಿ ವಿಧಾನಸಭೆಯ ಸಚಿವಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿ ‘ಲಂಚ ಸ್ವೀಕರಿಸುವುದಿಲ್ಲ’ ಎಂದು ಪ್ರತಿಜ್ಞೆ ಸ್ವೀಕರಿಸಿರುವ ನಡೆ ಮೆಚ್ಚುವಂಥದ್ದು. ಆದರೆ, ಪ್ರತಿಜ್ಞೆ ಮಾಡಿಸುವುದು ಕೇವಲ ಅಧಿಕಾರಿಗಳಿಗೆ ಸೀಮಿತವಾಗಬೇಕೆ? ರಾಜಕಾರಣಿಗಳಿಗೆ ಬೇಡವೇ?

ಸಮಾಜದಲ್ಲಿ ಲಂಚವೆಂಬ ಅಸಹ್ಯ ಸಂಸ್ಕೃತಿ ಬೇರು ಬಿಟ್ಟಿದೆಯಾದರೂ ಲಂಚವನ್ನು ಮುಟ್ಟದ ಪ್ರಾಮಾಣಿಕ ಅಧಿಕಾರಿಗಳು, ರಾಜಕಾರಣಿಗಳೂ ನಮ್ಮೊಡನೆ ಇದ್ದಾರೆ. ಆದ್ದರಿಂದ ಕೇವಲ ಸರ್ಕಾರಿ ಅಧಿಕಾರಿಗಳಿಂದ ‘ಲಂಚ ತೆಗೆದುಕೊಳ್ಳುವುದಿಲ್ಲ’ ಎಂದು ಸುಮ್ಮನೆ ಪ್ರತಿಜ್ಞೆ ಮಾಡಿಸುವುದು ಒಪ್ಪುವಂಥದ್ದಲ್ಲ. ಹೆಚ್ಚಿನದಾಗಿ, ಪ್ರತಿಜ್ಞೆ ತೆಗೆದುಕೊಳ್ಳುವಲ್ಲಿ ಕೆಲವು ಆಯ್ಕೆಗಳಿದ್ದರೆ ಚೆನ್ನಾಗಿರುತ್ತಿತ್ತು. ಉದಾಹರಣೆಗೆ, ಆಯ್ಕೆ ಒಂದು, ‘ನಾನು ಇದುವರೆವಿಗೂ ಲಂಚ ಸ್ವೀಕರಿಸಿಲ್ಲ, ಮುಂದೆಯೂ ಸ್ವೀಕರಿಸುವುದಿಲ್ಲ’. ಆಯ್ಕೆ ಎರಡು, ‘ಇನ್ನು ಮುಂದೆ ಲಂಚವನ್ನು ಸ್ವೀಕರಿಸುವುದಿಲ್ಲ’. ಮೂರನೆಯ ಆಯ್ಕೆ ‘ಪ್ರತಿಜ್ಞೆ ಸ್ವೀಕರಿಸಲು ಮನಸ್ಸು ಒಪ್ಪುತ್ತಿಲ್ಲ ಹಾಗೂ ಲಂಚದ ದುಡಿಮೆ ಇಲ್ಲದೆ ಮನೆಗೆ ಹೋಗುವುದಿಲ್ಲ. ಆದ್ದರಿಂದ ಈ ಲಂಚದ ಕಾಯಿಲೆಗೆ ಯಾರಾದರೂ ಔಷಧಿ ಕೊಟ್ಟು ವಾಸಿಮಾಡಿ’. ಇಂಥ ಪ್ರತಿಜ್ಞೆ ಸ್ವೀಕಾರ ನಡೆದಿದ್ದರೆ ಅದು ಲಂಚ ವಿರೋಧಿ ಮನೋಭಾವ ಹೆಚ್ಚಿಸಲು ಇನ್ನೂ ಹೆಚ್ಚಿನ ಪರಿಣಾಮಕಾರಿ ನಡೆಯಾಗುತ್ತಿತ್ತು ಅಲ್ಲವೇ?!

ಡಾ. ಜಿ.ಬೈರೇಗೌಡ, ಬೆಂಗಳೂರು

ಸೈ-ಹಬ್: ‘ನ್ಯಾಯಯುತ ಬಳಕೆ’ಗೆ ಜಯ?

‘ಸೈ-ಹಬ್: ಒಂದು ನೈತಿಕ ಜಿಜ್ಞಾಸೆ’ ಎಂಬ ಎಚ್.ಕೆ.ಶರತ್ ಅವರ ಲೇಖನ (ಸಂಗತ, ಅ. 17) ಮಾಹಿತಿಪೂರ್ಣವಾಗಿದೆ. ಸೈ-ಹಬ್‌ಗೆ (Sci-Hub) ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್‌ನಲ್ಲಿ ದಾವೆ ಹೂಡಿರುವ ದೈತ್ಯ ಪ್ರಕಾಶನ ಸಂಸ್ಥೆಗಳಾದ ಎಲ್ಸ್‌ವೀರ್, ವಿಲೇ ಪ್ರೈವೇಟ್ ಲಿಮಿಟೆಡ್ ಮತ್ತು ಅಮೆರಿಕನ್ ಕೆಮಿಕಲ್ ಸೊಸೈಟಿ ವಿರುದ್ಧ ಭಾರತದ ಸಂಶೋಧಕರ ವಲಯದಿಂದ ತೀವ್ರ ಪ್ರತಿರೋಧ ವ್ಯಕ್ತವಾಗಿದೆ. ಯಾವುದೇ ಆರ್ಥಿಕ ಹಿತದೃಷ್ಟಿಯಿಂದ ಈ ಪ್ರಕಾಶಕರ ಲೇಖನಗಳನ್ನು ಬಳಸದೆ ಕೇವಲ ಸಂಶೋಧನಾ ದೃಷ್ಟಿಯಿಂದ ಸೈ-ಹಬ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುತ್ತಿರುವುದು ಕಾಪಿರೈಟ್ ನಿಯಮದ ಉಲ್ಲಂಘನೆಯಲ್ಲ ಎನ್ನುವ ವಾದ ಮಾಡಲಾಗುತ್ತಿದೆ.

ಸೈ-ಹಬ್ ಸ್ಥಾಪಕರಾದ ಅಲೆಕ್ಸಾಂಡ್ರಾ ಎಲ್ಬಾಕ್ಯಾನ್ ಅವರ ವಿರುದ್ಧ ಅಮೆರಿಕ ಸೇರಿದಂತೆ ಕೆಲ ದೇಶಗಳಲ್ಲಿ ಪ್ರಕಾಶನ ಸಂಸ್ಥೆಗಳು ಕಾನೂನು ಹೋರಾಟದಲ್ಲಿ ಜಯ ಗಳಿಸಿದ್ದು, ಅವರಿಗೆ ಅಪಾರ ಮೊತ್ತದ ದಂಡ ವಿಧಿಸಲಾಗಿದೆ. ಜೊತೆಗೆ ಸೈ-ಹಬ್ ಜಾಲತಾಣವನ್ನು ನಿಷೇಧಿಸಲಾಗಿದೆ. ಈ ಯಾವ ದಾವೆಗಳ ವಿರುದ್ಧವೂ ಸ್ಥಾಪಕರು ಕಾನೂನು ಹೋರಾಟ ಮಾಡಿಲ್ಲ. ಅದರೆ ಭಾರತದಲ್ಲಿ ಈ ಪ್ರಕಾಶನ ಸಂಸ್ಥೆಗಳು ಹೂಡಿರುವ ದಾವೆ ವಿರುದ್ಧ ತಮ್ಮ ಪ್ರತಿನಿಧಿಯ ಮೂಲಕ ಮೊದಲ ಬಾರಿಗೆ ಕಾನೂನು ಹೋರಾಟದಲ್ಲಿ ತೊಡಗಿದ್ದಾರೆ. ಇದು ಜಗತ್ತಿನ ಸಂಶೋಧಕರಲ್ಲಿ ಹೊಸ ಆಶಾಭಾವನೆ ಮೂಡಿಸಿದೆ.

ಜೊತೆಗೆ ಭಾರತದ ಕಾಪಿರೈಟ್ ಕಾಯ್ದೆ ಪ್ರಕಾರ, ಕೆಲ ಸಂದರ್ಭಗಳಲ್ಲಿ ಅಂದರೆ ಖಾಸಗಿ ಅಧ್ಯಯನಕ್ಕೆ ಮತ್ತು ಸಂಶೋಧನೆಗೆ ಸಂಬಂಧಿಸಿದಂತೆ ಕೆಲ ಪುಸ್ತಕಗಳ ಭಾಗಗಳನ್ನು ಮತ್ತು ಸಂಶೋಧನಾ ಲೇಖನಗಳನ್ನು ಬಳಸುವುದು ‘ನ್ಯಾಯಯುತ ಬಳಕೆ’ ಎಂದು ಪರಿಗಣಿಸಲಾಗಿದ್ದು, ಇದು ಕೃತಿಸ್ವಾಮ್ಯದ ಉಲ್ಲಂಘನೆಯಾಗುವುದಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳಲಾಗಿದೆ. ದೆಹಲಿ ಫೋಟೊಕಾಪಿ ಪ್ರಕರಣದಲ್ಲಿ ಕೂಡ ಪ್ರಸಿದ್ಧ ಪ್ರಕಾಶನ ಸಂಸ್ಥೆಗಳಾದ ಕೇಂಬ್ರಿಜ್ ಯೂನಿವರ್ಸಿಟಿ ಪ್ರೆಸ್ ಮತ್ತು ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್‌ಗಳು ದೆಹಲಿ ವಿಶ್ವವಿದ್ಯಾಲಯದ ರಾಮೇಶ್ವರಿ ಫೋಟೊಕಾಪಿ ಅಂಗಡಿ ವಿರುದ್ಧ ಹೂಡಿದ್ದ ಕಾಪಿರೈಟ್ ಉಲ್ಲಂಘನೆಯ ದಾವೆಯನ್ನು ಹಿಂಪಡೆದಿವೆ. ಇದನ್ನು ನೋಡಿದರೆ ಭಾರತದಲ್ಲಿ ಸೈ-ಹಬ್ ಬಳಕೆಯನ್ನು ನಿಲ್ಲಿಸಲು ಕಷ್ಟಸಾಧ್ಯ ಎನ್ನುವುದು ಸಂಶೋಧಕರ ಆಶಾಭಾವನೆ.

ವಸಂತ ರಾಜು ಎನ್., ತಲಕಾಡು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.





ಮೌನಕ್ಕೆ ಜಾರಿದ ಪುನೀತ್ ಪತ್ನಿ

ಬೆಂಗಳೂರು: ಕಂಠೀರವ ಕ್ರೀಡಾಂಗಣದಲ್ಲಿ ಪುನೀತ್ ರಾಜ್‌ಕುಮಾರ್ ಪಾರ್ಥಿವ ಶರೀರದ ಎದುರು ಕುಳಿತಿದ್ದ ಅವರ ಪತ್ನಿ ಅಶ್ವಿನಿ, ನಿಧನದಿಂದ ಆಘಾತಕ್ಕೆ ಒಳಗಾಗಿ ಮೌನಕ್ಕೆ ಜಾರಿದ್ದರು. ಅಂತಿಮ ದರ್ಶನಕ್ಕೆ ಬಂದಿದ್ದ ಆಪ್ತರು, ತಮ್ಮತ್ತ ಸಂತೈಸಲು ಬಂದಾಗ ಕಣ್ಣೀರಿಟ್ಟರು.

ಅಭಿಮಾನಿಗಳು, 'ಅಪ್ಪು... ಅಪ್ಪು...' ಎಂದು ರೋದಿಸಿದಾಗ ಅಶ್ವಿನಿ ಅವರ ಕಣ್ಣುಗಳು ಒದ್ದೆಯಾದವು. ಅವರ ಪಕ್ಕದಲ್ಲಿ ಕುಳಿತಿದ್ದ ರಾಘವೇಂದ್ರ ರಾಜ್‌ಕುಮಾರ್ ಪತ್ನಿ ಮಂಗಳಾ, ಉಮ್ಮಳಿಸಿ ಬರುತ್ತಿದ್ದ ದುಃಖವನ್ನು ತಡೆದುಕೊಂಡು ಅಶ್ವಿನಿ ಅವರಿಗೆ ಧೈರ್ಯ ತುಂಬಿದರು.

ರಾಘವೇಂದ್ರ ರಾಜ್‌ಕುಮಾರ್, ಭಾರವಾದ ಮನಸ್ಸಿನಿಂದ ತಮ್ಮನ ಪಾರ್ಥೀವ ಶರೀರವನ್ನು ತದೇಕ ಚಿತ್ತದಿಂದ ನೋಡುತ್ತಾ ಕುಳಿತಿದ್ದರು. ಕಣ್ಣಿನಿಂದ ಜಾರುತ್ತಿದ್ದ ಹನಿಗಳನ್ನು ಒರೆಸಿಕೊಳ್ಳುತ್ತಿದ್ದರು.

ಶಿವರಾಜ್‌ಕುಮಾರ್, ತಮ್ಮನ ಮೇಲೆ ಅಭಿಮಾನಗಳು ಇಟ್ಟಿರುವ ಪ್ರೀತಿ ಕಂಡು ಭಾವುಕರಾಗುತ್ತಿದ್ದರು. ವಿನಯ್ ಹಾಗೂ ಯುವ ರಾಜ್‌ಕುಮಾರ್ ಪಾರ್ಥಿವ ಶರೀರದ ಜೊತೆಯೇ ಇದ್ದರು. ಸದಾ ಕಾಲ ತಮ್ಮನ್ನು ಹುರಿದುಂಬಿಸುತ್ತಿದ್ದ ಅಪ್ಪುವಿನ ಪಾರ್ಥಿವ ಶರೀರದ ದರ್ಶನ ಪಡೆದ ಯುವ ನಟ–ನಟಿಯರು, ಕಣ್ಣೀರಿಟ್ಟರು.



ಕಂಠೀರವ ಕ್ರೀಡಾಂಗಣದಲ್ಲಿ ಪುನೀತ್ ರಾಜಕುಮಾರ್ ಪತ್ನಿ ಅಶ್ವಿನಿ ಪುನೀತ್ ರಾಜಕುಮಾರ್ ಮತ್ತು ಕುಟುಂಬದವರು ದುಃಖಿತರಾಗಿರುವ ದೃಶ್ಯ ಪ್ರಜಾವಾಣಿ ಚಿತ್ರ/ ಎಂ.ಎಸ್‌ ಮಂಜುನಾಥ್

ಕಾಣದಂತೆ ಮಾಯವಾದನು...

ಒಂದನೇ ಪುಟದಿಂದ

ಮಟ್ಟಸ ಎತ್ತರದ, ಕೃಷ್ಣವರ್ಣದ ಪುನೀತ್ ಎಲ್ಲರೊಳಗೊಂದಾಗುವ ಹುಡುಗನಂತಿದ್ದರು. ಗುಂಪಿನಿಂದ ಭಿನ್ನವಾಗಿ ಕಾಣಿಸುತ್ತಿದ್ದುದು ಅವರ ನಗು. ಮಗುವಿನ ಮೋರೆಯಲ್ಲಿ ಸುಳಿದುಹೋಗುವ ಮಂದಹಾಸಕ್ಕೆ ಸೋಲದವರಾರು? ಪುನೀತ್‌ರ ನಗುವೂ ಅಷ್ಟೇ – ತುಟಿಯಂಚಿನಲ್ಲಿ ಅಂತಃಕರಣವೇ ಅರಳಿದಂತಿರುತ್ತಿತ್ತು.

ಪುನೀತ್ ಗಳಿಸಿದ ಜನಪ್ರಿಯತೆಗೆ ನಟಿಸಿದ ಸಿನಿಮಾಗಳಷ್ಟೇ ಪ್ರಯತ್ನಪೂರ್ವಕವಾಗಿ ಅವರು ರೂಢಿಸಿಕೊಂಡ ವ್ಯಕ್ತಿತ್ವವೂ ಕಾರಣವಾಗಿತ್ತು. ರಾಜ್‌ಕುಮಾರ್ ಅವರನ್ನು ಪುನೀತ್ ಅವರಲ್ಲಿ ಕಂಡು ಪುಳಕಗೊಳ್ಳುತ್ತಿದ್ದವರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿತ್ತು.

'ಜನರ ಪ್ರೀತಿ ಅಪ್ಪ ಅಮ್ಮನ ಮೂಲಕ ಬಂದದ್ದು. ನನ್ನೆಲ್ಲ ಸಾಧನೆಗೆ ಅಪ್ಪಾಜಿ ಅಮ್ಮನ ಆಶೀರ್ವಾದವೂ ಕಾರಣ. ಬಹಳಷ್ಟು ಕಡೆ ನನ್ನನ್ನು 'ಅಣ್ಣಾವ್ರ ಮಗ' ಎಂದೇ ಗುರ್ತಿಸುತ್ತಾರೆ' ಎಂದು ಹೇಳಿಕೊಳ್ಳುತ್ತಿದ್ದ ಪುನೀತ್, 'ಅಣ್ಣಾವ್ರ ಮಗ' ಗೌರವಕ್ಕೆ ತಕ್ಕಂತೆ ತಮ್ಮ ವ್ಯಕ್ತಿತ್ವವನ್ನು ರೂಢಿಸಿಕೊಳ್ಳಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುತ್ತಿದ್ದರು.

'ವೈಯಕ್ತಿಕ ಜೀವನದಲ್ಲಿ ಹಾಗೂ ತೆರೆಯ ಮೇಲೆ ಅಶ್ಲೀಲವಾಗಿ ನಡೆದುಕೊಳ್ಳೋದು ಅಥವಾ ಕಾಣಿಸಿಕೊಳ್ಳೋದು ನನಗಿಷ್ಟವಿಲ್ಲ' ಎಂದು ಸಂದರ್ಶನವೊಂದರಲ್ಲಿ ಹೇಳಿದ್ದರು. ರಾಜ್‌ಕುಮಾರ್ ಅವರ ಜೀವನದ ಆದರ್ಶ ಅವರ ಮಗನದೂ ಆಗಿತ್ತು. ತನ್ನ ಓರಗೆಯ ಅನೇಕ ನಟರು ಮನೆಯ ಜಗಳವನ್ನು ಬೀದಿಗೆ ತಂದುಕೊಂಡರೆ, ವೃತ್ತಿಜೀವನ ಹಾಗೂ ಕುಟುಂಬ ಜೀವನ – ಎರಡರಲ್ಲೂ ಪುನೀತ್ ಶಿಸ್ತು ಮತ್ತು ಘನತೆ ಕಾಪಾಡಿಕೊಂಡಿದ್ದರು.

ಅಪ್ಪನ ಬಿಂಬವನ್ನು ಜನ ಮಗನಲ್ಲಿ ಕಂಡರೂ, ಪುನೀತ್ ಅವರಿಗೆ ತಮ್ಮ ಸಾಮರ್ಥ್ಯ ಮತ್ತು ಮಿತಿಯ ಬಗ್ಗೆ ಸ್ಪಷ್ಟ ಅರಿವಿತ್ತು. 'ಅಪ್ಪಾಜಿ ಮಟ್ಟ ತಲುಪುವುದಿರಲಿ, ಅಭಿಮಾನಿಯಾಗಿ ಅವರೊಂದಿಗೆ ಹೋಲಿಸಿಕೊಳ್ಳುವುದೂ ನನ್ನಿಂದ ಸಾಧ್ಯವಿಲ್ಲ' ಎನ್ನುತ್ತಿದ್ದರು.

'ಅಪ್ಪಾಜಿ ವರ್ಚಸ್ಸು ನಿಮಗೆ ಎಲ್ಲಿಂದ ಬರಬೇಕು ಎಂದು ನನ್ನ ಹೆಂಡತಿಯೇ ಆಗಾಗ ಹೇಳ್ತಿರ್ತಾಳೆ' ಎಂದು ತಮ್ಮನ್ನು ತಾವು ತಮಾಷೆ ಮಾಡಿಕೊಳ್ಳುವುದು ಅವರಿಗೆ ಸಾಧ್ಯವಾಗುತ್ತಿತ್ತು. ಆದರೂ, ಪುನೀತ್ ಅವರೊಂದಿಗೆ ಒಡನಾಡಿದವರಿಗೆ, ರಾಜ್ ಉದಾತ್ತ ವ್ಯಕ್ತಿತ್ವದ ಬೋನ್ಸಾಯ್ ಕಲಾಕೃತಿಯಂತೆ ಅಪ್ಪು ಕಾಣಿಸುತ್ತಿದ್ದರು.

ಕುಟುಂಬವತ್ಸಲ: ಪುನೀತ್ ಕುಟುಂಬವತ್ಸಲ ವ್ಯಕ್ತಿ. ಅವರ ನಗು–ನೈತಿಕತೆಯ ಶಕ್ತಿ ಪತ್ನಿ ಅಶ್ವಿನಿ ಹಾಗೂ ಮಕ್ಕಳಾದ ಧೃತಿ ಮತ್ತು ವಂದನಾ ಆಗಿದ್ದರು. ಅನಾರೋಗ್ಯದಿಂದ ಜರ್ಝರಿತಗೊಂಡಿದ್ದ ರಾಘಣ್ಣ ಚೇತರಿಸಿಕೊಳ್ಳಲು ಎಲ್ಲ ರೀತಿಯಿಂದಲೂ ಬೆಂಬಲವಾಗಿ ನಿಂತಿದ್ದರು.

ಕಲಾವಿದನಾಗಿ ಸಿನಿಮಾಗಳಲ್ಲಿಯೂ ಕೌಟುಂಬಿಕ ಮೌಲ್ಯಗಳನ್ನು ಬಿಂಬಿಸುವುದು ಅವರಿಗೆ ಇಷ್ಟವಾಗುತ್ತಿತ್ತು. 'ಅರಸು', 'ಆಕಾಶ್', 'ಮಿಲನ', 'ಪೃಥ್ವಿ', 'ಮೈತ್ರಿ', 'ಪರಮಾತ್ಮ', 'ರಾಜಕುಮಾರ' – ಈ ಎಲ್ಲ ಸಿನಿಮಾಗಳಲ್ಲಿನ ಸಾಮಾನ್ಯ ಅಂಶ, ಅವುಗಳು ಮನುಷ್ಯ ಸಂಬಂಧಗಳ ಬಗ್ಗೆ ಮಾತನಾಡುವುದು. ಇಂಥ ಸುಂದರ ಸ್ವಪ್ನಗಳ ಪಟ್ಟಿಯನ್ನು ಬೇರೊಬ್ಬ ಸಮಕಾಲೀನ ನಟನ ಸಿನಿಮಾಗಳಿಂದ ಹೆಕ್ಕುವುದು ಸಾಧ್ಯವಿಲ್ಲ ಎನ್ನುವುದೇ, ಕನ್ನಡ ಚಿತ್ರರಂಗದಲ್ಲಿ ಪುನೀತ್‌ರ ಸ್ಥಾನ ಏನಾಗಿತ್ತು ಹಾಗೂ ಕನ್ನಡ ಸಮಾಜಕ್ಕೆ ಪುನೀತ್ ಯಾಕೆ ಮುಖ್ಯವಾಗಿದ್ದರು ಎನ್ನುವುದನ್ನು ಹೇಳುವಂತಿದೆ.

ಸಿನಿಮಾಗಳಿಂದ ಸಾಮಾಜಿಕ ಪರಿಣಾಮ ಸಾಧ್ಯವಿಲ್ಲ ಎನ್ನುವಂತೆ ಯುವನಟರೆಲ್ಲ ಮನರಂಜನೆಯ ಸೂತ್ರದ ಹಿಂದೆ ಬಿದ್ದಿರುವಾಗ, 'ಸಿನಿಮಾದಲ್ಲಿ ಸಂದೇಶ ಇರಬೇಕು. ಆದರದು ವಾಚ್ಯವಾಗಿ ಇರಬೇಕಾಗಿಲ್ಲ' ಎನ್ನುವುದು ಪುನೀತ್‌ರ ನಂಬಿಕೆ ಯಾಗಿತ್ತು. ದೀನದುರ್ಬಲರಿಗೆ ನೆರವಾಗುವ ಸಾಮಾಜಿಕ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಕೊಂಡಿದ್ದರೂ, ಪ್ರದರ್ಶನಪ್ರಿಯತೆಯಿಂದ ದೂರವುಳಿದಿದ್ದರು. ಫ್ಯಾಮಿಲಿ ಆ್ಯಕ್ಟರ್ ಎನ್ನುವ ಇಮೇಜಿದ್ದರೂ, ಅದಕ್ಕೆ ಅಂಟಿಕೊಳ್ಳಲು ಪುನೀತ್ ಬಯಸುತ್ತಿರಲಿಲ್ಲ. ನಟನಾಗಿ ಇಮೇಜ್ ನಂಬುವುದಿಲ್ಲ ಎನ್ನುತ್ತಿದ್ದ ಅವರು, 'ಜಾಕಿ'ಯಂಥ ಸಿನಿಮಾಗಳಲ್ಲಿ ಉತ್ಸಾಹದಿಂದಲೇ ಕಾಣಿಸಿಕೊಂಡಿದ್ದರು.

ಬಾಲನಟನಿಂದ ಆರಂಭವಾದ ಸಾರ್ಥಕ ಚಿತ್ರಯಾನ

ವರ್ಷ ತುಂಬುವ ಮೊದಲೇ 'ಪ್ರೇಮದ ಕಾಣಿಕೆ' ಚಿತ್ರದಲ್ಲಿ ಕಾಣಿಸಿಕೊಂಡಿದ್ದ ಲೋಹಿತ್ (ಪುನೀತ್‌ರ ಮೊದಲ ಹೆಸರು), ಬಾಲನಟನಾಗಿ ಜನಪ್ರಿಯತೆಯನ್ನೂ ರಾಷ್ಟ್ರಪ್ರಶಸ್ತಿಯನ್ನೂ ಗಳಿಸಿದ ಪ್ರತಿಭಾವಂತ. 'ಚಲಿಸುವ ಮೋಡಗಳು', 'ಎರಡು ನಕ್ಷತ್ರಗಳು', 'ಭಾಗ್ಯವಂತ' ಬಾಲನಟನಾಗಿ ಅವರಿಗೆ ಹೆಸರು ತಂದುಕೊಟ್ಟ ಕೆಲವು ಚಿತ್ರಗಳು. 'ಭಕ್ತಪ್ರಹ್ಲಾದ' ಚಿತ್ರದಲ್ಲಿ ರಾಜ್‌ಕುಮಾರ್ ಅವರ ಹಿರಣ್ಯಕಶ್ಯಪು ಪಾತ್ರದ ಆರ್ಭಟದ ಎದುರು, ಭಕ್ತಿಯೇ ಮೂರ್ತಿವೆತ್ತಂತ ಬಾಲಕ ಪ್ರಹ್ಲಾದನ ಪಾತ್ರದಲ್ಲಿ ಪುನೀತ್ ದಿಟ್ಟವಾಗಿ, ಮನೋಜ್ಞವಾಗಿ ನಟಿಸಿದ್ದರು. ಎನ್. ಲಕ್ಷ್ಮೀನಾರಾಯಣ್ ನಿರ್ದೇಶನದ 'ಬೆಟ್ಟದ ಹೂವು' ಚಿತ್ರದಲ್ಲಿ – ರಾಮಾಯಣ ಪುಸ್ತಕ ಹಾಗೂ ಹರಕು ಬದುಕಿನ ಆಯ್ಕೆ ಎದುರಾದಾಗ ಬದುಕಿನ ಅನಿವಾರ್ಯತೆಯನ್ನೇ ಆಯ್ದುಕೊಳ್ಳುವ ರಾಮುವಿನ ಪಾತ್ರ ನಿರ್ವಹಣೆ, 'ಅತ್ಯುತ್ತಮ ಬಾಲನಟ' ರಾಷ್ಟ್ರಪ್ರಶಸ್ತಿ ತಂದುಕೊಟ್ಟಿತ್ತು. 'ಚಲಿಸುವ ಮೋಡಗಳು' ಹಾಗೂ 'ಎರಡು ನಕ್ಷತ್ರಗಳು' ಸಿನಿಮಾಗಳಲ್ಲಿನ ನಟನೆಗಾಗಿ ಅತ್ಯುತ್ತಮ ಬಾಲನಟ ರಾಜ್ಯಪ್ರಶಸ್ತಿ ದೊರೆತಿತ್ತು.

'ಅಪ್ಪು' (2002) ಚಿತ್ರದ ಮೂಲಕ ಪ್ರೌಢ ನಾಯಕನಾಗಿ ಚಿತ್ರರಂಗದಲ್ಲಿ ಎರಡನೇ ಇನಿಂಗ್ಸ್ ಆರಂಭಿಸಿದ ಪುನೀತ್, ನಂತರದ ಎರಡು ದಶಕಗಳ ಸಿನಿಮಾ ಜೀವನದಲ್ಲಿ ಸೋಲು ಕಂಡಿದ್ದು ತೀರಾ ಕಡಿಮೆ. ಲಾಲಿತ್ಯ ಹಾಗೂ ಹುರುಪು ತುಂಬಿದ್ದ ನೃತ್ಯದ ಮೂಲಕ ಯುವಜನರನ್ನು ಸೆಳೆದಿದ್ದರು. 'ಮಿಲನ', 'ಆಕಾಶ್', 'ಅರಸು' ರೀತಿಯ ಚಿತ್ರಗಳೊಂದಿಗೆ 'ಜಾಕಿ', 'ಹುಡುಗರು', 'ಅಣ್ಣಾಬಾಂಡ್'ನಂಥ ಒರಟು ಹುಡುಗರ ಪಾತ್ರಗಳಿಗೂ ಜೀವತುಂಬಿದ್ದರು. 'ಮಿಲನ', 'ಜಾಕಿ' ಚಿತ್ರಗಳಲ್ಲಿನ ಪಾತ್ರಪೋಷಣೆಗಾಗಿ ಅತ್ಯುತ್ತಮ ನಟ ರಾಜ್ಯಪ್ರಶಸ್ತಿ ಪಡೆದಿದ್ದರು.

ಕಿರುತೆರೆಯ 'ಕನ್ನಡದ ಕೋಟ್ಯ ಧಿಪತಿ' ಪುನೀತ್ ರಾಜ್‌ಕುಮಾರ್ ಜನಪ್ರಿಯತೆಯನ್ನು ಮತ್ತಷ್ಟು ಎತ್ತರಿಸಿದ ಕಾರ್ಯಕ್ರಮ. ಹಿಂದಿಯಲ್ಲಿ ಅಮಿತಾಭ್ ಬಚ್ಚನ್ ನಿರ್ವಹಿಸುವ ನಿರೂಪಣೆಯ ಹೊಣೆಗಾರಿಕೆಯನ್ನು ಕನ್ನಡದಲ್ಲಿ ಪುನೀತ್ ನಿಭಾಯಿಸಿದ್ದರು. ಆ ಶೋನಲ್ಲಿ ಜನರ ಗಮನಸೆಳೆದದ್ದು ತಾರಾವರ್ಚಸ್ಸಲ್ಲ – ಆ ವರ್ಚಸ್ಸನ್ನು ಮೀರಿದ ಸರಳತೆ ಹಾಗೂ ಮರುಳುಗೊಳಿಸುವ ನಗು.

ಪುನೀತ್ ಬಹುದೊಡ್ಡ ಕನಸು ಗಾರ. ಉತ್ತಮ ಕಥೆಯೊಂದಿಗೆ ತಾಂತ್ರಿಕವಾಗಿಯೂ ಉತ್ತಮವಾಗಿರುವ ಸಿನಿಮಾಗಳನ್ನು ಕನ್ನಡದಲ್ಲಿ ರೂಪಿಸಬೇಕು ಎನ್ನುವ ಮಹತ್ವಾಕಾಂಕ್ಷೆ ಅವರದಾಗಿತ್ತು. 'ಕಥೆ, ಚಿತ್ರಕಥೆ, ತಂತ್ರಜ್ಞಾನ ಉತ್ತಮವಾಗಿರುವ ಒಳ್ಳೆಯ ಚಿತ್ರಗಳನ್ನು ನಾವು ರೂಪಿಸಬೇಕು. ಕಥೆಯೊಂದಿಗೆ, ನಿರ್ದೇಶಕ ತಾಂತ್ರಿಕವಾಗಿ ಶಕ್ತಿಶಾಲಿ ಆಗಿರೋದು ಬಹಳ ಮುಖ್ಯ' ಎಂದು ನಂಬಿದ್ದ ಅವರು, ತಮ್ಮ ವಿಚಾರಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ನಿರ್ಮಾಣಸಂಸ್ಥೆ ಆರಂಭಿಸಿದ್ದರು; ಹೊಸ ಪ್ರತಿಭೆಗಳಿಗೆ – ಪ್ರಯೋಗಗಳಿಗೆ ಬೆಂಬಲವಾಗಿ ನಿಂತಿದ್ದರು.

ದೇಹದಂಡನೆಗೂ ರಾಜ್ ಪುತ್ರ ರಿಗೂ ತಾಳಮೇಳ ಇದ್ದಂತಿಲ್ಲ. ಜಿಮ್‌ನಲ್ಲಿ ಬೆವರು ಬಸಿಯುವಾಗ ಪಾರ್ಶ್ವವಾಯುವಿಗೆ ತುತ್ತಾಗಿದ್ದ ರಾಘ ವೇಂದ್ರ ರಾಜ್‌ಕುಮಾರ್ ಇನ್ನೂ ಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಶಿವರಾಜ್‌ಕುಮಾರ್ ಹಿಂದೊಮ್ಮೆ ಅನಾರೋಗ್ಯಕ್ಕೆ ತುತ್ತಾದಾಗ, ವಿಪರೀತವಾಗಿ ದೇಹ ದಂಡಿಸಿದ್ದೇ ಕಾರಣ ಎನ್ನಲಾಗಿತ್ತು. ಈಗ ಪುನೀತ್ ದೇಹದಂಡನೆ ಸಮಯದಲ್ಲೇ ಕುಸಿದು ಕೊನೆಯುಸಿರೆಳೆ ದಿದ್ದಾರೆ. ಶಿವರಾಜ್‌ಕುಮಾರ್ ವೃತ್ತಿಜೀವನಕ್ಕೆ ಇಪ್ಪತ್ತೈದು ವರ್ಷಗಳು ತುಂಬಿದ ಸಂದರ್ಭದಲ್ಲಿ ನಡೆದ ಸಂತೋಷಕೂಟದಲ್ಲಿ, ದೇಹದಾರ್ಢ್ಯ ಕಾಪಾಡಿಕೊಳ್ಳಲು ತಮ್ಮ ಮಕ್ಕಳು ಪಡುವ ಪಡಿಪಾಟಲು ಬಗ್ಗೆ ಕಾಳಜಿಯಿಂದ ಮಾತನಾಡಿದ್ದ ಪಾರ್ವತಮ್ಮನವರು – 'ಮಕ್ಕಳ ಹೊಟ್ಟೆ ನೋಡಿದರೆ ಸಂಕಟವಾಗುತ್ತೆ' ಎಂದು ನೊಂದುಕೊಂಡಿದ್ದರು. 2006ರಲ್ಲಿ ರಾಜ್‌ಕುಮಾರ್; 2017ರಲ್ಲಿ ಪಾರ್ವತಮ್ಮ; ಈಗ, 2021ರಲ್ಲಿ ಪುನೀತ್ ರಾಜ್‌ಕುಮಾರ್. ಹದಿನೈದು ವರ್ಷಗಳ ಅಂತರದ ಈ ಮೂರು ಸಾವುಗಳು ಕುಟುಂಬವೊಂದಕ್ಕಾದ ನಷ್ಟವಲ್ಲ – 'ಕನ್ನಡ ಕುಟುಂಬ'ಕ್ಕಾದ ನಷ್ಟ.

ಗಿರಿರಾಜ್ ನಿರ್ದೇಶನದ 'ಮೈತ್ರಿ' ಸಿನಿಮಾದ ಕೊನೆಯಲ್ಲಿ, ನಾಯಕನಟ ಹಾಗೂ ಹಿರಿಯವಿಜ್ಞಾನಿ ಭೇಟಿಯಾಗುವ ಸನ್ನಿವೇಶವಿದೆ. ಮಲಯಾಳಂನ ಮೋಹನ್‌ಲಾಲ್ ಪೋಷಿಸಿದ್ದ ವಿಜ್ಞಾನಿಯ ಪಾತ್ರ ನಾಯಕನನ್ನು ಉದ್ದೇಶಿಸಿ – 'ನಿಮ್ಮ ತಂದೆ ಈಗ ಇದ್ದಿದ್ದರೆ ನಿಮ್ಮ ಬಗ್ಗೆ ಹೆಮ್ಮೆಪಡುತ್ತಿದ್ದರು' ಎಂದು ಉದ್ಗರಿಸುತ್ತದೆ. ಅದು ನಾಯಕನಟನೊಬ್ಬನ ವಿಜೃಂಭಿಸುವ ಬಣ್ಣದ ಮಾತಾಗಿರದೆ, ಪುನೀತ್ ವ್ಯಕ್ತಿತ್ವಕ್ಕೆ ಹೊಂದುವ ವಿಶೇಷಣವೇ ಆಗಿದೆ. ಯಾವ ತಂದೆಯಾದರೂ ಹೆಮ್ಮೆಪಡಬಹುದಾದ ಮಗ ಅವರಾಗಿದ್ದರು. ಕನ್ನಡ ಚಿತ್ರರಂಗ ಎನ್ನುವ ಕುಟುಂಬ, ಕರ್ನಾಟಕ ಎನ್ನುವ ಕುಟುಂಬ ಹೆಮ್ಮೆಪಡಬಹುದಾದ ಕಲಾವಿದ ಹಾಗೂ ವ್ಯಕ್ತಿತ್ವ ಅವರದು. ಮೂವತ್ತಾರರ ಶಂಕರ್‌ನಾಗ್ ಸಾವಿಗೀಡಾದಾಗ, ಕನಸುಗಾರನೊಬ್ಬನನ್ನು ಕಳೆದುಕೊಂಡಿದ್ದಕ್ಕಾಗಿ ಕನ್ನಡಿಗರು ಮರುಗಿದ್ದರು. ಅಂತಹುದೇ ಮತ್ತೊಂದು ದುರಂತ–ಆಘಾತ ನಲವತ್ತಾರರ ಪುನೀತ್ ನಿಧನ. ಈ ಸಾವು ನಿತ್ಯ ಅಪೌಷ್ಟಿಕತೆಯಿಂದ ಬಳಲುತ್ತಿರುವ ಕನ್ನಡ ಚಿತ್ರರಂಗವನ್ನು ಮತ್ತಷ್ಟು ಬಡವಾಗಿಸಲಿದೆ.

ಅಪ್ಪುವಿನ ಕ್ರೀಡಾಪ್ರೀತಿ ಅಭಿಮಾನದ ಆಪ್ಯಾಯತೆ

ಬೆಂಗಳೂರು: ಜೀವನದ ಪ್ರಯಾಣದಲ್ಲಿ ಪ್ರೀತಿಯ ಗೆಳಯನಿಗೆ ಇಷ್ಟು ಬೇಗ ವಿದಾಯ ಹೇಳುತ್ತೇನೆ ಎಂದು ಕನಸಿನಲ್ಲಿಯೂ ನೆನೆದಿರಲಿಲ್ಲ. ಅಕ್ಟೋಬರ್ 2ರಂದು ತಮ್ಮ ಮನೆಯಲ್ಲಿ ನಮ್ಮನ್ನು ಕರೆದು ಸತ್ಕರಿಸಿ, ಊಟ ಮಾಡಿಸಿದ್ದರು. ದೆಹಲಿಗೆ ಬಂದಾಗ ಭೇಟಿಯಾಗುವೆ ಎಂದಿದ್ದರು ಅವರ ಆ ಮಾತು, ನಡೆನುಡಿಗಳು ಶಾಶ್ವತ ನೆನಪಾಗಿ ಉಳಿದವು ಎಂದು ಟೋಕಿಯೊ ಪ್ಯಾರಾಲಿಂಪಿಕ್ಸ್ ಬ್ಯಾಡ್ಮಿಂಟನ್ ಪದಕವಿಜೇತ ಸುಹಾಸ್ ಯತಿರಾಜ್ ಹೇಳಿದ್ದಾರೆ.

ಪುನೀತ್ ರಾಜಕುಮಾರ್ ಅವರ ನಿಧನಕ್ಕೆ ಕಂಬನಿ ಮಿಡಿದಿರುವ ಸುಹಾಸ್, ತಮ್ಮ ನೆನಪುಗಳನ್ನು ಹಂಚಿಕೊಂಡಿದ್ದಾರೆ.

'ಅಪ್ಪನಿಗೆ ತಕ್ಕ ಮಗನಾಗಿ, ಕರುಣಾಮಯಿಯಾಗಿ, ಕನ್ನಡಿಗರ ಕಣ್ಮಣಿಯಾಗಿ ಮತ್ತು ಸಾಂಸ್ಕೃತಿಕ ರಾಯಭಾರಿಯಾಗಿ ಪುನೀತ್ ಚಿರಸ್ಥಾಯಿಯಾಗಿದ್ದಾರೆ. ಇಪ್ಪತ್ತೇಳು ದಿನಗಳ ಹಿಂದೆ ನಮ್ಮನ್ನು ತಮ್ಮ ಮನೆಗೆ ಕರೆದು ಸತ್ಕರಿಸಿ, ಮೂರು ಗಂಟೆಗಳ ಕಾಲ ನಮ್ಮೊಂದಿಗೆ ಮಾತನಾಡಿದರು. ತಾವೇ ದೊಡ್ಡ ಸಾಧಕರಾದರೂ ನಮ್ಮ ಪ್ಯಾರಾಲಿಂಪಿಕ್ ಸಾಧನೆಯ ಕುರಿತು ಎಲ್ಲ ಮಾಹಿತಿಗಳನ್ನು ಅಕ್ಕರೆಯಿಂದ ಪಡೆದುಕೊಂಡರು. ಬೆರಗುಕಂಗಳಿಂದ, ತುಂಬು ಪ್ರೀತಿಯಿಂದ ನಮ್ಮನ್ನು ಪ್ರೋತ್ಸಾಹಿಸಿದರು. ಸರಳ, ಸುಂದರ ಗೆಳೆಯನಾದರು' ಎಂದು ಸುಹಾಸ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಕೋಟಿ ಕೋಟಿ ಕನ್ನಡಿಗರ ಹೃದಯ ಗೆದ್ದ ಅವರ ಹೃದಯಕ್ಕೆ ನಮ್ಮೆಲ್ಲರ ಹೃದಯಗಳ ಶಕ್ತಿ ತುಂಬಿ ಮತ್ತೆ ಮರಳಿ ಬರುವಂತಾಗಲಿ ಎಂಬ ಪ್ರಾರ್ಥನೆ ಫಲಿಸಲಿಲ್ಲ. ಅಣ್ಣಾವ್ರು ಹೇಳಿದ ಹಾಗೆ; ಆಡಿಸುವಾತ ಬೇಸರ ಮೂಡಿ ಆಟ ಮುಗಿಸಿದ ಕಂಬನಿ ಧಾರೆ ಹರಿಸಲು ನನ್ನ ಜೀವ ಉಳಿಸಿದ' ಎಂದು ಸುಹಾಸ್ ಭಾವುಕರಾಗಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಬೆಂಗಳೂರಿನ ಈಜುಪಟು ಶ್ರೀಹರಿ ನಟರಾಜ್, ಪ್ಯಾರಾಲಿಂಪಿಕ್ಸ್ ಈಜುಪಟು ನಿರಂಜನ್ ಮುಕುಂದನ್, ಪ್ಯಾರಾ ಕ್ರೀಡಾಪಟು ಖಾತೂನ್ ಅವರನ್ನೂ ಪುನೀತ್ ಮತ್ತು ರಾಘವೇಂದ್ರ ರಾಜಕುಮಾರ್ ಕುಟುಂಬದವರು ಸತ್ಕರಿಸಿದ್ದರು.

ಕ್ರೀಡೆಯ ರಾಯಭಾರಿ: ಯುವಜನಾಂಗದಲ್ಲಿ ಕಣ್ಮಣಿಯಾಗಿದ್ದ ಪುನೀತ್ ಫಿಟ್‌ನೆಸ್ ಮತ್ತು ಕ್ರೀಡಾ ಕ್ಷೇತ್ರದ ಬಗ್ಗೆ ಅಪಾರ ಒಲವು ಹೊಂದಿದ್ದರು.

ಪ್ರೊ ಕಬಡ್ಡಿ ಟೂರ್ನಿಯಲ್ಲಿ ಬೆಂಗಳೂರು ಬುಲ್ಸ್ ತಂಡಕ್ಕೆ, ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಪ್ರಚಾರ ರಾಯಭಾರಿಯಾಗಿದ್ದರು. ಅದಲ್ಲದೇ ಬೆಂಗಳೂರಿನಲ್ಲಿ ಯಾವುದೇ ಮಹತ್ವದ ಕ್ರೀಡಾಕೂಟ, ಪಂದ್ಯಗಳು ನಡೆದರೂ ಅಲ್ಲಿ ಪುನೀತ್ ಇರುತ್ತಿದ್ದರು. ಪ್ರೇಕ್ಷಕರ ಗ್ಯಾಲರಿಯಲ್ಲಿದ್ದು ಆಟಗಾರರನ್ನು ಹುರಿದುಂಬಿಸುತ್ತಿದ್ದರು. ಅಭಿಮಾನಿಗಳೊಂದಿಗೆ ಚಿತ್ರ ತೆಗೆಸಿಕೊಳ್ಳುತ್ತಿದ್ದರು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, 'ಇಷ್ಟು ಬೇಗ ಹೊರಟುಬಿಟ್ಟಿರಲ್ಲ. ಚಿತ್ರರಂಗಕ್ಕೆ ನಿಮ್ಮ ಕಾಣಿಕೆ ದೊಡ್ಡದು' ಎಂದು ಟ್ವೀಟ್ ಮಾಡಿದೆ. ಶುಕ್ರವಾರ ಅವರ ನಿಧನದ ಸುದ್ದಿ ಹೊರಬೀಳುತ್ತಿದ್ದಂತೆಯೇ ಬೆಂಗ ಳೂರು ಫುಟ್‌ಬಾಲ್ ಸಂಸ್ಥೆಯು ತನ್ನ ಪಂದ್ಯಗಳನ್ನು ಸ್ಥಗಿತಗೊಳಿಸಿತು. ಆಟಗಾರರ ಪುನೀತ್ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ ಮಾಡಿದರು.


ಇಂಡಿಯನ್ ಸೂಪರ್ ಲೀಗ್‌ನಲ್ಲಿ ಆಡುವ ಬೆಂಗಳೂರು ಫುಟ್‌ಬಾಲ್ ಕ್ಲಬ್, 'ಸೂರ್ಯನೊಬ್ಬ, ಚಂದ್ರನೊಬ್ಬ, ಈ ಯುವರಾಜನೂ ಒಬ್ಬ' ಎಂದು ಟ್ವೀಟ್ ಮಾಡಿ ಗೌರವ ಸಲ್ಲಿಸಿದೆ.

ಕ್ರಿಕೆಟಿಗರಾದ ದೊಡ್ಡಗಣೇಶ್, ರಾಬಿನ್ ಉತ್ತಪ್ಪ, ಸುನಿಲ್ ಜೋಶಿ, ವೀರೇಂದ್ರ ಸೆಹ್ವಾಗ್, ವೆಂಕಟೇಶ್ ಪ್ರಸಾದ್ ಅವರೂ ಶೋಕ ವ್ಯಕ್ತಪಡಿಸಿದ್ದಾರೆ.



ಚಿತ್ರನಟ ಪುನೀತ್ ರಾಜಕುಮಾರ್ ಅವರೊಂದಿಗೆ ಶ್ರೀಹರಿ ನಟರಾಜ್, ನಿರಂಜನ್ ಮುಕುಂದನ್ ಮತ್ತು ಸುಹಾಸ್ ಯತಿರಾಜ್ ಇದ್ದಾರೆ –ಫೇಸ್‌ಬುಕ್ ಚಿತ್ರಗಳು

ಸ್ನೇಹಪೂರ್ವಕ ವ್ಯಕ್ತಿತ್ವ



ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಪುನೀತ್ ದೊಡ್ಡ ಕಲಾವಿದ, ಅದಕ್ಕಿಂತಲೂ ಹೆಚ್ಚಾಗಿ ವಿನಯವಂತ, ಸ್ನೇಹಶೀಲ, ಸರಳ ನಡೆನುಡಿಯ, ಮುಗ್ಧ ಮನಸ್ಸಿನ ಹೀರೊ. ನಮ್ಮೆಲ್ಲರ ಮನದೊಳಗೆ ಈ ಹೀರೊ ಅಮರ ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದ್ದಾರೆ.

'ಬಾಲನಟನಾಗಿಯೇ ಚಿತ್ರರಂಗಕ್ಕೆ ಕಾಲಿಟ್ಟಿದ್ದ ಪುನೀತ್ ರಾಜ್‌ಕುಮಾರ್ ವಿಶೇಷ ನಟನಾ ಕೌಶಲ ಮತ್ತು ಸ್ನೇಹಪೂರ್ವಕ ವ್ಯಕ್ತಿತ್ವದ ಮೂಲಕ ಎಲ್ಲರ ಪ್ರೀತಿ ಗೌರವಗಳಿಗೆ ಭಾಜನರಾಗಿದ್ದರು. ಜೀವನದಲ್ಲಿ ಅಳವಡಿಸಿಕೊಂಡಿದ್ದ ಸರಳ ನಡೆ ನುಡಿಯಿಂದ ಜನರ ಮನದಲ್ಲಿ ಶಾಶ್ವತವಾದ ಸ್ಥಾನ ಗಳಿಸಿಕೊಂಡಿದ್ದಾರೆ ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದ್ದಾರೆ.



ನಿರ್ಮಲಾನಂದನಾಥ ಸ್ವಾಮೀಜಿ

ಪದಬಂಧ 4763


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕ್ಯಾನ್ಸರ್ ಅನ್ನು ಕನ್ನಡೀಕರಿಸಿ! (3)
4.ಕೆಟ್ಟ ವಾಸನೆಯಿದು (4)
6.ಮಜದಲ್ಲಿರುವ ಮನ್ಮಥ! (4)
8.ಕಣ್ಣಿನಿಂದ ಬರುತ್ತಿರುವ ಪಿಚ್ಚು (3)
11.ಮುದದಿಂದಿರುವ ಅಜ್ಜ (3)
13.ಇದಿನ್ನೂ ಎಳೆ ಮಗು (4)
17.ತಡವಾಗಿ ಖರೀದಿಸಿದ ಅಲಸಂದೆ (4)
18.ಕೊಳೆ ಇಲ್ಲಿದೆ (3)

ಮೇಲಿಂದ ಕೆಳಕ್ಕೆ

1.ಕತ್ತಿ ಚಾಕು ಇತ್ಯಾದಿಗಳ ಅಂಚು (3)
2.ಬಾಜಿ ಕಟ್ಟಲು ಬಂದಿರುವ ಮೋಸಗಾರ (4)
3.ಆಲದ ಮರಕ್ಕೊರಗಿದ ಸೋಮಾರಿ (3)
5.ಪ್ರಿಯತಮನ ನೋಡುವಾಗ ಆವರಿಸಿದ ಕತ್ತಲು (2)
7.ಗತಿಸಿದ ಪುಣ್ಯಪುರುಷರ ಹುಟ್ಟುಹಬ್ಬ (3)
9.ಕೊಡತಕ್ಕ ಹಣ (3)
10.ಕೊನೆಗೆ ಕಾಯ ಕಂಡಾಗಲೇ ಈ ಅನುಮಾನ! (3)
12. ಲೆಕ್ಕ ಬರೆಯುವವನು ಕೈ ಮುಂದಿಟ್ಟಿದ್ದಾನಲ್ಲಾ? (4)
14.ದೇವ ಲೋಕದ ಹಸು (3)
15.ಹರಸುತಲಿದ್ದಾಗ ಕಾಣಿಸಿದ ಮಗ (2)
16. ಕೊನೆಗೆ ಹಣ್ಣಿಟ್ಟರೆ ಇದು ಸಾರ್ಥಕ! (3)



4762ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭ್ರಮನಿರಸನ
4.ಗುಣಾಕಾರ 5.ಚಾಣಾಕ್ಷ
7.ಉದ್ದಾಮ 9.ನಗದು
12.ಗಟಾರ 13.ಕನ್ನಡಕ
15.ವಿಗ್ರಹರಾಧನೆ

ಮೇಲಿಂದ ಕೆಳಕ್ಕೆ:
1.ಭ್ರಷ್ಟಾಚಾರ 2.ನಗು
3.ಮರವೆ 6.ಕ್ಷಮಾದಾನ
7.ಉಮೇದು
8.ಮದುಮಗ
10.ಅರಮನೆ 11.ತಾಕತ್ತು
14.ಕವಿ

ಸುಡೊಕು 5149

2		8		7			6	
			4		2	3		1
	3	1		5			8	
6		4		3			5	
5	7	2	6		9			8
				2			4	
3				1			9	
	2	5	8			6		7
1				6			2	


5148 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಅಕ್ಟೋಬರ್ 30, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಸ್ವಾತಿ ನವಮೀ ಗಂ. 7-34 (ಬೆ. 9-20) ಶನಿವಾರ ನಿತ್ಯ ನಕ್ಷತ್ರ ಆಶ್ಲೇಷ ಗಂ. 6-25 (ಬೆ. 8-53) ಶುಕ್ಲ ನಾಮ ಯೋಗ ಗಂ. 39-45 ಗರಜ ಕರಣ ಗಂ. 7-34 ವಿಷ ಗಂ. 37-14 ಅಮೃತ ಗಂ. 2-19 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-16 ಸೂರ್ಯಾಸ್ತ: 5-50 ಅದೃಷ್ಟ ಸಂಖ್ಯೆ 2 6

ಮೇಷ: ವಿವಾಹ ಸಂಬಂಧ ಮಾತುಕತೆ ನಡೆಸಲಿದ್ದೀರಿ. ಸಾರ್ವಜನಿಕ ಕಾರ್ಯಕ್ರಮದ ಜವಾಬ್ದಾರಿಯನ್ನು ಹೊತ್ತುಕೊಂಡು ಮುನ್ನಡೆಸುವ ಮಹತ್ತರ ಜವಾಬ್ದಾರಿಯೊಂದನ್ನು ಸಮರ್ಥವಾಗಿ ನಿಭಾಯಿಸುವಿರಿ.

ವೃಷಭ: ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ಕುಟುಂಬದಲ್ಲಿ ಹೊಸ ಸದಸ್ಯರೊಬ್ಬರ ಸೇರ್ಪಡೆ ಸಾಧ್ಯತೆ. ಹೈನುಗಾರಿಕೆಯಲ್ಲಿರುವವರಿಗೆ ಸಂತಸದ ದಿನ. ಹೂವು, ತರಕಾರಿ ಹಣ್ಣು ವ್ಯಾಪಾರಿಗಳಿಗೆ ಉತ್ತಮ ಆದಾಯ.

ಮಿಥುನ: ಗೆಳೆಯರೂ ಶತ್ರುಗಳಾಗಿ ಮಾರ್ಪಾಡಾಗುವ ಸಾಧ್ಯತೆಗಳಿದ್ದು, ತೊಂದರೆಗಳನ್ನು ಎದುರಿಸಬೇಕಾದೀತು. ಬಂಧುಗಳು, ಆಪ್ತರುಗಳಿಂದಲೇ ಸ್ವಲ್ಪ ಮಟ್ಟಿನ ಮಾನಸಿಕ ಕಿರಿಕಿರಿ ಉಂಟಾದೀತು.

ಕರ್ಕಾಟಕ: ದೂರದ ಪ್ರವಾಸಕ್ಕೆ ತಯಾರಿ ನಡೆಸುವ ಸಾಧ್ಯತೆ. ಬಹುದಿನಗಳಿಂದ ಅನುಭವಿಸುತ್ತಿರುವ ತೊಂದರೆ ತಾಪತ್ರಯಗಳು ಸ್ವಲ್ಪ ಮಟ್ಟಿಗೆ ದೂರವಾಗಿ ನಿರಾಳತೆ ಮೂಡುವುದು.

ಸಿಂಹ: ಅನಾರೋಗ್ಯದಿಂದ ಬಳಲುತ್ತಿರುವವರು ಸ್ವಲ್ಪ ಮಟ್ಟಿನ ಚೇತರಿಕೆಯನ್ನು ಕಂಡುಕೊಳ್ಳುವಿರಿ. ವ್ಯವಹಾರದಲ್ಲಿನ ನಿರಾಸಕ್ತಿಯಿಂದ ನಷ್ಟ ಅನುಭವಿಸುವ ಸಾಧ್ಯತೆ. ಎಚ್ಚರಿಕೆಯ ನಡೆ ನುಡಿಗಳು ಉತ್ತಮ.

ಕನ್ಯಾ: ಆಪ್ತರ ಸಮಾಗಮನದ ಸಾಧ್ಯತೆ. ಬಹುದಿನಗಳ ನಂತರ ಬಂಧು ಬಾಂಧವರೊಂದಿಗೆ ವಿಚಾರಗಳನ್ನು ಹಂಚಿಕೊಳ್ಳಲಿದ್ದೀರಿ. ವಿವಾಹಾಕಾಂಕ್ಷಿಗಳಿಗೆ ಸಂಬಂಧಗಳು ಕೂಡಿಬರುವ ಸಾಧ್ಯತೆ.

ತುಲಾ: ಪ್ರಮುಖ ಉದ್ದೇಶವೊಂದರ ಸಾಧನೆಗಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದ್ದೀರಿ. ಅಡೆ ತಡೆಗಳ ನಡುವೆಯೂ ಯಶಸ್ಸು ದೊರಕುವುದರಲ್ಲಿ ಸಂದೇಹವಿಲ್ಲ. ದಿನದ ಮಟ್ಟಿಗೆ ವಾಹನ ಚಾಲನೆಯಲ್ಲಿ ಜಾಗರೂಕರಾಗಿರಿ.

ವೃಶ್ಚಿಕ: ಹಿರಿಯರೊಂದಿಗೆ ವಾದ ವಿವಾದಗಳು ಏರ್ಪಡುವ ಸಾಧ್ಯತೆ ಇದ್ದು ಎಚ್ಚರಿಕೆಯ ನಡೆ ಎಲ್ಲದಕ್ಕೂ ಪರಿಹಾರ ನೀಡಬಲ್ಲದು. ವಸ್ತ್ರ ವಿನ್ಯಾಸಕಾರರಿಗೆ, ದರ್ಜಿಗಳಿಗೆ ಉತ್ತಮ ಆದಾಯ ತರುವ ಸಾಧ್ಯತೆ.

ಧನು: ನಿಮ್ಮ ಸಾಮರ್ಥ್ಯದ ಅರಿವು ಇಲ್ಲದಿದ್ದರೂ ಕಾರ್ಯಸಾಧನೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಮಹಿಳೆಯರು ತಮ್ಮ ಕೆಲಸ ಕಾರ್ಯಗಳಲ್ಲಿ ಅತ್ಯಂತ ಜಾಗರೂಕರಾಗಿರುವುದು ಉತ್ತಮ.

ಮಕರ: ಸರಕಾರಿ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುವವರಿಗೆ ಅತ್ಯಂತ ತುರ್ತಿನ ದಿನವಾಗಿದ್ದು, ಕಾರ್ಯಬಾಹುಳ್ಯದಿಂದಾಗಿ ಹೈರಾಣಾಗುವ ಸಾಧ್ಯತೆ. ತಾಳ್ಮೆಯಿಂದಿರುವುದು ಒಳಿತು.

ಕುಂಭ: ಮನೆಯವರೆಲ್ಲರ ಸಹಕಾರದಿಂದ ಮಹತ್ತರ ಸಾಧನೆಯೊಂದಕ್ಕೆ ಮುಂದಡಿ ಇಡಲಿದ್ದೀರಿ. ಸಾಂಘಿಕ ಯತ್ನ ಉತ್ತಮ ಫಲವನ್ನು ನೀಡಲಿದೆ. ಮನೆಯಲ್ಲಿ ಸಂತಸದ ವಾತಾವರಣ.

ಮೀನ: ಅತ್ಯಂತ ಉತ್ಸಾಹದಿಂದ ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವಿರಿ. ಕಲಾ ಪರಿಣತರಿಗೆ ಪ್ರದರ್ಶನಕ್ಕೆ ಉತ್ತಮ ವೇದಿಕೆ ದೊರೆತು ಸಂತಸ ತರಲಿದೆ.

ನಿಮ್ಮ ಜನ್ಮದಿನ 30-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ನೀವು ಪ್ರತಿಯೊಂದು ವಿಚಾರದಲ್ಲಿಯೂ ತುಂಬಾ ಆಸಕ್ತಿಯನ್ನು ತೋರಿಸುವ ಮನೋಭಾವವುಳ್ಳವರಾಗಿದ್ದು ನಿಮ್ಮ ಈ ಗುಣ ಇತರರ ಅನುಮಾನಕ್ಕೆ ಎಡೆಮಾಡಿಕೊಡುವಸಾಧ್ಯತೆ ಇದೆ. ನೀವು ಸದಾ ಕ್ರಿಯಾಶೀಲರಾಗಿದ್ದು ಯಾರ ಗಮನಕ್ಕೂ ಬಾರದಂತೆ ಕಾರ್ಯಸಾಧನೆಯನ್ನು ಮಾಡುವಿರಿ.

ಶನಿವಾರ • ಅಕ್ಟೋಬರ್ 30, 2021 ಪ್ರಜಾವಾಣಿ

ಸಚಿವ ಕೆ.ಎಸ್.ಈಶ್ವರಪ್ಪ ಸಮ್ಮುಖದಲ್ಲಿ ಪ್ರಾತ್ಯಕ್ಷಿಕೆ

ಇಸ್ರೇಲ್‌ನ ವಾಟರ್‌ಜೆಟ್ ಕಂಪನಿಯಿಂದ ತಂತ್ರಜ್ಞಾನ ಅಭಿವೃದ್ಧಿ

ಗಾಳಿಯಿಂದ ನೀರು ತಂತ್ರಜ್ಞಾನ ಪ್ರಾತ್ಯಕ್ಷಿಕೆ

ಬೆಂಗಳೂರು: ಗಾಳಿಯಲ್ಲಿರುವ ತೇವಾಂಶದಿಂದ ಕುಡಿಯುವ ನೀರು ತಯಾರಿಸುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿರುವ ಇಸ್ರೇಲ್‌ನ ವಾಟರ್‌ಜೆಟ್ ಕಂಪನಿ, ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಸಮ್ಮುಖದಲ್ಲಿ ತನ್ನ ವಿನೂತನ ತಂತ್ರಜ್ಞಾನದ ಪ್ರಾತ್ಯಕ್ಷಿಕೆ ನೀಡಿತು.

ಗಾಳಿಯಿಂದ ಕುಡಿಯುವ ನೀರು ತಯಾರಿಸುವ ತಂತ್ರಜ್ಞಾನ ವಿಶ್ವದಲ್ಲೇ ಅಪರೂಪದ್ದು. ವಿಶ್ವದಲ್ಲಿ ಕುಡಿಯುವ ನೀರಿನ ತೀವ್ರ ಕೊರತೆ ಇದ್ದು, ಅದನ್ನು ನಿವಾರಿಸುವ ದಿಸೆಯಲ್ಲಿ ತಂತ್ರಜ್ಞಾನ ವರದಾನ ಎಂದು ಪರಿಗಣಿಸಲಾಗಿದೆ. ಮುಂದಿನ ಒಂದು ದಶಕದಲ್ಲಿ ವಿಶ್ವದ ಶೇ 55 ರಷ್ಟು ಜನ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರಿನ ಕೊರತೆ ಎದುರಿಸಲಿದ್ದಾರೆ. ಆ ಕೊರತೆ ನೀಗಿಸುವಲ್ಲಿ ವಿನೂತನ ನೆರವಾಗಲಿದೆ ಎಂದು ಕಂಪನಿ ಪ್ರತಿನಿಧಿಗಳು ವಿವರಿಸಿದರು.

ಈ ಸಂದರ್ಭದಲ್ಲಿ ಇಸ್ರೇಲ್ ದೇಶದ ದಕ್ಷಿಣ ಭಾರತದ ಕಾನ್ಸುಲ್ ಜನರಲ್ ಜೋನಾಥನ್ ಝಡ್ಕಾ ಅವರೂ ಇದ್ದರು.

ಅನುದಾನ ಹಂಚಿಕೆ: ಗ್ರಾಮ ಪಂಚಾಯಿತಿಗಳಿಂದ ಮೇಲ್ದರ್ಜೆಗೇರಿಸಲಾದ ನಗರ ಸ್ಥಳೀಯ ಸಂಸ್ಥೆಗಳಿಗೆ ನಿಗದಿಪಡಿಸಲಾಗಿರುವ ಅನುದಾನವನ್ನು ತಕ್ಷಣವೇ ಹಂಚಿಕೆ ಮಾಡುವಂತೆ ಸಚಿವ ಕೆ.ಎಸ್.ಈಶ್ವರಪ್ಪ ಸೂಚನೆ ನೀಡಿದರು.

ಪೌರಾಡಳಿತ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಎಂ.ಟಿ.ಬಿ.ನಾಗರಾಜು ಅವರ ಮನವಿ ಮೇರೆಗೆ ವಿಧಾನಸೌಧದಲ್ಲಿ ಶುಕ್ರವಾರ ಈಶ್ವರಪ್ಪ ಅವರು ಹಿರಿಯ ಅಧಿಕಾರಿಗಳ ಸಭೆ ನಡೆಸಿದರು. ಕಳೆದ ಸಾಲಿನಲ್ಲಿ 23 ಗ್ರಾಮ ಪಂಚಾಯಿತಿಗಳನ್ನು 20 ಪಟ್ಟಣ ಪಂಚಾಯಿತಿಗಳು, 2 ಪುರಸಭೆ ಮತ್ತು 1 ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿತ್ತು. ಅವುಗಳಿಗೆ ಅನುದಾನ ಬಿಡುಗಡೆ ಮಾಡದ ಕಾರಣ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಮೇಲ್ದರ್ಜೆಗೇರಿಸಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಕೂಡಲೇ ಅನುದಾನ ವರ್ಗಾಯಿಸಿ, ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡುವಂತೆ ಈಶ್ವರಪ್ಪ ಸೂಚನೆ ನೀಡಿದರು.



ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಎನ್‌ಎಸ್‌ಯುಐ ಸಂಘಟನೆಯ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಯೋಜನೆಗಳ ಸ್ಥಗಿತ ಖಂಡಿಸಿ ವಿದ್ಯಾರ್ಥಿಗಳ ಪ್ರತಿಭಟನೆ

‘ಶೈಕ್ಷಣಿಕ ಯೋಜನೆಗಳನ್ನು ವಿದ್ಯಾರ್ಥಿಗಳಿಂದ ಕಸಿಯದಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಲ್ಯಾಪ್‌ಟಾಪ್–ಟ್ಯಾಬ್ ವಿತರಣೆ ಹಾಗೂ ಬಸ್‌ಪಾಸ್ ಸೇರಿದಂತೆ ಶೈಕ್ಷಣಿಕ ಸೇವೆಗಳನ್ನು ರಾಜ್ಯ ಸರ್ಕಾರವು ಸಮರ್ಪಕವಾಗಿ ಮುಂದುವರಿಸಬೇಕು’ ಎಂದು ಆಗ್ರಹಿಸಿ ಭಾರತ ರಾಷ್ಟ್ರೀಯ ವಿದ್ಯಾರ್ಥಿಗಳ ಒಕ್ಕೂಟದ (ಎನ್‌ಎಸ್‌ಯುಐ) ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

‘ಸರ್ಕಾರಕ್ಕೆ ಹಣಕಾಸಿನ ಕೊರತೆ ಇದೆ ಎಂಬ ಕಾರಣಕ್ಕೆ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಿಗುವ ಯೋಜನೆಗಳನ್ನು ಸ್ಥಗಿತಗೊಳಿಸಿರುವುದು ಖಂಡನೀಯ. ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಹಕಾರಿಯಾಗಬೇಕಿದ್ದ ಸರ್ಕಾರದ ಈ ಧೋರಣೆ ನಿಲ್ಲಬೇಕು’ ಎಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು.

ಎನ್‌ಎಸ್‌ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ಮನೀಶ್ ಜಿ.ರಾಜ್, ‘ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸರ್ಕಾರ ವಿದ್ಯಾರ್ಥಿವೇತನವನ್ನು ಪಾವತಿಸಿಲ್ಲ. ಇದ್ದಕ್ಕಿದ್ದಂತೆ ವಿದ್ಯಾರ್ಥಿವೇತನ ನಿಲ್ಲಿಸಿದರೆ, ವಿದ್ಯಾರ್ಥಿಗಳು ಅರ್ಧದಲ್ಲೇ ಶಿಕ್ಷಣ ನಿಲ್ಲಿಸುವ ಪರಿಸ್ಥಿತಿಗೆ ಸಿಲುಕಿದ್ದಾರೆ. ಹಣಕಾಸಿನ ಕೊರತೆ ಕಾರಣಕ್ಕೆ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಹಕ್ಕಿನಿಂದ ವಂಚಿತರಾಗಬಾರದು’ ಎಂದು ಕಳವಳ ವ್ಯಕ್ತಪಡಿಸಿದರು.

ಉಪಾಧ್ಯಕ್ಷ ಎಸ್.ಜಯೇಂದರ್, ‘ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವುದರಿಂದ ಶಾಲಾ–ಕಾಲೇಜುಗಳಿಗೆ ತಲುಪಲು ಹಾಗೂ ಕಲಿಕೆ ಮುಂದುವರಿಸಲು ನೆರವಾಗುತ್ತದೆ. ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ವರ್ಗಗಳಂತೆ ಸಾಮಾನ್ಯ ವರ್ಗದಲ್ಲೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿದ್ದಾರೆ. ಅವರಿಗೂ ಉಚಿತ ಬಸ್‌ಪಾಸ್ ಸೌಲಭ್ಯ ವಿಸ್ತರಿಸಬೇಕು’ ಎಂದು ಆಗ್ರಹಿಸಿದರು.

‘ಸರ್ಕಾರ ಈ ಹಿಂದೆ ವಿದ್ಯಾರ್ಥಿಗಳ ಶೈಕ್ಷಣಿಕ ಉಪಯೋಗಕ್ಕಾಗಿ ಲ್ಯಾಪ್‌ಟಾಪ್ ಹಾಗೂ ಟ್ಯಾಬ್ ವಿತರಿಸುತ್ತಿತ್ತು. ಆದರೆ, ಈಗ ಆ ಯೋಜನೆಗಳನ್ನೂ ಸ್ಥಗಿತಗೊಳಿಸಿರುವುದು ಬೇಸರದ ಸಂಗತಿ. ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ವಿತರಿಸುವ ಯೋಜನೆಯನ್ನು ತುರ್ತಾಗಿ ಮುಂದುವರಿಸಬೇಕು’ ಎಂದೂ ಆಗ್ರಹಿಸಿದರು.

ಸುದ್ದಿ 2 ನಿಮಿಷ

ದೀಪಾವಳಿ ಹಬ್ಬದ ಪ್ರಯುಕ್ತ ಒಂದು ಸಾವಿರ ಹೆಚ್ಚುವರಿ ಬಸ್

ಬೆಂಗಳೂರು: ದೀಪಾವಳಿ ಪ್ರಯುಕ್ತ ಪ್ರಯಾಣಿಕರ ಅನುಕೂಲಕ್ಕಾಗಿ ನವೆಂಬರ್ 7ರವರೆಗೆ ಒಂದು ಸಾವಿರ ಹೆಚ್ಚುವರಿ ಕೆಎಸ್‌ಆರ್‌ಟಿಸಿ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ.

ಬೆಂಗಳೂರಿನಿಂದ ಧರ್ಮಸ್ಥಳ, ಕುಕ್ಕೆ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ಮೈಸೂರು, ಮಡಿಕೇರಿ, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್ ಹಾಗೂ ಅಂತರರಾಜ್ಯದ ತಿರುಪತಿ, ವಿಜಯವಾಡ, ಹೈದರಾಬಾದ್, ತಿರುವನಂತಪುರ, ಕೋಟಯಂ, ಚೆನ್ನೈ, ಕೊಯಮತ್ತೂರು, ಪುಣೆ, ಪಣಜಿಗೆ ಹಾಗೂ ವಿವಿಧ ಸ್ಥಳಗಳಿಂದ ಬೆಂಗಳೂರಿಗೆ ಹೆಚ್ಚುವರಿ ಬಸ್‌ಗಳ ಸೇವೆ ಇರಲಿದೆ.

‘ಪ್ರಯಾಣದ ದರಗಳಲ್ಲಿ ಯಾವುದೇ ಹೆಚ್ಚಳ ಇರುವುದಿಲ್ಲ. ನಿಗಮದ ವೆಬ್‌ಸೈಟ್ www.ksrtc.karnataka.gov.in ಹಾಗೂ ಬುಕಿಂಗ್ ಕೌಂಟರ್‌ಗಳ ಮೂಲಕ ಮುಂಗಡ ಆಸನ ಕಾಯ್ದಿರಿಸುವ ಸೌಲಭ್ಯ ಕಲ್ಪಿಸಲಾಗಿದೆ’ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

ಕಾನೂನು ಸುಧಾರಣಾ ಸಂಸ್ಥೆ ಜಾಲತಾಣ ಉದ್ಘಾಟನೆ



ಬೆಂಗಳೂರು: ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ಲಾಂಛನದ ಮರು ವಿನ್ಯಾಸ ಮತ್ತು ಸಮಗ್ರ ಮಾಹಿತಿಯನ್ನು ಒಳಗೊಂಡ ಜಾಲತಾಣದ ಉದ್ಘಾಟನೆಯನ್ನು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಶುಕ್ರವಾರ ವಿಧಾನಸೌಧದ ಸಮಿತಿ ಸಭಾಂಗಣದಲ್ಲಿ ನೆರವೇರಿಸಿದರು.

ಈ ಜಾಲತಾಣ ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿದ್ದು (http://kilpar.karnataka.gov.in)76 ಪುಸ್ತಕಗಳು, 200 ಕ್ಕೂ ಹೆಚ್ಚು ವಿಚಾರ-ಸಂಕಿರಣಗಳು, ಅಣಕು ಸಂಸತ್/ವಿಧಾನಸಭಾ ಅಧಿವೇಶನ ಸ್ಪರ್ಧೆಗಳ ವಿವರ ಇದರಲ್ಲಿ ಲಭ್ಯವಿದೆ. ಅಲ್ಲದೆ, ಧ್ಯೇಯ ವಾಕ್ಯವನ್ನು ‘ಸುಧಾರಣೆ ಕಡೆಗೆ’ ಎಂದು ಬದಲಿಸಲಾಗಿದೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ 76 ಪುಸ್ತಕಗಳು ಪಿಡಿಎಫ್ ರೂಪದಲ್ಲಿವೆ. ಇವುಗಳನ್ನು ಡೌನ್‌ಲೋಡ್ ಮಾಡಿಕೊಂಡು ಓದಬಹುದಾಗಿದೆ ಎಂದು ಸಂಸ್ಥೆಯ ನಿರ್ದೇಶಕ ಕೆ.ದ್ವಾರಕನಾಥ್ ಬಾಬು ಹೇಳಿದರು.

ಎನ್‌ಐಎ: ಪೂರಕ ಆರೋಪಪಟ್ಟಿ

ನವದೆಹಲಿ (ಪಿಟಿಐ): ನಿಷೇಧಿತ ಭಯೋತ್ಪಾದಕ ಸಂಘಟನೆ ಅಲ್‌ಖೈದಾ ದೇಶದಲ್ಲಿ ಕೃತ್ಯಗಳನ್ನು ನಡೆಸಲು ಸಂಚು ನಡೆಸಿದ ಪ್ರಕರಣಕ್ಕೆ ಸಂಬಂಧಿಸಿ ಎನ್‌ಐಎ ಶುಕ್ರವಾರ ವಿಶೇಷ ಕೋರ್ಟಿನಲ್ಲಿ ಪೂರಕ ಆರೋಪಪಟ್ಟಿ ದಾಖಲಿಸಿತು.

ಪಶ್ಚಿಮ ಬಂಗಾಳದ ಮುಶಿರಾಬಾದ್‌ನ ನಿವಾಸಿ, ಶಂಕಿತ ಅಬು ಸುಫಿಯಾನ್ ವಿರುದ್ಧ ಸ್ಫೋಟಕ ಪರಿಕರ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಆರೋಪ ಹೊರಿಸಲಾಗಿದೆ ಎಂದು ತನಿಖಾ ಸಂಸ್ಥೆ ಎನ್‌ಐಎ ಹೇಳಿದೆ.

ದೆಹಲಿ, ಪಶ್ಚಿಮ ಬಂಗಾಳ, ಕೇರಳದಲ್ಲಿ ಅಲ್‌ಖೈದಾ ಮಾದರಿ ಕೃತ್ಯ ನಡೆಸಲು, ದೇಶದ ಇತರೆಡೆ ಭಯತ್ಪಾದಕ ಕೃತ್ಯಗಳನ್ನು ಕೈಗೊಳ್ಳಲು ಸಂಚು ನಡೆಸಿದ್ದ ಆರೋಪದಡಿ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಮುರ್ಶಿದ್ ಹಸನ್ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು ಎಂದು ಎನ್‌ಐಎ ಅಧಿಕಾರಿಗಳು ತಿಳಿಸಿದರು.

ಶಿಕ್ಷಣ ಫೌಂಡೇಷನ್‌ನಿಂದ ಯುವಜನರಿಗೆ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ

ಆರೋಗ್ಯ ಕ್ಷೇತ್ರದಲ್ಲಿ ಉತ್ತಮ ಭವಿಷ್ಯ: ಡಾ.ಪದ್ಮಾ

ರಾಮನಗರ: ಭವಿಷ್ಯದಲ್ಲಿ ಜನರ ಆರೋಗ್ಯ ಕಾಳಜಿ ಮಾಡುವವರಿಗೆ (ಕಮ್ಯುನಿಟಿ ಕೇರ್‌ಟೇಕರ್) ಉತ್ತಮ ಬೇಡಿಕೆ ಬರಲಿದೆ ಎಂದು ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಪದ್ಮಾ ಹೇಳಿದರು.

ಶಿಕ್ಷಣ ಫೌಂಡೇಷನ್ ಹಾಗೂ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ನಗರದ ಕೋಡಿಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ನಡೆದ ‘ಶಿಕ್ಷಣ ವೈದ್ಯಕೀಯ ಸ್ಕಾಲರ್‌ಶಿಪ್ ಕಾರ್ಯಕ್ರಮ’ದಲ್ಲಿ ಅವರು ಮಾತನಾಡಿದರು.

ಶಿಕ್ಷಣ ಫೌಂಡೇಷನ್ ವತಿಯಿಂದ ಈ ಕಾರ್ಯಕ್ರಮದಡಿ ಜಿಲ್ಲೆಯ ಎಸ್ಸೆಸ್ಸೆಲ್ಸಿ, ಪಿಯುಸಿ ಹಾಗೂ ಹೆಚ್ಚಿನ ವಿದ್ಯಾರ್ಹತೆ ಹೊಂದಿರುವ 20 ಯುವಜನರಿಗೆ ಆರೋಗ್ಯ ಸೇವೆ ಹಾಗೂ ಸಾಂಕ್ರಾಮಿಕ ರೋಗಗಳ ಸಂದರ್ಭ ಆರೋಗ್ಯ ಇಲಾಖೆಯ ಜೊತೆಗೂಡಿ ಯಾವ ರೀತಿ ಕಾರ್ಯ ನಿರ್ವಹಿಸಬಹುದು ಎಂಬುದರ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಈ ತರಬೇತಿಗೆ ಆರೋಗ್ಯ ಇಲಾಖೆಯಿಂದ ಸಂಪನ್ಮೂಲ ವ್ಯಕ್ತಿಗಳನ್ನು ಸಹ ನಿಯೋಜಿಸಲಾಗಿದೆ. ವಿದ್ಯಾರ್ಥಿನಿಯರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಶಿಕ್ಷಣ ಫೌಂಡೇಷನ್‌ನ ಆರೋಗ್ಯ ತರಬೇತಿ ಕಾರ್ಯಕ್ರಮಕ್ಕೆ ಶುಕ್ರವಾರ ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಪದ್ಮಾ ಚಾಲನೆ ನೀಡಿದರು. ಫೌಂಡೇಷನ್ ಮೇಲ್ವಿಚಾರಕ ನವೀನ್, ಗಂಗಾಧರ್, ಲಕ್ಷ್ಮಿಮೂರ್ತಿ ಹಾಗೂ ಗುರುದತ್ ಇದ್ದರು

ಮುಂದಿನ ದಿನಗಳಲ್ಲಿ ಸರ್ಕಾರದಿಂದ ಸಮುದಾಯ ಕಾಳಜಿ ವಹಿಸುವವರ (ಕೇರ್ ಟೇಕರ್) ನೇಮಕಾತಿಗಾಗಿ ಆದೇಶ ಹೊರಡಿಸಿದರೆ ಇಂತಹ ತರಬೇತಿಯಿಂದ ಪಡೆದ ಪ್ರಮಾಣ ಪತ್ರ ಹಾಗೂ ಅನುಭವ ನಿಮಗೆ ಕೆಲಸ ಪಡೆಯಲು ನೆರವಾಗಲಿದೆ. ಇದರಿಂದ ಆರೋಗ್ಯ ಇಲಾಖೆ ಸಿಬ್ಬಂದಿ ಮೇಲಿನ ಹೊರೆ ಕಡಿಮೆ ಆಗಲಿದೆ ಎಂದು ಹೇಳಿದರು.

ಎರಡನೇ ಸ್ಥಾನ: ಕರ್ನಾಟಕದಲ್ಲೇ ಕೋವಿಡ್ ಲಸಿಕೆ ವಿತರಣೆಯಲ್ಲಿ ರಾಮನಗರ ಜಿಲ್ಲೆಯು ಎರಡನೆಯ ಸ್ಥಾನದಲ್ಲಿ ಇದೆ. ಈ ಸಾಧನೆಗೆ ಅರೋಗ್ಯ ಇಲಾಖೆಯ ಆಶಾ ಕಾರ್ಯಕರ್ತೆಯರು, ಸಿಬ್ಬಂದಿ ಹಾಗೂ ವೈದ್ಯರ ಅವಿರತ ಶ್ರಮ, ಸಹಯೋಗ ಕಾರಣ. ಕೋವಿಡ್ ಇನ್ನೂ ಸಂಪೂರ್ಣವಾಗಿ ಹೋಗಿಲ್ಲ. ಸಾರ್ವಜನಿಕರು ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸಬೇಕು. ಪರಸ್ಪರ ಅಂತರ ಕಾಯ್ದುಕೊಳ್ಳಬೇಕು. ಮಾಸ್ಕ್ ಧರಿಸಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮ ಆಯೋಜಕರಾದ ಶೈಲಾ ಮಾತನಾಡಿ, ‘ನಮ್ಮ ಪೋಷಕರಾದ ಇಂದಿರಮ್ಮ ಹಾಗೂ ಬಂಗಾರಪೇಟೆ ರಾಮರಾವ್ ವಿದ್ಯೆ ಹಾಗೂ ವಿದ್ಯಾರ್ಥಿಗಳ ಬಗ್ಗೆ ಸದಾ ಕಾಳಜಿ ಹೊಂದಿದ್ದರು. ಅವರ ನೆನಪಿನಲ್ಲಿ ಯುವಜನರಿಗಾಗಿ ವಿವಿಧ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಪ್ರತಿಯಾಗಿ ಸಮಾಜಕ್ಕೆ ನಮ್ಮ ಕೈಲಾದ ಕೊಡುಗೆ ನೀಡಬೇಕು’ ಎಂದು ಸಲಹೆ ನೀಡಿದರು.

ಕಾರ್ಯಕ್ರಮವನ್ನು ಶಿಕ್ಷಣ ಫೌಂಡೇಷನ್‌ನ ಬಂಗಾರಪೇಟೆ ಗುರುದತ್ ಉದ್ಘಾಟಿಸಿದರು. ಫೌಂಡೇಷನ್‌ನ ಬಂಗಾರಪೇಟೆ ಕೃಷ್ಣಸ್ವಾಮಿ ಆನ್‌ಲೈನ್ ಮೂಲಕ ಅಧ್ಯಕ್ಷತೆ ವಹಿಸಿದ್ದರು. ಫೌಂಡೇಷನ್‌ನ ಮೂರ್ತಿ, ಆರೋಗ್ಯ ಶಿಕ್ಷಣ ಅಧಿಕಾರಿ ಗಂಗಾಧರ್, ಜಿಲ್ಲಾ ಆಶಾ ಮೇಲ್ವಿಚಾರಕರಾದ ಗೀತಾ, ಆರ್‌ಸಿಎಚ್ ಸಿಬ್ಬಂದಿ ಛಾಯಾ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕ ವೀರೇಂದ್ರ ಕುಮಾರ್, ಶಿಕ್ಷಣ ಫೌಂಡೇಷನ್‌ನ ಮೇಲ್ವಿಚಾರಕ ಅಶ್ವತ್ಥನಾರಾಯಣ, ಜಿಲ್ಲಾ ಸಂಯೋಜಕ ವಿನೋದ್, ಮಾರ್ಗದರ್ಶಕರಾದ ಹರೀಶ್, ಕುಮಾರಸ್ವಾಮಿ ಇದ್ದರು.

ಸಪ್ತಕ ಸಂಗೀತ ಸಂಭ್ರಮ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಪ್ತಕ ಸಂಸ್ಥೆಯು ತನ್ನ 15ನೇ ವಾರ್ಷಿಕೋತ್ಸವದ ಪ್ರಯುಕ್ತ ಇದೇ 31, ನ.7 ಮತ್ತು ನ.14ರಂದು ಮಲ್ಲೇಶ್ವರದ ವಿವಿಧೆಡೆ ‘ಸಂಗೀತ ಸಂಭ್ರಮ’ ಶೀರ್ಷಿಕೆಯಡಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಸ್ಥಾಪಕ ಜಿ.ಎಸ್. ಹೆಗಡೆ, ‘ಕೋವಿಡ್ ನಿಯಂತ್ರಣಕ್ಕೆ ಬಂದ, ಒಂದೂವರೆ ವರ್ಷದ ಬಳಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಅ.31ರಂದು ವೈಯಾಲಿಕಾವಲ್‌ನ ಚೌಡಯ್ಯ ಸ್ಮಾರಕ ಭವನದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.ಕೋವಿಡ್ ಸಂಕಷ್ಟ ಕಾಲದ ನೆನಪುಗಳನ್ನು ಅಕ್ಷರ ರೂಪಕ್ಕೆ ತಂದಿದ್ದು, ‘ಜೀವನ ಪಥ–ನೆನಪಿನ ರಥ’ ಪುಸ್ತಕವನ್ನು ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ ಬಿಡುಗಡೆ ಮಾಡಲಿದ್ದಾರೆ’ ಎಂದು ತಿಳಿಸಿದರು.

‘ಅದೇ ದಿನ ಪ್ರವೀಣ್ ಗೋಡ್ಖಿಂಡಿ ಮತ್ತು ಜಯತೀರ್ಥ ಮೇವುಂಡಿ ಅವರಿಂದ ಕೊಳಲು ಹಾಗೂ ಗಾಯನದ ಜುಗಲ್ ಬಂದಿ ನಡೆಯಲಿದೆ. ನ.7ರಂದು ಮಲ್ಲೇಶ್ವರದ ಹವ್ಯಕ ಸಭಾಂಗಣದಲ್ಲಿ ಹಿಂದೂಸ್ಥಾನಿ ಗಾಯಕ ಧನಂಜಯ್ ಹೆಗಡೆ ಅವರಿಂದ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ‘ಸುಧನ್ವ ಮೋಕ್ಷ’ ತಾಳಮದ್ದಳೆಯನ್ನೂ ಹಮ್ಮಿಕೊಳ್ಳಲಾಗಿದೆ. ಅನಂತ ಹೆಗಡೆ ದಂತಳಿಗೆ ಅವರ ಭಾಗವತಿಕೆ, ಅನಂತ ಪದ್ಮನಾಭ ಪಾಠಕ್ ಅವರ ಮದ್ದಳೆ ಇರಲಿದೆ’ ಎಂದು ವಿವರಿಸಿದರು.

‘ನ.14ರಂದು ಮಲ್ಲೇಶ್ವರದ ಕೆನರಾ ಯೂನಿಯನ್‌ನಲ್ಲಿ ಕಾರ್ತಿಕ್ ಹೆಗಡೆ, ಪಂ. ರವೀಂದ್ರ ಯಾವಗಲ್ ಹಾಗೂ ಆನೂರು ಅನಂತಕೃಷ್ಣ ಶರ್ಮ ಅವರಿಂದ ತಬಲಾ–ಮೃದಂಗದ ಜುಗಲ್ ಬಂದಿ ನಡೆಯಲಿದೆ. ಈ ಎಲ್ಲ ಕಾರ್ಯಕ್ರಮಗಳಿಗೆ ಉಚಿತ ಪ್ರವೇಶ ಇರಲಿದೆ’ ಎಂದು ತಿಳಿಸಿದರು.

ಮುಂದುವರಿದ ಶೋಧ

ಧಾರವಾಡ: ಗುತ್ತಿಗೆದಾರ ಸಹೋದರರಾದ ಕಾಂಗ್ರೆಸ್ ಮುಖಂಡ ಯು.ಬಿ. ಶೆಟ್ಟಿ ಹಾಗೂ ಅವರ ಅಣ್ಣ ಸೀತಾರಾಮ ಶೆಟ್ಟಿ ಅವರ ಮನೆಯಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಶುಕ್ರವಾರವೂ ಶೋಧ ಕಾರ್ಯ ಮುಂದುವರಿಸಿದರು.

ಚಿತ್ರಾವಳಿ



ನಗರದಲ್ಲಿ ಭಾರತೀಯ ಸಾರ್ವಜನಿಕ ಸಂಪರ್ಕ ಪರಿಷತ್ (ಪಿಆರ್‌ಸಿಐ) ಆಯೋಜಿಸಿದ್ದ ವಿಶ್ವ ಸಂವಹನಕಾರರ ದಿನಾಚರಣೆಯಲ್ಲಿ ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪಿಆರ್‌ಸಿಐ ಕರ್ನಾಟಕ ಘಟಕದ ಅಧ್ಯಕ್ಷೆ ಡಾ. ಟಿ.ಎಸ್ ಲತಾ, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್, ಪಿಆರ್‌ಸಿಐ ಅಧ್ಯಕ್ಷ ಎಂ.ಬಿ. ಜಯರಾಮ್, ಬೆಂಗಳೂರು ವಿ.ವಿ. ಕುಲಪತಿ ವೇಣುಗೋಪಾಲ್, ಪತ್ರಕರ್ತ ರಾಮು ಪಾಟೀಲ, ಬೆಂಗಳೂರು ವಿ.ವಿ. ಸಂವಹನ ವಿಭಾಗದ ಮುಖ್ಯಸ್ಥ ಬಿ.ಕೆ. ರವಿ, ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ಇದ್ದರು.



₹3 ಕೋಟಿ ಅನುದಾನದಲ್ಲಿ ಗಂಗೇನಹಳ್ಳಿಯ ಜಾಕಿ ಗಾರ್ಡನ್ ಇಸ್ಲಾಕ್ ಮಸೀದಿ ಹಾಗೂ ಮೋತಿನಗರ ಪಾಂಡುರಂಗ ದೇವಸ್ಥಾನದ ಬಳಿ ರಸ್ತೆ ಡಾಂಬರೀಕರಣ ಹಾಗೂ ಚರಂಡಿ ಕಾಮಗಾರಿಗಳಿಗೆ ಶಾಸಕ ಬೈರತಿ ಸುರೇಶ್ ಭೂಮಿ ಪೂಜೆಯನ್ನು ಶುಕ್ರವಾರ ನೆರವೇರಿಸಿದರು.ಆರ್‌ಟಿ.ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುಜಾಮಿಲ್ ಅಹ್ಮದ್ ಹಾಗೂ ಪಕ್ಷದ ಕಾರ್ಯಕರ್ತರು ಇದ್ದರು.



ಪದ್ಮನಾಭನಗರ ವ್ಯಾಪ್ತಿಯ 100 ಅಡಿ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಕಾಂಗ್ರೆಸ್‌ನ ನೂತನ ಕಚೇರಿಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವೀಕ್ಷಿಸಿದರು. ಕಾಂಗ್ರೆಸ್ ಮುಖಂಡ ರಘುನಾಥ್ ನಾಯ್ಡು ಹಾಗೂ ಕಾರ್ಯಕರ್ತರು ಇದ್ದರು.

ಕೋವಿಡ್: 29.87 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ 381 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಈವರೆಗೆ ಸೋಂಕಿತರಾದವರ ಸಂಖ್ಯೆ 29.87 ಲಕ್ಷ ದಾಟಿದೆ.

ಒಂದು ದಿನದಲ್ಲಿ 1.12ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.33ರಷ್ಟಿದೆ. 6 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 9ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ಬೆಂಗಳೂರಿನಲ್ಲಿ 179 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 8,626ಕ್ಕೆ ಏರಿಕೆ ಕಂಡಿದೆ. 17 ಜಿಲ್ಲೆಗಳಲ್ಲಿ 50ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಸೋಂಕಿತರಿದ್ದಾರೆ. ಬಾಗಲಕೋಟೆ ಸೇರಿ 6 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಹತ್ತರೊಳಗೆ ಇದೆ. ಬೆಂಗಳೂರಿನಲ್ಲಿ ಗರಿಷ್ಠ (6,543) ಸಕ್ರಿಯ ಪ್ರಕರಣಗಳಿವೆ. ಸೋಂಕಿತರಲ್ಲಿ 305 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.40 ಲಕ್ಷ ದಾಟಿದೆ.

ಏಳು ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ನಾಲ್ವರು, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ ಹಾಗೂ ಧಾರವಾಡದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 1.83 ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,061ಕ್ಕೆ ಏರಿಕೆಯಾಗಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,51,569 ಒಟ್ಟು ಸೋಂಕಿತರು

12,51,390 ನಿನ್ನೆಯ ವಿವರ

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,543	12,28,755	16,270

ದಿನದ ಏರಿಕೆ	
ಹೊಸ ಪ್ರಕರಣ	179
ಗುಣಮುಖ	125
ಸಾವು	04

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	24.66 ಕೋಟಿ	3.42ಕೋಟಿ
ಸಕ್ರಿಯ ಪ್ರಕರಣ	1.82 ಕೋಟಿ	1.55ಲಕ್ಷ
ಗುಣಮುಖ	22.33 ಕೋಟಿ	3.36 ಕೋಟಿ
ಸಾವು	50 ಲಕ್ಷ	4.57ಲಕ್ಷ
ದಿನದ ಮಾಹಿತಿ: ಹೊಸ ಪ್ರಕರಣ	4.81 ಲಕ್ಷ	14,169
ದಿನದ ಮಾಹಿತಿ: ಗುಣಮುಖ	3.75 ಲಕ್ಷ	13,058
ದಿನದ ಮಾಹಿತಿ: ಸಾವು	7,889	550

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): ಅಮೆರಿಕ 78,460; ಬ್ರಿಟನ್ 39,948; ರಷ್ಯಾ 40,096

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): ಅಮೆರಿಕ 93.55; ಬ್ರಿಟನ್ 15.34; ರಷ್ಯಾ 8.85

ಎಲ್ಲಿ ಹೆಚ್ಚು ಸಾವು: ಮಹಾರಾಷ್ಟ್ರ 1.40 ಲಕ್ಷ; ತಮಿಳುನಾಡು 36,083; ಕೇರಳ 31,156

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): ಮಹಾರಾಷ್ಟ್ರ 66.09; ಕೇರಳ 49.54; ತಮಿಳುನಾಡು 27.0

* ರಾತ್ರಿ 12 ಗಂಟೆಯ ವರೆಗಿನ ಮಾಹಿತಿ

ಪ್ರಜಾವಾಣಿ ಗ್ರಾಫಿಕ್ಸ್

ಮಗಳ ಮದುವೆ: ಅಪರಾಧಿಗೆ ಪೆರೋಲ್

ಬೆಂಗಳೂರು: ತ್ರಿವಳಿ ಕೊಲೆ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿರುವ ವ್ಯಕ್ತಿಯೊಬ್ಬನಿಗೆ ಮಗಳ ಮದುವೆ ಸಮಾರಂಭದಲ್ಲಿ ಪಾಲ್ಗೊಳ್ಳುವುದಕ್ಕಾಗಿ 15 ದಿನಗಳ ಪೆರೋಲ್ ಮಂಜೂರು ಮಾಡಿರುವ ಹೈಕೋರ್ಟ್, ‘ಸಂತನಿಗೆ ಚರಿತ್ರೆ ಇರುತ್ತದೆ, ಅಂತೆಯೇ ಪಾಪಿಗೂ ಭವಿಷ್ಯವಿರುತ್ತದೆ’ ಎಂದು ಹೇಳಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಗಂಗಾಳು ಗ್ರಾಮದ ವ್ಯಕ್ತಿಯೊಬ್ಬ ತ್ರಿವಳಿ ಕೊಲೆ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದು, 1999ರ ಮಾರ್ಚ್ 2ರಿಂದಲೂ ಜೈಲಿನಲ್ಲಿದ್ದಾನೆ. ಸದ್ಯ ಈತ ಬೆಳಗಾವಿ ಕೇಂದ್ರ ಕಾರಾಗೃಹದಲ್ಲಿ ಸಜಾ ಬಂದಿ. ನವೆಂಬರ್ 7 ಮತ್ತು 8ರಂದು ಕೊಳ್ಳೇಗಾಲದಲ್ಲಿ ನಡೆಯಲಿರುವ ಮಗಳ ಮದುವೆಯಲ್ಲಿ ಭಾಗವಹಿಸಲು ಪೆರೋಲ್ ಮಂಜೂರು ಮಾಡುವಂತೆ ಆತ ಸಲ್ಲಿಸಿದ್ದ ಮನವಿಯನ್ನು ಕಾರಾಗೃಹದ ಅಧಿಕಾರಿಗಳು ಮಾನ್ಯ ಮಾಡಿರಲಿಲ್ಲ. ಅದನ್ನು ಪ್ರಶ್ನಿಸಿ ಅಪರಾಧಿಯ ಪತ್ನಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಅರ್ಜಿದಾರರ ಕೋರಿಕೆಯನ್ನು ವಿರೋಧಿಸಿದ್ದ ಹೆಚ್ಚುವರಿ ಸರ್ಕಾರಿ ವಕೀಲರು, ‘ಕೈದಿಯು ತ್ರಿವಳಿ ಕೊಲೆ ಪ್ರಕರಣದಲ್ಲಿ ಅಪರಾಧಿಯಾಗಿದ್ದಾನೆ. ಪೆರೋಲ್ ಹಕ್ಕು ಅಲ್ಲ’ ಎಂದು ವಾದಿಸಿದ್ದರು.

ಅಪರಾಧಿಗೆ ಪೆರೋಲ್ ಮಂಜೂರು ಮಾಡಿರುವ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ಪೀಠ, ‘ಅಪರಾಧಿಯು ನಾಗರಿಕ ಸಮಾಜದ ಸಂಪರ್ಕದಲ್ಲಿರಬೇಕು. ಜೈಲಿನಿಂದ ಬಿಡುಗಡೆ ಆದಾಗ ಸಮಾಜಕ್ಕೆ ಅಪರಿಚಿತನಂತೆ ಆಗಬಹುದು. ಇದರಿಂದ ಆತನಿಗೆ ಜೀವನ ಸಾಗಿಸಲು ಕಷ್ಟವಾಗಬಹುದು’ ಎಂದು ಹೇಳಿದೆ.

‘ಮಗಳ ಮದುವೆಯಲ್ಲಿ ತಂದೆ ಹಾಜರಿರಬೇಕು ಎಂದು ಎಲ್ಲರೂ ಬಯಸುತ್ತಾರೆ. ಪ್ರತಿ ಸಂತನಿಗೂ ಒಂದು ಚರಿತ್ರೆ ಇದ್ದಂತೆ ಪ್ರತಿ ಪಾಪಿಗೂ ಭವಿಷ್ಯವಿರುತ್ತದೆ ಎಂಬುದನ್ನು ಮರೆಯಲಾಗದು’ ಎಂದು ನ್ಯಾಯಪೀಠ ತೀರ್ಪಿನಲ್ಲಿ ಉಲ್ಲೇಖಿಸಿದೆ.

ನವೆಂಬರ್ 1ರ ಮಧ್ಯಾಹ್ನ ಅಪರಾಧಿಯನ್ನು ಜೈಲಿನಿಂದ ಬಿಡುಗಡೆ ಮಾಡಿ, ಆತ ನ.15ಕ್ಕೆ ಹಿಂದಿರುಗುವಂತೆ ಕಾರಾಗೃಹದ ಅಧಿಕಾರಿಗಳು ಪೆರೋಲ್ ಮಂಜೂರು ಮಾಡಬೇಕು. ಹೊರಗಿರುವ ಅವಧಿಯಲ್ಲಿ ಯಾವುದೇ ರೀತಿಯ ಅಪರಾಧ ಕೃತ್ಯ ಎಸಗದಂತೆ ಮತ್ತು ಜೈಲಿಗೆ ಹಿಂದಿರುಗಿ ಬಾರದೇ ತಪ್ಪಿಸಿಕೊಳ್ಳದಂತೆ ಎಚ್ಚರಿಕೆ ವಹಿಸಬೇಕು. ಸರಿಯಾದ ಷರತ್ತುಗಳನ್ನು ವಿಧಿಸಬೇಕು ನ್ಯಾಯಪೀಠ ಆದೇಶಿಸಿದೆ.

ಎಎಪಿ ಸದಸ್ಯರಿಂದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ

ಪಾರ್ಕಿಂಗ್ ನೀತಿ ವಿರೋಧಿಸಿ ಎಎಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರ ಭೂ ಸಾರಿಗೆ ನಿರ್ದೇಶನಾಲಯ (ಡಲ್ಟ್) ರೂಪಿಸಿರುವ ನೂತನ ಪಾರ್ಕಿಂಗ್ ನೀತಿ–2.0 ಅವೈಜ್ಞಾನಿಕವಾಗಿದ್ದು, ಅದನ್ನು ಕೂಡಲೇ ರದ್ದುಪಡಿಸಬೇಕು’ ಎಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಸದಸ್ಯರು ಮೈಸೂರು ಬ್ಯಾಂಕ್ ವೃತ್ತದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

‘ಮನೆ ಎದುರಿಗೆ ವಾಹನ ನಿಲ್ಲಿಸುವುದಕ್ಕೂ ಶುಲ್ಕ ವಿಧಿಸುವುದು ಸೇರಿದಂತೆ ಅನೇಕ ಅವೈಜ್ಞಾನಿಕ ಅಂಶಗಳನ್ನು ಕೂಡಿರುವ ಪಾರ್ಕಿಂಗ್ ನೀತಿ, ವಾಹನ ಸವಾರರ ಹಿತ ಕಾಪಾಡುವ ಬದಲು ಹಣ ದೋಚುವ ಉದ್ದೇಶ ಹೊಂದಿದೆ’ ಎಂದು ಪಕ್ಷದ ಮಾಧ್ಯಮ ಸಂಚಾಲಕ ಜಗದೀಶ್ ವಿ.ಸದಂ ದೂರಿದರು.

‘ಈ ನೀತಿ ಜಾರಿಗೆ ಬಂದರೆ, ಉಚಿತ ಪಾರ್ಕಿಂಗ್ ವ್ಯವಸ್ಥೆ ಹೋಗಿ ಎಲ್ಲೆಡೆಯೂ ಹಣ ಪಾವತಿಸುವ ಪಾರ್ಕಿಂಗ್ ವ್ಯವಸ್ಥೆ ಬರಲಿದೆ. ಪೆಟ್ರೋಲ್, ಡೀಸೆಲ್ ದರ ಏರಿಕೆಯಿಂದ ಈಗಾಗಲೇ ಕಂಗೆಟ್ಟಿರುವ ವಾಹನ ಸವಾರರು ಮತ್ತಷ್ಟು ತೊಂದರೆ ಅನುಭವಿಸಬೇಕಾಗುತ್ತದೆ’ ಎಂದು ಆಕ್ಷೇಪ ವ್ಯಕ್ತಪಡಿಸಿದರು.



ಆಮ್ ಆದ್ಮಿ ಪಕ್ಷದ (ಎಎಪಿ) ಸದಸ್ಯರು ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

‘ವಾಹನ ಸವಾರರ ಮೇಲಿನ ಈ ಶೋಷಣೆಯನ್ನು ಸಹಿಸುವ ಪ್ರಶ್ನೆಯೇ ಇಲ್ಲ. ಈಗ ಈ ನೀತಿಗೆ ಅವಕಾಶ ಕೊಟ್ಟರೆ, ನಂತರ ನಮ್ಮನ್ನು ದೋಚುತ್ತಾರೆ. ಹಾಗಾಗಿ, ಪ್ರತಿ ಸವಾರನೂ ಸರ್ಕಾರದ ಈ ಲೂಟಿಯನ್ನು ವಿರೋಧಿಸಬೇಕು. ನೀತಿಗೆ ನೀಡಿರುವ ಅನುಮೋದನೆಯನ್ನು ಸರ್ಕಾರ ತಕ್ಷಣ ಹಿಂಪಡೆಯಬೇಕು’ ಎಂದು ಆಗ್ರಹಿಸಿದರು.

ಪಕ್ಷದ ಬೆಂಗಳೂರು ನಗರ ಘಟಕದ ಉಪಾಧ್ಯಕ್ಷ ಸುರೇಶ್ ರಾಥೋಡ್, ‘ಕಳೆದ ವರ್ಷವೇ ಈ ನೀತಿ ಜಾರಿಗೆ ಸರ್ಕಾರ ಮುಂದಾಗಿತ್ತು. ವಿರೋಧ ವ್ಯಕ್ತವಾಗಿದ್ದರಿಂದ ನಿರ್ಧಾರ ಕೈಬಿಟ್ಟಿತ್ತು. ಆದರೆ, ಈಗ ಮತ್ತೆ ಜಾರಿಗೆ ತರಲು ಸಜ್ಜಾಗಿದೆ. ವಾಹನ ಸವಾರರ ಹಣವನ್ನು ಹಗಲು ದರೋಡೆ ಮಾಡಿ, ತಮ್ಮ ಜೇಬು ತುಂಬಿಸಿಕೊಳ್ಳಲು ಬಿಜೆಪಿ ನಾಯಕರು ಯೋಜನೆ ರೂಪಿಸಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಇದು ಸಾಂಕೇತಿಕ ಪ್ರತಿಭಟನೆ. ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ, ಬೆಂಗಳೂರಿನಾದ್ಯಂತ ಪ್ರತಿಭಟನೆ ನಡೆಸಲಿದ್ದೇವೆ’ ಎಂದೂ ಎಚ್ಚರಿಸಿದರು.

ಪಕ್ಷದ ಮುಖಂಡರಾದ ಬಸವರಾಜ ಮುದಿಗೌಡರ, ಅಶೋಕ್ ಮೃತ್ಯುಂಜಯ, ಜಗದೀಶ್ ಚಂದ್ರ, ರಾಜಶೇಖರ್ ದೊಡ್ಡಣ್ಣ, ಗೋಪಿನಾಥ್, ಪುಷ್ಪಾ ಕೇಶವ್ ಹಾಗೂ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕನ್ನಡದ ಕೋಟ್ಯಾಧಿಪತಿ ಸರಣಿ • ಮೈಸೂರು ಶಕ್ತಿಧಾಮದಲ್ಲಿ ನೀರವ ಮೌನ

ಗೆದ್ದಿದ್ದ 18 ಲಕ್ಷ ಕೊಟ್ಟಿದ್ದರು!

ಪ್ರಜಾವಾಣಿ ವಾರ್ತೆ


ಮೈಸೂರಿನ 'ಶಕ್ತಿಧಾಮ'ದಲ್ಲಿ ಬಾಲಕಿಯರೊಂದಿಗೆ ಪುನೀತ್ ರಾಜ್‌ಕುಮಾರ್ ಸಂಭ್ರಮದ ಕ್ಷಣ (ಸಂಗ್ರಹ ಚಿತ್ರ)

ಮೈಸೂರು: ಡಾ.ರಾಜ್‌ಕುಮಾರ್‌ಕುಟುಂಬ ಎರಡು ದಶಕದಿಂದ ಇಲ್ಲಿ ನಡೆಸುತ್ತಿರುವ ಮಹಿಳೆಯರ ಪುನರ್ವಸತಿ ಮತ್ತು ಅಭಿವೃದ್ಧಿ ಕೇಂದ್ರ 'ಶಕ್ತಿಧಾಮ'ಕ್ಕೆ ಪುನೀತ್ ರಾಜ್‌ಕುಮಾರ್, ಕನ್ನಡದ ಕೋಟ್ಯಾಧಿಪತಿಯ ಮೊದಲ ಸರಣಿಯಲ್ಲಿ ತಾವು ಗೆದ್ದ ₹ 18 ಲಕ್ಷ ಹಣವನ್ನು ಒಮ್ಮೆಗೆ ನೀಡಿ ಅಚ್ಚರಿ ಮೂಡಿಸಿದ್ದರು.

ಊಟಿ ರಸ್ತೆಯಲ್ಲಿರುವ 'ಶಕ್ತಿಧಾಮ'ವನ್ನು ನಟ ರಾಜ್‌ಕುಮಾರ್ ಹಾಗೂ ಪಾರ್ವತಮ್ಮ ರಾಜ್‌ಕುಮಾರ್ 1998ರಲ್ಲಿ ಸ್ಥಾಪಿಸಿದ್ದರು. 2000ರಿಂದ ಚಟುವಟಿಕೆ ಆರಂಭಿಸಿದ 'ಶಕ್ತಿಧಾಮ'ದಲ್ಲಿ ಅನಾಥ ಮತ್ತು ಬಡವರಾದ 150 ಹೆಣ್ಣುಮಕ್ಕಳು ಪ್ರಾಥಮಿಕ ಹಂತದಿಂದ ಎಂಜಿನಿಯರಿಂಗ್‌ವರೆಗೂ ಶಿಕ್ಷಣ ಪಡೆಯುತ್ತಿದ್ದಾರೆ.

ಸಂತ್ರಸ್ತ ಮಹಿಳೆಯರಿಗೆ ಆಶ್ರಯದ ಜೊತೆಗೆ ಕೌಶಲ ತರಬೇತಿಗಳನ್ನೂ ನೀಡಲಾಗುತ್ತಿದೆ. ಕೌಟುಂಬಿಕ ಸಲಹಾ ಕೇಂದ್ರವೂ ಇಲ್ಲಿದೆ. ಗೀತಾ ಶಿವರಾಜ್‌ಕುಮಾರ್ ಅಧ್ಯಕ್ಷರಾಗಿದ್ದಾರೆ.

ದೇವರೂ ಕಿವುಡನಾದ: 'ಪುನೀತಣ್ಣ ಬದುಕಲಿ ಎಂದು ಪದೇ ಪದೇ ಪ್ರಾರ್ಥಿಸಿದ್ದು ದೇವರಿಗೆ ತಲುಪಲಿಲ್ಲ. ದೇವರೂ ಕಿವುಡನಾಗಿಬಿಟ್ಟ' ಎಂದು 'ಶಕ್ತಿಧಾಮ'ದ ನಿವಾಸಿ, ಪ್ರಥಮ ಪಿಯು ವಿದ್ಯಾರ್ಥಿನಿ ಸುಷ್ಮಾ ಗದ್ಗದಿತರಾದರು. ಉಳಿದವರು ಆಕೆಯಷ್ಟೇ ಶೋಕತಪ್ತರಾಗಿದ್ದರು. ಪುನೀತ್ ರಾಜ್‌ಕುಮಾರ್ ನಿಧನ ನೀರವ ಮೌನವನ್ನು ಸೃಷ್ಟಿಸಿತ್ತು.

'ನಾಲ್ಕು ತಿಂಗಳ ಹಿಂದೆಯಷ್ಟೇ ನಂಜನಗೂಡಿಗೆ ಹೋಗುವಾಗ ಪುನೀತಣ್ಣ ಬಂದು ಉಪಾಹಾರ ಸೇವಿಸಿದ್ದರು. ಇನ್ನೊಂದು ತಿಂಗಳಿಗೆ ಊಟದ ಮನೆ, ಗ್ರಂಥಾಲಯಗಳಿರುವ ಕಟ್ಟಡ ಉದ್ಘಾಟಿಸಲು ಬರುತ್ತಾರೆಂದು ಕಾತರದಿಂದ ಕಾಯುತ್ತಿದ್ದೆವು. ಈಗ ಅವರಿಲ್ಲ ಎಂಬುದನ್ನು ನಂಬುವುದಕ್ಕೆ ಆಗುತ್ತಿಲ್ಲ' ಎಂದು ಸುಷ್ಮಾ ಭಾವುಕರಾದರು.

'ಅವರು ಬಂದರೆ ನಮಗೆ ಖುಷಿಯೋ ಖುಷಿ. ನಮ್ಮೊಡನೆ ಕುಳಿತು ಬಹಳ ಹೊತ್ತು ಮಾತನಾಡುತ್ತಿದ್ದರು. ಅವರಿಗಾಗಿ ನಾವು ಕಾತರಿಂದ ಕಾಯುತ್ತಿದ್ದೆವು' ಎಂದು ಸ್ಮರಿಸಿದರು.

'ಇಲ್ಲಿ ಕೌಶಲ ಕೇಂದ್ರ ಉದ್ಘಾಟನೆಯಾದಾಗ ನಮ್ಮೊಂದಿಗೇ ಊಟ ಮಾಡಿದ್ದರು. ಫೋಟೊ ತೆಗೆಸಿಕೊಂಡು ಸಂಭ್ರಮಿಸಿದ್ದೆವು' ಎಂದು ಸಿಬ್ಬಂದಿಯೂ ಕಣ್ಣೀರಾದರು.

ಪುನೀತ್ ಕಾಫಿನಾಡಿನ ಅಳಿಯ


ಪುನೀತ್ ರಾಜ್‌ಕುಮಾರ್– ಅಶ್ವಿನಿ ದಂಪತಿ ಜತೆ ಒಡನಾಟಿ ಉಮಾ, ಐ.ಬಿ.ಶಂಕರ್

ಚಿಕ್ಕಮಗಳೂರು: ನಟ ಪುನೀತ್ ರಾಜ್‌ಕುಮಾರ್ ಅವರು ಕಾಫಿನಾಡಿನ ಅಳಿಯ. ಅವರ ಪತ್ನಿ ಅಶ್ವಿನಿ ಚಿಕ್ಕಮಗಳೂರು ಜಿಲ್ಲೆಯ ಭಾಗಮನೆ ಗ್ರಾಮದವರು. ಕಾಫಿನಾಡಿಗೂ ಪುನೀತ್ ಅವರಿಗೂ ಅವಿನಾಭಾವ ನಂಟು ಇದೆ.

ಅಶ್ವಿನಿ ಅವರ ತಂದೆ ರೇವನಾಥ್ ಮತ್ತು ತಾಯಿ ವಿಜಯಾ. ಚಿಕ್ಕಮಗಳೂರಿನ ಭಾಗಮನೆ ಗ್ರಾಮದ ಈ ಕುಟುಂಬ ಬೆಂಗಳೂರಿನಲ್ಲಿ ನೆಲೆಸಿದೆ. ಆಗಾಗ ಸ್ವಗ್ರಾಮಕ್ಕೆ ಭೇಟಿ ನೀಡುತ್ತಾರೆ.

ಪುನೀತ್ ಅವರು ಕಾಫಿನಾಡಿಗೆ ಆಗಾಗ್ಗೆ ಭೇಟಿ ನೀಡುತ್ತಿದ್ದರು. 'ಮಿಲನ', ಬಾಲನಟನಾಗಿದ್ದಾಗ ಅಭಿನಯಿಸಿದ್ದ 'ಬೆಟ್ಟದ ಹೂವು' ಸಹಿತ ಹಲವಾರು ಸಿನಿಮಾಗಳ ಚಿತ್ರೀಕರಣಗಳು ಇಲ್ಲಿ ನಡೆದಿದ್ದವು.

'ಪುನೀತ್ ಮತ್ತು ಅಶ್ವಿನಿ ಬಾಲ್ಯ ಸ್ನೇಹಿತರು. ಅವರದು 'ಲವ್ ಕಂ ಅರೇಂಜ್' ಮದುವೆ. ಅದ್ಧೂರಿಯಾಗಿ ವಿವಾಹ ನೆರವೇರಿತ್ತು' ಎಂದು ಕುಟುಂಬದ ಒಡನಾಡಿ ಉಮಾ ಐ.ಬಿ.ಶಂಕರ್ ನೆನಪಿಸಿಕೊಂಡರು.

'ಅಶ್ವಿನಿ ತಂದೆ ರೇವನಾಥ್ ನಿವೃತ್ತ ಎಂಜಿನಿಯರ್, ತಾಯಿ ವಿಜಯಾ ಅವರು ನಿವೃತ್ತ ಪ್ರೊಫೆಸರ್. 50 ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಅಶ್ವಿನಿ ಅವರು ಈ ದಂಪತಿಯ ಹಿರಿಯ ಪುತ್ರಿ ಎಂದರು.

'ಚಿಕ್ಕಮಗಳೂರು ಎಂದರೆ ಪುನೀತ್‌ಗೆ ಅಚ್ಚುಮೆಚ್ಚು. ಅವರು ನಿಸರ್ಗ ಪ್ರಿಯರಾಗಿದ್ದರು. ಮುತ್ತೋಡಿ ಅರಣ್ಯ ಪ್ರದೇಶ, ಗಿರಿ ಶ್ರೇಣಿ ಸಹಿತ ವಿವಿಧ ತಾಣಗಳಿಗೆ ಆಗಾಗ್ಗೆ ಭೇಟಿ ನೀಡುತ್ತಿದ್ದರು' ಎಂದು ತಿಳಿಸಿದರು.


ಇಳಕಲ್‌ನಲ್ಲಿ ನಡೆದ ಗೋಕಾಕ್ ಚಳವಳಿ ಬಹಿರಂಗ ಸಭೆಯಲ್ಲಿ ಅಪ್ಪ ಡಾ.ರಾಜಕುಮಾರ್ ಅವರ ತೊಡೆಯ ಮೇಲೆ ಕುಳಿತಿದ್ದ ಬಾಲಕ ಪುನೀತ್

ಅಪ್ಪನ ತೊಡೆಯೇರಿದ್ದ 'ಅಪ್ಪು'...

• ವೆಂಕಟೇಶ್ ಜಿ.ಎಚ್.

ಬಾಗಲಕೋಟೆ: ಇಳಕಲ್‌ನ ಕಂಠಿ ವೃತ್ತದಲ್ಲಿ (1982–83) ನಡೆದಿದ್ದ ಗೋಕಾಕ್ ಚಳವಳಿಯ ಬಹಿರಂಗ ಸಭೆಯಲ್ಲಿ ಡಾ.ರಾಜಕುಮಾರ್ ಅವರ ತೊಡೆಯ ಮೇಲೆ ಹೆಮ್ಮೆಯಿಂದ ಕುಳಿತು ಭಾಗವಹಿಸಿದ್ದ ಬಾಲಕ ಪುನೀತ್ ರಾಜಕುಮಾರ್, ಮೊನ್ನೆ ಮೊನ್ನೆಯಷ್ಟೇ ಬಾದಾಮಿ ತಾಲ್ಲೂಕಿನ ಮಹಾಕೂಟದಲ್ಲಿ 'ನಟ ಸಾರ್ವಭೌಮ' ಸಿನಿಮಾ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು.

ಕನ್ನಡದ ಅಸ್ಮಿತೆಯ ಹೋರಾಟ ಗೋಕಾಕ್ ಚಳವಳಿಯಲ್ಲಿ ಅಪ್ಪ ಸಕ್ರಿಯವಾಗಿದ್ದಾಗ ಅವರೊಂದಿಗೆ ಇಡೀ ರಾಜ್ಯ ಸುತ್ತಿದ್ದ ಪುನೀತ್, ಇಳಕಲ್‌ನಲ್ಲೂ ಇಡೀ ದಿನ ಅಪ್ಪನೊಂದಿಗೆ ಇದ್ದರು. ನಟರಾದ ಅಶೋಕ್, ಲೋಕೇಶ್ ಅವರೊಂದಿಗೆ ಡಾ.ರಾಜಕುಮಾರ್ ವೇದಿಕೆ ಹಂಚಿಕೊಂಡಿದ್ದರೆ, ಸ್ಥಳೀಯರಾದ ಬಸವರಾಜ ಸಪ್ಪರದ, ಸಿ.ಸಿ.ಚಂದ್ರಾಪಟ್ಟಣ, ಎಲ್. ಜಿ.ಕುಟಂನಗೌಡ ನಟರೊಂದಿಗೆ ಇದ್ದರು. ಈ ವೇಳೆ ಅಪ್ಪನ ತೊಡೆಯ ಮೇಲೆ ಕುಳಿತು ಪುನೀತ್ ಭಾಷಣ ಆಲಿಸಿದ್ದರು ಎಂದು ಇಳಕಲ್‌ನ ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಬಾಗಲಕೋಟೆಯ ಅಬಕಾರಿ ಉದ್ಯಮಿ ಕೆ.ಬಿಚ್ಚಯ್ಯ ಅವರ ಕುಟುಂಬದೊಂದಿಗೆ ಡಾ.ರಾಜ್‌ಕುಮಾರ ಕುಟುಂಬ ವೈವಾಹಿಕ ನಂಟು ಹೊಂದಿದ್ದು, ಬಿಚ್ಚಯ್ಯ ಅವರ ಮನೆಗೂ ಪುನೀತ್ ವೈಯಕ್ತಿಕ ಭೇಟಿ ನೀಡಿದ್ದರು.

ತಡರಾತ್ರಿ ಸಿನಿಮಾ ಶೂಟಿಂಗ್‌ನಲ್ಲಿ ಭಾಗಿ: ಪವನ್ ಒಡೆಯರ್ ನಿರ್ದೇಶನದ 'ನಟ ಸಾರ್ವಭೌಮ' ಸಿನಿಮಾ ಚಿತ್ರೀಕರಣಕ್ಕೆಂದು ಕಳೆದ ವರ್ಷ ಪುನೀತ್ ರಾಜಕುಮಾರ್ ಬಾದಾಮಿ, ಮಹಾಕೂಟೇಶ್ವರ ದೇವಸ್ಥಾನಕ್ಕೆ ಬಂದಿದ್ದರು. ತಡರಾತ್ರಿಯವರೆಗೂ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು.

ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯವು ಅ.30ರಂದು ನಿಗದಿಪಡಿಸಿದ್ದ ಎಂಬಿಎ ಮತ್ತು ಬಿಇಡಿ ಪರೀಕ್ಷೆಗಳನ್ನು ಮುಂದೂಡಿದೆ.

ಎಂಬಿಎ ಪರೀಕ್ಷೆಯನ್ನು ನ.2ರಂದು ಮತ್ತು ಬಿಇಡಿ ಪರೀಕ್ಷೆಯನ್ನು ನ.6ರಂದು ನಡೆಸಲಾಗುವುದು ಎಂದು ಕುಲಸಚಿವ (ಮೌಲ್ಯಮಾಪನ) ಡಾ.ಬಿ. ರಮೇಶ್ ತಿಳಿಸಿದ್ದಾರೆ.

ಕೆಎಂಎಫ್ ಬೆಳವಣಿಗೆಗೆ ಪುನೀತ್ ಕೊಡುಗೆ ಅಪಾರ: ಬಾಲಚಂದ್ರ


ಬಾಲಚಂದ್ರ ಜಾರಕಿಹೊಳಿ

ಬೆಳಗಾವಿ: 'ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್)ದ ಬೆಳವಣಿಗೆಯಲ್ಲಿ ಚಲನಚಿತ್ರ ನಟ ಪುನೀತ್ ರಾಜ್‌ಕುಮಾರ್ ಅವರ ಕೊಡುಗೆ ಅಪಾರ' ಎಂದು ಅಧ್ಯಕ್ಷರೂ ಆಗಿರುವ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಸ್ಮರಿಸಿದರು.


ಬೆಮುಲ್‌ನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಹೆಮ್ಮೆಯ ನಟರಾಗಿದ್ದ ಅವರಿಗೆ ವೈಯಕ್ತಿಕವಾಗಿ, ಹಾಲು ಮಹಾಮಂಡಳ ಹಾಗೂ 14 ಹಾಲು ಒಕ್ಕೂಟಗಳ ಪರವಾಗಿ ಶ್ರದ್ಧಾಂಜಲಿ ಸಲ್ಲಿಸುತ್ತೇವೆ. ಕೆಎಂಎಫ್ ಬೆಳೆಯಲು ವರನಟ ರಾಜಕುಮಾರ್ ಕುಟುಂಬದ ಪಾತ್ರ ದೊಡ್ಡದಿದೆ' ಎಂದು ನೆನೆದರು.

'ಅವರು ಕೆಎಂಎಫ್‌ನ 'ನಂದಿನಿ' ಉತ್ಪನ್ನಗಳ ಬ್ರ್ಯಾಂಡ್ ಅಂಬಾಸಿಡರ್ ಆಗಿದ್ದರು. ಪ್ರತಿಫಲ ಬಯಸದೆ ಪ್ರಚಾರ ಮಾಡಿದ್ದರು. ವೈಯಕ್ತಿಕವಾಗಿಯೂ ಇಷ್ಟಪಡುತ್ತಿದ್ದೆವು. 'ಬೊಂಬೆ ಹೇಳುತೈತೆ' ಹಾಡನ್ನು ಆಗಾಗ ಕೇಳುತ್ತಿರುತ್ತೇನೆ' ಎಂದು ಕಂಬನಿ ಮಿಡಿದರು.

ಗಾಜು ಪುಡಿ ಮಾಡಿ ಆಕ್ರೋಶ..

ಪುನೀತ್ ಸಾವಿನ ಸುದ್ದಿ ಗೊತ್ತಾದರೂ ಅವರ ಗೌರವಾರ್ಥ ಸಿನಿಮಾ ಪ್ರದರ್ಶನ ನಿಲ್ಲಿಸಲಿಲ್ಲ ಎಂದು ಆರೋಪಿಸಿ ಅಪ್ಪು ಅಭಿಮಾನಿಗಳು ಬಾಗಲಕೋಟೆ ನಗರದ ಶಕ್ತಿ ಥಿಯೇಟರ್‌ಗೆ ತೆರಳಿ ಗದ್ದಲ ಮಾಡಿದರು. ಈ ವೇಳೆ ಅಲ್ಲಿ ಭಜರಂಗಿ–2 ಸಿನಿಮಾ ಪ್ರದರ್ಶನ ನಡೆಯುತ್ತಿತ್ತು. ಕೆಲವರು ಥಿಯೇಟರ್‌ನಲ್ಲಿನ ಗಾಜು ಪುಡಿ ಮಾಡಿ ಆಕ್ರೋಶ ವ್ಯಕ್ತಪಡಿಸಿದರು. ಶಕ್ತಿ ಥಿಯೇಟರ್ ಬಳಿ ನೆರೆದ ಸೆಟ್ಲಮೆಂಟ್ ಪ್ರದೇಶದ ಪುನೀತ್ ಅಭಿಮಾನಿಗಳು ನೆಚ್ಚಿನ ನಟನನ್ನು ನೆನೆದು ಕಣ್ಣೀರು ಹಾಕಿದರು.

ನಿಧನ


ಎಸ್.ಎಲ್. ನಟರಾಜ್ ಶಾಸ್ತ್ರಿ
ಜನನ: 02-12-1949
ನಿಧನ. 29-10-2021
ಜೆ.ಪಿ. ನಗರ, ಬೆಂಗಳೂರು
ದುಃಖತಪ್ತರು: ಪತ್ನಿ, ಮಕ್ಕಳು, ಕುಟುಂಬವರ್ಗದವರು

ಸ್ಥಾಪನೆ : 1974

ದಿ ಸಿಟಿಜನ್ ಕೋ ಆಪರೇಟಿವ್ ಬ್ಯಾಂಕ್ ನಿಯಮಿತ

ರಾಜಾಜಿನಗರ, ಬೆಂಗಳೂರು–560010
ದೂರವಾಣಿ : 080–23321923, 23328735, 23520466
website: www.ccbank.in

ಪ್ರಕಟಣೆ

ಬ್ಯಾಂಕಿನ 2020–21ನೇ ಸಾಲಿನ 49ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸ.ಇ.60.ಸಿ.ಎಲ್.ಎಂ.2021(ಇ) ದಿನಾಂಕ: 04.08.2021ರಂತೆ **"ವರ್ಚುಯಲ್ ಮೀಟಿಂಗ್"** ಮುಖಾಂತರ ದಿನಾಂಕ: 31.10.2021ರ ಭಾನುವಾರ ಬೆಳಗ್ಗೆ 10.00 ಗಂಟೆಗೆ ಬ್ಯಾಂಕಿನ ಆಡಳಿತ ಮಂಡಳಿ ಸಭಾಂಗಣದಲ್ಲಿ ನಡೆಸಲು ನಿರ್ಣಯಿಸಲಾಗಿದೆ. ಈ ಮಹಾಸಭೆಯಲ್ಲಿ ಭಾಗವಹಿಸಲು ಇಚ್ಛಿಸುವ ಬ್ಯಾಂಕಿನ ಖಾಯಂ ಸದಸ್ಯರು ತಮ್ಮ ಸದಸ್ಯತ್ವ ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸವನ್ನು ನೋಂದಾಯಿಸುವ ಅವಶ್ಯಕತೆಯಿದ್ದು, ದಿನಾಂಕ : 30.10.2021ರೊಳಗೆ ಬ್ಯಾಂಕಿನಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕೆಂದು ಕೋರಿದೆ. ಸಾಧ್ಯವಾಗದಿದ್ದಲ್ಲಿ ಬ್ಯಾಂಕಿನ ಇ-ಮೇಲ್ citizenbank@ccbank.in ಗೆ ಮಾಹಿತಿ ಕಳುಹಿಸುವುದು.

ದಿನಾಂಕ: 31.10.2021ರ ಬೆಳಗ್ಗೆ 10.00 ಗಂಟೆಗೆ ಈ ಕೆಳಗಿನ ಲಿಂಕ್ ಮೂಲಕ ತಮ್ಮ ಸದಸ್ಯತ್ವ ಸಂಖ್ಯೆ ಮತ್ತು ಹೆಸರನ್ನು ನಮೂದಿಸಿ ಭಾಗವಹಿಸುವುದು :- https://bit.ly/3BjrgzY

ಸೂಚನೆ: ನೇರ ಲಿಂಕ್‌ಗಾಗಿ ಬ್ಯಾಂಕಿನ ಅಧಿಕೃತ website: www.ccbank.in ಗೆ ಭೇಟಿ ನೀಡಬಹುದು.

ಸ್ಥಳ : ಬೆಂಗಳೂರು
ದಿ: 29-10-2021

ಸಹಿ/-
ವ್ಯವಸ್ಥಾಪಕರು (ಪ್ರಭಾರ)

ಸ್ಥಾಪನೆ : 1966
ನೋಂದಣಿ ಸಂಖ್ಯೆ : ಡಿ.ವೈ.ಆರ್.443

ಪ್ರಧಾನ ಕಛೇರಿ : 080–23151204, 23152073
ಬಸವೇಶ್ವರನಗರ ಶಾಖೆ : 080–23231238, 23232587
ಅನ್ನಪೂರ್ಣೇಶ್ವರಿನಗರ ಶಾಖೆ : 080–23183734
e-mail : contact@rcbl.co / rcbank.ltd@gmail.com

ದಿ ರಾಜಾಜಿನಗರ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ. 741, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

54ನೇ ಸರ್ವಸದಸ್ಯರ ವರ್ಚುಯಲ್ ಸಭೆಯ ಸೂಚನಾ ಪತ್ರ

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : ಸಇ 60 ಸಿಎಲ್‌ಎಮ್ 2021 (ಇ) ಬೆಂಗಳೂರು ದಿನಾಂಕ 04–08–2021 ರಂತೆ ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ 2ನೇ ಅಲೆಯ ಕಾರಣದಿಂದ ಹಾಗೂ 3ನೇ ಅಲೆ ವ್ಯಾಪಿಸುವ ಸಾಧ್ಯತೆ ಇರುವ ಬಗ್ಗೆ ತಜ್ಞರು ಅಭಿಪ್ರಾಯ ಪಟ್ಟಿರುವ ಹಿನ್ನಲೆಯಲ್ಲಿ ಸಹಕಾರ ಸಂಘಗಳ ವಾರ್ಷಿಕ ಸಾಮಾನ್ಯ ಸಭೆಯನ್ನು Video Conference / Virtual Meeting ಮೂಲಕ ನಡೆಸುವ ಆದೇಶದಂತೆ, ದಿನಾಂಕ 31–03–2021ಕ್ಕೆ ಮುಕ್ತಾಯಗೊಂಡ ಬ್ಯಾಂಕಿನ (2020–21ನೇ ಸಾಲಿನ) 54ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 31–10–2021 ರಂದು ಭಾನುವಾರ ಬೆಳಿಗ್ಗೆ 10–00 ಘಂಟೆಗೆ ಬ್ಯಾಂಕಿನ ಗೌರವ ಅಧ್ಯಕ್ಷರಾದ ಶ್ರೀ. ಕೆ.ಎಲ್. ತಿಮ್ಮಪ್ಪ ಇವರ ಅಧ್ಯಕ್ಷತೆಯಲ್ಲಿ Video Conference / Virtual Meeting (ಅಂದರೆ ಇಂಟರ್‌ನೆಟ್ ಸೌಲಭ್ಯವಿರುವ ಮೊಬೈಲ್/ PC ಮೂಲಕ ಭಾಗವಹಿಸುವುದು. ವೈಯಕ್ತಿಕವಾಗಿ ಭಾಗವಹಿಸಲು ಅವಕಾಶವಿರುವುದಿಲ್ಲ) ಮೂಲಕ ನಡೆಸಲಾಗುವುದು. ಸದಸ್ಯರಿಗೆ ಪ್ರತ್ಯೇಕ ತಿಳುವಳಿಕೆ ಅಂಚೆಯ ಮೂಲಕ ರವಾನಿಸಿದ್ದು, ತಲುಪದಿದ್ದವರು ಇದನ್ನೇ ತಿಳುವಳಿಕೆ ಎಂದು ಭಾವಿಸಬೇಕಾಗಿ ಕೋರಿದೆ. ಸದಸ್ಯರು ಅನುವು ಮಾಡಿಕೊಂಡು ಲಿಂಕ್ https://viewnow.in/rcbl.in ಮುಖಾಂತರ ಸಭೆಗೆ ಸಕಾಲಕ್ಕೆ ಸೇರಿಕೊಳ್ಳಲು ಕೋರಲಾಗಿದೆ.

ಕಾರ್ಯಕಾರಿ ಮಂಡಳಿ ಆಜ್ಞೆಯ ಮೇರೆಗೆ
ಸಹಿ/–
(ಆರ್.ಗೋವಿಂದರಾಜು)
ಮುಖ್ಯ ಕಾರ್ಯ ನಿರ್ವಹಣಾಧಿಕಾರಿ

ಸ್ಥಳ : ಬೆಂಗಳೂರು
ದಿ: 30–10–2021

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ

ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080–22255210

ಐಎಫ್‌ಟಿ ಸಂ:ಕಾಅ/ಕವಿ.1/ಎಇ–1/41/2021–22 ದಿನಾಂಕ: 28.10.2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ – 2ನೇ ಕರೆ

ಮೇಲ್ಕಂಡ ಇಲಾಖೆಯು ಬೆಂಗಳೂರು ರಾಜ್‌ಭವನದಲ್ಲಿ ಫೈರ್‌ಫೈಟಿಂಗ್ ಉಪಕರಣಗಳು, ಮೋಟರ್ ಮತ್ತು ಪಂಪಿಂಗ್ ಉಪಕರಣಗಳನ್ನು ಒದಗಿಸುವುದು ಮತ್ತು ಇತರೆ ಸಂಬಂಧಿತ ಕಾಮಗಾರಿಗಳಿಗೆ (ಕೆಪಿಡಬ್ಲ್ಯೂಡಿ/2021–22/ಬಿಡಿ/ಕಾಮಗಾರಿ_ಇಂಡೆಂಟ್140150/ಕರೆ–2) ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ರೂ.42.03 ಲಕ್ಷಗಳು. ಇಎಂಡಿ:** ಇಎಂಡಿ ಘೋಷಣಾ ಪ್ರಮಾಣ ಪತ್ರ. **ದಸ್ತಾವೇಜು ಬೆಲೆ:** ಇ–ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಲಾವಧಿ: **06 ತಿಂಗಳು.** ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 04.11.2021, ಸಂಜೆ 4.00 ಗಂಟೆವರೆಗೆ.** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 06.11.2021, ಸಂಜೆ 4.00 ಗಂಟೆಗೆ.** ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ನಿಂದ ಪಡೆಯಬಹುದು.

ವಾಸಾಸಂಇ/ಉನಿ.ನ/2030/ಎಂಸಿಎ/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬ್ಯಾಂಕ್ ಆಫ್ ಬರೋಡ

ಯಲಹಂಕ ನ್ಯೂ ಟೌನ್। ಬೆಂಗಳೂರು। ಕರ್ನಾಟಕ

ಚಿನ್ನಾಭರಣಗಳ ಹರಾಜು ಸೂಚನೆ

ಈ ಕೆಳಗಿನ ಮಹನೀಯರು ನಮ್ಮ ಈ ಮೇಲಿನ ಶಾಖೆಯಿಂದ ಚಿನ್ನಾಭರಣ / ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಸರಿಯಾಗಿ ಮರುಪಾವತಿ ಮಾಡದೇ ಇದ್ದುದರಿಂದ ಸದರಿಯವರಿಗೆ ಅದರ ವಾರಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬ್ಯಾಂಕಿಗೆ ಸಲ್ಲತಕ್ಕ ಮೊಬಲಗನ್ನು ತಾರೀಖು: **17.11.2021** ರೊಳಗೆ ಮರುಪಾವತಿ ಮಾಡಲು ತಪ್ಪಿದ್ದಲ್ಲಿ ನಮ್ಮಲ್ಲಿ ಅಡವಿಟ್ಟ ಆಭರಣಗಳನ್ನು ಶಾಖೆಯ ಆವರಣದಲ್ಲಿ **20.11.2021 ರಂದು 11:00 ಗಂಟೆಗೆ** ಸರಿಯಾಗಿ ಬಹಿರಂಗ ಹರಾಜು ಮಾಡಲಾಗುವುದು. ಈ ಸಂಬಂಧ ಬ್ಯಾಂಕಿಗೆ ಉಂಟಾಗಬಹುದಾದ ಖರ್ಚು, ನಷ್ಟಗಳನ್ನು ತೆರಲು ಸದರಿ ಸಾಲಗಾರರು ಜವಾಬ್ದಾರರಾಗಿರುತ್ತಾರೆ ತಿಳಿದಿರಲಿ.

ಸಾಲಗಾರರ ಹೆಸರು ಮತ್ತು ವಿಳಾಸ	ಖಾತೆ ಸಂಖ್ಯೆ	ಬಾಕಿ ಮೊತ್ತ
ಶ್ರೀ. ಬಾಲಚಂದ್ರ ಟಿ ಡಿ	7426060 0000122	ರೂ. 2,92,387/-+ ದಿನಾಂಕ 30.09.2021ರಂತೆ + ಇತರೆ ಖರ್ಚುಗಳು
ಶ್ರೀ ಮುಕುಂದ್ ಬಿ ಹೆಚ್, ನಂ. 20, ಮೂಡಲಗಿರಿ ನಿವಾಸ, 8 ನೇ ಕ್ರಾಸ್, 1 ನೇ ಬ್ಲಾಕ್, ಜಯನಗರ, ಬೆಂಗಳೂರು–560011	7426060 0001121	ರೂ. 4,23,507/- + ದಿನಾಂಕ 30.09.2021ರಂತೆ + ಇತರೆ ಖರ್ಚುಗಳು
	7426060 0001122	ರೂ.2,64,492/- + ದಿನಾಂಕ 30.09.2021ರಂತೆ + ಇತರೆ ಖರ್ಚುಗಳು

ದಿನಾಂಕ: 30.10.2021, ಸ್ಥಳ: ಬೆಂಗಳೂರು
ಸಹಿ/– ಮುಖ್ಯ ವ್ಯವಸ್ಥಾಪಕರು, ಬ್ಯಾಂಕ್ ಆಫ್ ಬರೋಡ

ಕರ್ನಾಟಕ ಸರ್ಕಾರ

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ ವಿಭಾಗ,
ಅರಣ್ಯ ಭವನದ ಪಕ್ಕದ ಕಟ್ಟಡ 18ನೇ ಅಡ್ಡರಸ್ತೆ. ಮಲ್ಲೇಶ್ವರಂ,
ಬೆಂಗಳೂರು–560 003 ಇ–ಮೇಲ್: dcfurban82@yahoo.co.in.

ಸಂಖ್ಯೆ: ಎ2/ಬಿಯುಡಿ/ಸಿಆರ್–113/2021–22 ದಿನಾಂಕ: 20.10.2021

ಇ-ಟೆಂಡರ್ ಪ್ರಕಟಣೆ

2021–22ನೇ ಸಾಲಿನಲ್ಲಿ ಬೆಂಗಳೂರು ನಗರ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿನ ಯಲಹಂಕ ವಲಯದ ಮಾರಸಂದ್ರ ರಾಜ್ಯ ಅರಣ್ಯ ಪ್ರದೇಶದಲ್ಲಿ ಕೆ.ಎಫ್.ಡಿ.ಎಫ್ ಯೋಜನೆಯಡಿ ಮುಂಗಡ ಕಾಮಗಾರಿಗಳ ನಿರ್ಮಾಣದ ಸಂಬಂಧ ಇ–ಟೆಂಡರ್ ಪ್ರಕಟಣೆ, ಬೆಂಗಳೂರು ನಗರ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರಾಗಿರುವ 2021–22 ನೇ ಸಾಲಿನಲ್ಲಿ ನೋಂದಾವಣೆಗೊಂಡ ಗುತ್ತಿಗೆದಾರರಿಂದ ಮಾತ್ರ ಕರ್ನಾಟಕ ಸರ್ಕಾರದ ಇ–ಪ್ರೊಕ್ ಪೋರ್ಟಲ್ (http://eproc.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಇ–ಪೋರ್ಟಲ್‌ನಲ್ಲಿ ಇದರ ಸಂಬಂಧ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ದಿನಾಂಕ: 20.11.2021 ರಂದು (ಅಪರಾಹ್ನ 5.00 ಗಂಟೆವರೆಗೆ),ಅಂತಿಮ ದಿನಾಂಕವಾಗಿದೆ. ದಿನಾಂಕ: 23.11.2021ರ ಅಪರಾಹ್ನ 5.00 ಗಂಟೆಗೆ ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ, ದಿನಾಂಕ: 24.11.2021ರ ಅಪರಾಹ್ನ 5.00 ಗಂಟೆಗೆ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಒಂದು ವೇಳೆ ದಿನಾಂಕ: 20.11.2021 ರಂದು ನಡೆಯುವ ಟೆಂಡರ್‌ಗಳಲ್ಲಿ ಗುತ್ತಿಗೆದಾರರು ಭಾಗವಹಿಸದೇ ಇದ್ದಲ್ಲಿ ಇದನ್ನೇ ಮರು ಟೆಂಡರ್ ಪ್ರಕಟಣೆ ಎಂದು ತಿಳಿದು ದಿನಾಂಕ: 29.11.2021 ರಂದು 5.00 ಗಂಟೆಯವರೆಗೆ ಇ–ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು. ದಿನಾಂಕ: 30.11.2021ರ ಅಪರಾಹ್ನ 5.00 ಗಂಟೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆದು ಅದರ ಷರತ್ತುಗಳು ಯಶಸ್ವಿಯಾಗಿದ್ದರೆ ದಿನಾಂಕ: 01.12.2021 ರ ಅಪರಾಹ್ನ 5.00 ಗಂಟೆಗೆ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಪ್ರತ್ಯೇಕ ಕೆಲಸಗಳ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ನಗರ ವಿಭಾಗ, ಬೆಂಗಳೂರು.

DIPR/DDU/Zen/R.O:2026/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ಆಯುಕ್ತರು (ಕಂದಾಯ)ರವರ ಕಛೇರಿ,
ನಗರ ಪಾಲಿಕೆ ಕಛೇರಿಗಳು, ಎನ್. ಆರ್. ಚೌಕ, ಬೆಂಗಳೂರು–560 002

ಸಂಖ್ಯೆ: ಜಆ(ಕಂ)/ಎನ್‌ಎ/ಪಿಆರ್/19/2021–22 ದಿನಾಂಕ: 25.10.2021

ಪ್ರಕಟಣೆ

ನಗರದ ಕೆಳಸೇತುವೆ ನಾಮಕರಣ ನಿರ್ಣಯಕ್ಕೆ ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಆಹ್ವಾನ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ 133 ಮತ್ತು ಅತ್ತಿಗುಪ್ಪೆ ವಾರ್ಡ್ ಸಂಖ್ಯೆ 132ರಲ್ಲಿ ಎರಡು ವಾರ್ಡ್‌ಗಳ ನಡುವೆ ಸಂಪರ್ಕ ಕಲ್ಪಿಸುವ ಕೆಳಸೇತುವೆಗೆ **"ಕನ್ನಡದ ಕಣ್ಮಣಿ, ಮಹಾ ದಾರ್ಶನಿಕ, ಶ್ರೀ ಸರ್ವಜ್ಞ ಕೆಳಸೇತುವೆ"** ಎಂದು ನಾಮಕರಣ ಮಾಡುವುದೆಂದು ದಿನಾಂಕ 21.09.2021ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ 276/2021–22ರಲ್ಲಿ ತೀರ್ಮಾನಿಸಲಾಗಿದೆ.

ಆದುದರಿಂದ ಸದರಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಾಮಕರಣ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಸಾರ್ವಜನಿಕರು ಈ ಪತ್ರಿಕಾ ಪ್ರಕಟಣೆ ಹೊರಡಿಸಲಾದ ದಿನಾಂಕದಿಂದ 30 ದಿನಗಳ ಒಳಗಾಗಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು–560 002, ರವರಿಗೆ ಸಲ್ಲಿಸಲು ತಿಳಿಸಲಾಗಿದೆ.

ಸಹಿ/–
ಜಂಟಿ ಆಯುಕ್ತರು (ಕಂದಾಯ)

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಆನೆಕ್ಸ್ ಕಟ್ಟಡ – 3, ರೂಮ್ ನಂ. 5,
ಎನ್. ಆರ್. ವೃತ್ತ, ಬೆಂಗಳೂರು – 560 002

ಸಂ:ಉಅಸಂ/ಪಿಆರ್/ಟೆಂಡರ್–1530/2021–22 ದಿನಾಂಕ: 29.10.2021

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕದ ವಿವಿಧ ವಲಯಗಳ ವ್ಯಾಪ್ತಿಯಲ್ಲಿ 2021–22ನೇ ಸಾಲಿನಲ್ಲಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಯ ಅನುಷ್ಠಾನ ಸಂಬಂಧ ಅಲ್ಪಾವಧಿ ಟೆಂಡರನ್ನು ಕರೆಯಲಾಗಿದ್ದು ವಲಯವಾರು ನಿಗದಿಪಡಿಸಿರುವಂತೆ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://epoc.karnataka.gov.in ಮೂಲಕ ಟೆಂಡರ್‌ಗಳಲ್ಲಿ ಭಾಗವಹಿಸಬಹುದು.

ಕ್ರ. ಸಂ.	ವಲಯ	ಟೆಂಡರ್ ಸಂಖ್ಯೆ (ಯೂನಿಟ್)	2021–22ನೇ ಸಾಲಿನಲ್ಲಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿ ವಿವರ ಹಾಗೂ ಮೀಸಲಾತಿ	ಬೆಳೆಸ ಬೇಕಾಗಿರುವ ಗಿಡಗಳ ಸಂಖ್ಯೆ	ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ)
1	ಬೊಮ್ಮನಹಳ್ಳಿ	1	ವಾರ್ಡ್ ಸಂಖ್ಯೆ 175, 174, 186, 187, 188 (ಸಾಮಾನ್ಯ)	3,000	27,86,000/-
		2	ವಾರ್ಡ್ ಸಂಖ್ಯೆ 189, 190, 93, 184, 185 (ಸಾಮಾನ್ಯ)	3,000	27,86,000/-
		3	ವಾರ್ಡ್ ಸಂಖ್ಯೆ 191,192, 194, 195, 196, 197 (ಸಾಮಾನ್ಯ)	3,000	27,86,000/-
2	ದಾಸರಹಳ್ಳಿ	4	ವಾರ್ಡ್ ಸಂಖ್ಯೆ 12, 13, 14, 15 (ಸಾಮಾನ್ಯ)	3,500	32,50,000/-
		5	ವಾರ್ಡ್ ಸಂಖ್ಯೆ 39, 41, 70, 71, (ಪ. ಜಾತಿ)	3,500	32,50,000/-
3	ಪೂರ್ವ	6	ವಾರ್ಡ್ ಸಂಖ್ಯೆ 31, 32, 47, 48, 60, 61, 78, 18, 19, 20, 21, 22, 33, 34, 46 (ಸಾಮಾನ್ಯ)	3,000	27,86,000/-
		7	ವಾರ್ಡ್ ಸಂಖ್ಯೆ 23, 24, 27, 28, 29, 30, 49, 59, 50, 57, 58, 79, 80, 88, 113 (ಸಾಮಾನ್ಯ)	2,500	23,20,000/-
		8	ವಾರ್ಡ್ ಸಂಖ್ಯೆ 62, 63, 90, 91, 92, 93, 110, 89, 111, 112, 114, 115, 116, 117 (ಪ. ಜಾತಿ)	2,500	23,20,000/-
4	ಮಹದೇವಪುರ	9	ವಾರ್ಡ್ ಸಂಖ್ಯೆ 25, 26, 51, 52, 53, 55 (ಸಾಮಾನ್ಯ)	3,000	27,86,000/-
		10	ವಾರ್ಡ್ ಸಂಖ್ಯೆ 56, 81, 87, 54, 82, 83 (ಸಾಮಾನ್ಯ)	2,500	23,20,000/-
		11	ವಾರ್ಡ್ ಸಂಖ್ಯೆ 84, 85, 86, 149, 150 (ಸಾಮಾನ್ಯ)	2,500	23,20,000/-
5	ರಾ. ರಾ. ನಗರ	12	ವಾರ್ಡ್ ಸಂಖ್ಯೆ 16, 17, 37, 38, 42 (ಸಾಮಾನ್ಯ)	3,000	27,86,000/-
		13	ವಾರ್ಡ್ ಸಂಖ್ಯೆ 69, 73, 129, 160 (ಪ. ಜಾತಿ)	3,000	27,86,000/-
		14	ವಾರ್ಡ್ ಸಂಖ್ಯೆ 40, 72, 159, 130, 198 (ಸಾಮಾನ್ಯ)	3,000	27,86,000/-
6	ದಕ್ಷಿಣ	15	ವಾರ್ಡ್ ಸಂಖ್ಯೆ 122, 123, 124, 132, 133, 134, 157, 158, 161, 165, 166, 167, 180, 181, 182, 183(ಪ. ಜಾತಿ)	3,000	27,86,000/-
		16	ವಾರ್ಡ್ ಸಂಖ್ಯೆ 146, 147, 148, 151, 152, 172, 173, 176, 154, 155, 156, 162, 163, 164, 168, 169, 170, 171, 177, 178, 179 (ಪ. ಪಂಗಡ)	3,000	27,86,000/-
7	ಪಶ್ಚಿಮ	17	ವಾರ್ಡ್ ಸಂಖ್ಯೆ 35, 36, 45, 64, 65, 66, 76, 43, 44, 67, 68, 74, 75, 102, 97, 98, 99, 100, 101, 107 108 (ಸಾಮಾನ್ಯ)	3,500	32,50,000/-
		18	ವಾರ್ಡ್ ಸಂಖ್ಯೆ 77, 94, 95, 96, 109, 120, 121, 103, 104, 105, 106, 125, 126, 127, 128, 131, 135, 136, 137, 138, 139, 140, 141 (ಸಾಮಾನ್ಯ)	3,000	27,86,000/-
8	ಯಲಹಂಕ	19	ವಾರ್ಡ್ ಸಂಖ್ಯೆ 1, 2, 3, 4 (ಪ. ಪಂಗಡ)	3,000	27,86,000/-
		20	ವಾರ್ಡ್ ಸಂಖ್ಯೆ 5, 6, 7 (ಸಾಮಾನ್ಯ)	3,000	27,86,000/-
		21	ವಾರ್ಡ್ ಸಂಖ್ಯೆ 8, 9, 10, 11 (ಸಾಮಾನ್ಯ)	3,000	27,86,000/-

ಇಎಂಡಿ ಘೋಷಣೆ: ಸರ್ಕಾರದ ಆದೇಶ ಸಂಖ್ಯೆ : **FD 675 EXP-12/2020.** ದಿನಾಂಕ:22.12.2020 ರಂತೆ. **1) ಟೆಂಡರ್ ಅವಧಿ :** ಕಾರ್ಯಾದೇಶ ನೀಡಿದ ದಿನಾಂಕದಿಂದ 31.03.2022ರವರೆಗೆ ಅಥವಾ ಮುಂದಿನ ಆದೇಶದವರೆಗೆ. 2) ಪೂರ್ವಭಾವಿ ಸಭೆ ದಿನಾಂಕ : **08.11.2021ರಂದು ಸಂಜೆ 4.30 ಗಂಟೆಗೆ.** 3) ಟೆಂಡರ್ ಸ್ವೀಕರಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕ: **15.11.2021 ರ ಸಂಜೆ 5.30 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **17.11.2021 ರ ಸಂಜೆ 5.30 ಗಂಟೆಗೆ** 4) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **24.11.2021 ರ ಬೆಳಗ್ಗೆ 10.00 ಗಂಟೆಗೆ.** ವಿವರವಾದ ಟೆಂಡರ್ ಪ್ರಕಟಣೆಯ ಪ್ರತಿಯನ್ನು ಹಾಗೂ ಖಾಲಿ ಟೆಂಡರ್ ಫಾರಂಗಳನ್ನು ವೆಬ್‌ಸೈಟ್ www.eproc.karnataka.gov.in ಇಲ್ಲಿ ಪಡೆದುಕೊಳ್ಳಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಬಿಎಂಪಿ.

"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಫಿಕೇಷನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಛೇರಿ : ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು – 560022
ದೂ: +91 80 68951000 ಫ್ಯಾಕ್ಸ್: +91 80 68951001 ಇ–ಮೇಲ್: info@gokaldasexports.com ವೆಬ್‌ಸೈಟ್: www.gokaldasexports.com

ಸೆಪ್ಟೆಂಬರ್ 30, 2021ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಹಾಗೂ ಅರ್ಧವಾರ್ಷಿಕ ಪ್ರತ್ಯೇಕ ಹಾಗೂ ಕ್ರೋಢೀಕೃತ ಐಎನ್‌ಡಿ ಎಎಸ್ ಅಪರಿಶೋಧಿತ ಆರ್ಥಿಕ ಫಲಿತಾಂಶಗಳು

(ಸೆಬಿ (ಎಲ್‌ಒಡಿಆರ್) ನಿಯಮಾವಳಿಗಳು, 2015ರ ನಿಯಮ 47(1) (ಬಿ))

(ರೂ. ಲಕ್ಷಗಳಲ್ಲಿ, ಪ್ರತಿ ಷೇರಿನ ಗಳಿಕೆ ಹೊರತುಪಡಿಸಿ)

ಕ್ರ. ಸಂ.	ವಿವರಗಳು	ಪ್ರತ್ಯೇಕ						ಕ್ರೋಢೀಕೃತ					
		ಅಂತ್ಯಗೊಂಡ ತ್ರೈಮಾಸಿಕ			ಅಂತ್ಯಗೊಂಡ ಅರ್ಧವರ್ಷ		ವರ್ಷಾಂತ್ಯ	ಅಂತ್ಯಗೊಂಡ ತ್ರೈಮಾಸಿಕ			ಅಂತ್ಯಗೊಂಡ ಅರ್ಧವರ್ಷ		ವರ್ಷಾಂತ್ಯ
		ಸೆಪ್ಟೆಂಬರ್ 30, 2021	ಜೂನ್ 30, 2021	ಸೆಪ್ಟೆಂಬರ್ 30, 2020	ಸೆಪ್ಟೆಂಬರ್ 30, 2021	ಸೆಪ್ಟೆಂಬರ್ 30, 2020	ಮಾರ್ಚ್ 31, 2021	ಸೆಪ್ಟೆಂಬರ್ 30, 2021	ಜೂನ್ 30, 2021	ಸೆಪ್ಟೆಂಬರ್ 30, 2020	ಸೆಪ್ಟೆಂಬರ್ 30, 2021	ಸೆಪ್ಟೆಂಬರ್ 30, 2020	ಮಾರ್ಚ್ 31, 2021
		ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಪರಿಶೋಧಿತ
1	ಒಟ್ಟು ಆದಾಯ	44,565.89	24,284.32	34,467.80	68,850.21	58,186.54	1,22,140.28	44,599.73	24,298.73	34,489.42	68,898.46	58,219.05	1,22,293.69
2	ತೆರಿಗೆ ಮತ್ತು ಅಸಾಮಾನ್ಯ ಐಟಂಗಳ ಮುನ್ನ ನಿವ್ವಳ ಲಾಭ/(ನಷ್ಟ)	2,851.78	(250.10)	851.17	2,601.68	461.85	2,630.03	2,861.15	(255.22)	866.51	2,605.93	440.54	2,661.80
3	ತೆರಿಗೆ ಮುನ್ನ ಮತ್ತು ಅಸಾಮಾನ್ಯ ಐಟಂಗಳ ನಂತರ ನಿವ್ವಳ ಲಾಭ/(ನಷ್ಟ)	2,851.78	(250.10)	851.17	2,601.68	461.85	2,630.03	2,861.15	(255.22)	866.51	2,605.93	440.54	2,661.80
4	ತೆರಿಗೆ ಮತ್ತು ಅಸಾಮಾನ್ಯ ಐಟಂಗಳ ನಂತರ ನಿವ್ವಳ ಲಾಭ/(ನಷ್ಟ)	2,851.78	(250.10)	851.17	2,601.68	461.85	2,624.32	2,861.15	(255.22)	866.51	2,605.93	440.54	2,649.16
5	ಅವಧಿ / ವಾರ್ಷಿಕ ಒಟ್ಟು ಸಮಗ್ರ ಆದಾಯ	3,516.76	(825.28)	2,175.98	2,691.48	2,877.00	5,796.78	3,526.88	(829.65)	2,192.07	2,697.23	2,857.19	5,821.63
6	ಪಾವತಿಸಿದ ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ. 5 ಪ್ರತಿಯೊಂದಕ್ಕೆ, ಪೂರ್ಣ ಪಾವತಿಸಲಾಗಿದೆ)	2,170.78	2,144.78	2,141.28	2,170.78	2,141.28	2,144.78	2,170.78	2,144.78	2,141.28	2,170.78	2,141.28	2,144.78
7	ಹಿಂದಿನ ವರ್ಷದ ಪರಿಶೋಧಿತ ಬ್ಯಾಲೆನ್ಸ್‌ಶೀಟ್‌ನಲ್ಲಿ ತೋರಿಸಿದಂತೆ ಇತರೆ ಈಕ್ವಿಟಿ						27,042.14						26,861.99
8	ಪ್ರತಿ ಈಕ್ವಿಟಿ ಷೇರಿನ ಗಳಿಕೆ (ಇಪಿಎಸ್) ಮೂಲ	6.60	(0.58)	1.99	6.04	1.08	6.12	6.62	(0.59)	2.02	6.05	1.03	6.18
	ವಿಭಜಿತ	6.29	(0.58)	1.87	5.75	1.02	5.78	6.31	(0.59)	1.91	5.76	0.97	5.83

ಸೂಚನೆ: ಮೇಲಿನ ಸಾರಸತ್ವವು 2015ರ ಸೆಬಿಯ ನಿಯಂತ್ರಣಗಳ (ಪಟ್ಟಿ ಮಾಡುವ ಹೊಣೆಗಾರಿಕೆಗಳು ಮತ್ತು ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಸಲ್ಲಿಸಲಾಗಿರುವ ತ್ರೈಮಾಸಿಕ / ಅರ್ಧವಾರ್ಷಿಕ / ವಾರ್ಷಿಕ ಆರ್ಥಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಾಂಶವಾಗಿದೆ. ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ (www.bseindia.com and www.nseindia.com) ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ (www.gokaldasexports.com) ಲಭ್ಯವಿದೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿ. ಪರವಾಗಿ
ಸಹಿ/–
ಶಿವರಾಮಕೃಷ್ಣನ್ ಗಣಪತಿ
ವ್ಯವಸ್ಥಾಪಕ ನಿರ್ದೇಶಕರು
DIN: 07954560

ಸ್ಥಳ : ಬೆಂಗಳೂರು
ದಿನಾಂಕ : ಅಕ್ಟೋಬರ್ 29, 2021



ಪ್ರಜಾವಾಣಿ

ಬೆಟ್ಟದ ಹೂವು ಮರಳಿ ಮಣ್ಣಿಗೆ

ಶನಿವಾರ • ಅಕ್ಟೋಬರ್ 30, 2021



ಜೊತೆಗಿರದ ಜೀವ ಎಂದಿಗೂ ಜೀವಂತ

• ಬರಗೂರು ರಾಮಚಂದ್ರಪ್ಪ



ಪುನೀತ್ ರಾಜ್‌ಕುಮಾರ್ ಇನ್ನಿಲ್ಲ ಎಂದರೆ ನಂಬ-ಲಾಗುತ್ತಿಲ್ಲ. ಆದರೆ, ಸಾವು ಸರ್ವಾಧಿಕಾರಿ; ತಾನು ಸಾಯದೆ, ಸಾಯಿಸುವ ನಿರಾಕಾರ ಶಕ್ತಿಯೆಂದರೆ ಸಾವು. ಅದು ಯಾರನ್ನೂ ಹೇಳಿ ಕೇಳಿ ಬರುವುದಿಲ್ಲ. ಕೊರೊನಾ ಸಂದರ್ಭದಲ್ಲಿ ಅಸಂಖ್ಯಾತರನ್ನು ಹೊಸಕಿ ಹಾಕಿದ ಈ ಸರ್ವಾಧಿಕಾರಿ, ಈಗಲೂ ಒಬ್ಬೊಬ್ಬರನ್ನೇ ಹುಡುಕಿಕೊಂಡು ಬಂದು ಕರೆದೊಯ್ಯುತ್ತಿದೆ. ಈಗ ಬಂದದ್ದು ಪುನೀತ್ ಸರದಿ; ಮೊದಲಿಗೆ ಬಂದದ್ದು ಹೃದಯಾಘಾತದ ವರದಿ. ಸ್ವಲ್ಪ ಹೊತ್ತಿನಲ್ಲೇ 'ಇನ್ನಿಲ್ಲ' ಎಂಬ ಒಳಸುದ್ದಿ. ಅಧಿಕೃತವಾಗುವುದಕ್ಕೆ ಮುಂಚೆ 'ಸುಳ್ಳಾಗಲಿ ಈ ಒಳಸುದ್ದಿ' ಎಂಬ ಆಸೆ, ಆಕಾಂಕ್ಷೆ. ಆದರೆ, ಅಗೋಚರ ಸರ್ವಾಧಿಕಾರಿ ಸಾವು ಪುನೀತ್ ಅವರನ್ನು ಕರುಣೆಯಿಲ್ಲದೆ ಕರೆದೊಯ್ದೇಬಿಟ್ಟಿತು. ನನ್ನ ಕಣ್ಣುಗಳಲ್ಲಿ ನೀರು ಹರಿಯಿತು.

ಯಾಕೆ ನಾನು ಕಣ್ಣೀರು ಹಾಕಿದೆ? ಡಾ. ರಾಜ್‌ಕುಮಾರ್ ಅವರ ಜೊತೆಗೆ ನನಗಿದ್ದ ಆತ್ಮೀಯತೆಯಷ್ಟೇ ಕಾರಣವೆ? ಅದೂ ಒಂದು ಕಾರಣ. ಬಾಳಿ ಬದುಕಬೇಕಾಗಿದ್ದ ಜೀವವೊಂದು ಹೀಗೆ ಅನಿರೀಕ್ಷಿತವಾಗಿ ಹಾರಿ ಹೋಗಿಬಿಟ್ಟಿತಲ್ಲ ಎಂಬುದು ಇನ್ನೊಂದು ಕಾರಣ. ಇದು ನನಗಿದ್ದ ರಾಜ್‌ಕುಮಾರ್ ಕುಟುಂಬದ ಒಡನಾಟದ ಫಲವಾಗಿದ್ದು, ಹೇಳಲೇಬೇಕಾದ ಒಂದು ಸಾರ್ವಜನಿಕ ಕಾರಣವೊಂದಿದೆ. ಸಿನಿಮಾ 'ಹೀರೋ'ಗಳೆಂದರೆ ಅವರಿಗೆ ಮಾರುಹೋಗಿ ಆಕಾಶದಗಲ ಅಭಿಮಾನ ತೋರುವ ಜನಸಮೂಹವೊಂದು ರೂಪುಗೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ಅಭಿಮಾನಿಗಳನ್ನು ರಂಜಿಸುವುದಷ್ಟೇ ಜನಪ್ರಿಯ ಸಿನಿಮಾ ನಟ, ನಟಿಯರ ಕೆಲಸವಲ್ಲ. ರಂಜಿಸುವುದರ ಜತೆಗೆ ಸಾರ್ವಜನಿಕ ನಡವಳಿಕೆಯ ಉತ್ತಮಿಕೆಯನ್ನು ಪ್ರಚುರಪಡಿಸುವ, ರೂಪಿಸುವ ಸಾಮಾಜಿಕ ಜವಾಬ್ದಾರಿಯೂ ಮುಖ್ಯವಾಗುತ್ತದೆ. ಇಂತಹ ಸಾಮಾಜಿಕ ಜವಾಬ್ದಾರಿಯನ್ನು ಅತ್ಯಪೂರ್ವವಾಗಿ ನಿರ್ವಹಿಸಿ, ಆದರ್ಶದ ಮಾದರಿಯಾದವರು ರಾಜ್‌ಕುಮಾರ್ ಅವರು.

ತಮ್ಮ ಸಾರ್ವಜನಿಕ ನಡವಳಿಕೆ ಮತ್ತು ನಿರ್ವಹಿಸಿದ ಪಾತ್ರಗಳ ಮೂಲಕ ಡಾ. ರಾಜ್ ಅವರು ತಮ್ಮದೇ ನೆಲೆ– ನಿಲುವುಗಳ ನೈತಿಕ ರೂಪಕವಾಗಿ ಬಾಳಿದರು, ಬೆಳಗಿ ಬೆಳಕು ನೀಡಿದರು. ತಂದೆಯವರ ಸಾರ್ವಜನಿಕ ನಡವಳಿಕೆಯ ಮಾದರಿಯನ್ನು ಅನುಸರಿಸುತ್ತ ಬಂದವರು ಶಿವರಾಜ್ ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್. ಈ ಕಾರಣಕ್ಕೆ ಕೂಡ ಪುನೀತ್ ಅವರ ಅಗಲಿಕೆ ಒಂದು ದೊಡ್ಡ ಸಾರ್ವಜನಿಕ ಆಘಾತ. ಯುವಕರಿಗೆ ಮಾದರಿಯಾಗಿದ್ದ ಕಲಾವಿದ ಇನ್ನಿಲ್ಲವಾದದ್ದು ಜನಪ್ರಿಯ ಸಂಸ್ಕೃತಿ ವಲಯದ ನಷ್ಟ. ಸಿನಿಮಾ ಎಂಬ ಜನಪ್ರಿಯ ಸಂಸ್ಕೃತಿ ಪ್ರಕಾರದಲ್ಲಿ ಜವಾಬ್ದಾರಿಯಿಂದ ನಡೆದುಕೊಂಡು ಸದಭಿರುಚಿಯ ಸಾಕಾರವಾಗಿದ್ದ ಪುನೀತ್ ಎಂಬ ಸಶಕ್ತ ರೂಪಕ ಭೌತಿಕವಾಗಿ ಈಗ ಇಲ್ಲ. ಅವರ ಸಾವಿನೊಂದಿಗೆ ಸರಳತೆ, ಸಜ್ಜನಿಕೆಗಳ ಸಿನಿಮಾ ವ್ಯಕ್ತಿತ್ವವೊಂದು ಮರೆಗೆ ಸರಿದುಹೋಗಿದೆ; ನೆನಪುಗಳನ್ನು ಬಿಟ್ಟು ನೆಲದ ಒಡಲು ಸೇರಿದೆ.

ಹೌದು; ನೆನಪುಗಳು ಉಕ್ಕಿ ಬರುತ್ತಿವೆ, ಆದರೆ ನೆನಪುಗಳು ತೇವಗೊಂಡು ಕಾಡುತ್ತಿವೆ. ಅವರ ಮನೆಗೆ ನಾನು ಹೋದಾಗ ರಾಜ್‌ಕುಮಾರ್ ಅವರು 'ಹಿರಿಯರಿಗೆ ನಮಸ್ಕಾರ ಮಾಡು' ಎಂದು ಹೇಳುತ್ತಿರುವಾಗಲೇ ಬಾಗಿ ನಮಸ್ಕರಿಸುತ್ತಿದ್ದ ಪುನೀತ್, ತಂದೆಯ ಚಿತ್ರಗಳಲ್ಲಿ ಬಾಲನಟನಾಗಿ ಭಾಗವಹಿಸುತ್ತಲೇ ತಂದೆಯ ನಡವಳಿಕೆಯನ್ನು ಮೈಗೂಡಿಸಿಕೊಳ್ಳುತ್ತ ಬೆಳೆದದ್ದು ಈಗ ಇತಿಹಾಸ. ಬೆಟ್ಟದ ಹೂವು, ಎರಡು ನಕ್ಷತ್ರಗಳು ಮುಂತಾದ ಚಿತ್ರಗಳ ಅವರ ಅಭಿನಯ ತುಂಬಾ ಸಹಜವಾಗಿತ್ತು. 'ಬೆಟ್ಟದ ಹೂವು' ಚಿತ್ರದ ಅಭಿನಯಕ್ಕೆ ರಾಷ್ಟ್ರ ಪ್ರಶಸ್ತಿ ಪಡೆದ ಪುನೀತ್ ಮುಂದೆ ಯುವಕರ ಕಣ್ಮಣಿಯಾಗಿ ಬೆಳೆದರು. ವಯಸ್ಸು ಯುವಕನದ್ದಾದರೂ ಮನಸ್ಸು ಮಗುವಿನದು, ಕಷ್ಟ ಕಂಡರೆ ಕರಗುವ ಮನಸ್ಸು.

ರಾಜ್‌ಕುಮಾರ್ ಅವರಂತೆಯೇ ತಾವು ಮಾಡಿದ ಸಹಾಯವನ್ನು ರಾಜ್ ಪುತ್ರರು ಪ್ರಚಾರ ಮಾಡಿಕೊಳ್ಳುತ್ತಿರಲಿಲ್ಲ. ಒಮ್ಮೆ ರಾಜ್‌ಕುಮಾರ್ ಅವರು ನಮ್ಮ ಮನೆಗೆ ಬಂದಾಗ, ಅವರು ಮಾಡಿದ ಸಾಮಾಜಿಕ ಕಾರ್ಯ ಹಾಗೂ ಧನ ಸಹಾಯಗಳನ್ನು ನಾನು ಜ್ಞಾಪಿಸಿ, ಅದು ಹೆಚ್ಚು ಪ್ರಚಾರವಾಗಬೇಕಿತ್ತು ಎಂದಾಗ ಅವರು, 'ಬಲಗೈಯಲ್ಲಿ ಕೊಟ್ಟಿದ್ದು ಎಡಗೈಗೆ ಗೊತ್ತಾಗಬಾರದು ಸಾರ್' ಎಂದಿದ್ದರು. ಈ ಮಾತನ್ನು ನಾನು ಪುನೀತ್ ಅವರಿಗೆ ಹೇಳಿದ್ದೆ. 'ನಿಮ್ಮ ಸಾಮಾಜಿಕ ಕಾರ್ಯಗಳನ್ನು ಹೆಚ್ಚು ಪ್ರಚುರಪಡಿಸಬೇಕು' ಎಂದು ಒತ್ತಾಯಿಸಿದ್ದೆ. ನನ್ನ ಒತ್ತಾಯಕ್ಕೆ ಕಟ್ಟುಬಿದ್ದು, ಒಂದುದಿನ ನನಗೊಂದು ಪಟ್ಟಿ ಕಳಿಸಿದರು. ಆ ಪಟ್ಟಿಯಲ್ಲಿ ಪುನೀತ್ ಅವರು 50ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿಗೆ ಲಕ್ಷಾಂತರ ರೂಪಾಯಿ ಸಹಾಯ ಮಾಡಿದ್ದು ಕಂಡು ಖುಷಿಪಟ್ಟ ನಾನು, 'ಇಂತಹ ವಿಷಯಗಳು ಬಹಿರಂಗವಾಗಬೇಕು ಪುನೀತ್' ಎಂದು ಫೋನ್ ಮಾಡಿದೆ. ಆಗ ಅವರು 'ನಿಮ್ಮ ಜೊತೆ ಮಾತಾಡ್ತೇನೆ ಅಣ್ಣ, ನಿಮ್ಮ ಸಲಹೆ ತಗೊಂಡು ಮುಂದುವರಿತೇವೆ ನಾವು' ಎಂದರು. ಒಂದೆರಡು ಸಾರಿ ಈ ಕುರಿತು ಮಾತಾಡಿದೆನಾದರೂ ಅವರ ಬಿಡುವಿಲ್ಲದ ಸಿನಿಮಾ ಕೆಲಸಗಳ ನಡುವೆ ಅದು ಸಾಧ್ಯವಾಗಲಿಲ್ಲ. ಹಾಗೆಂದು ಅವರ ಸಾಮಾಜಿಕ ಕಾರ್ಯ ನಿಂತಿರಲಿಲ್ಲ.

'ಕನ್ನಡ ಕೋಟ್ಯಧಿಪತಿ' ರಿಯಾಲಿಟಿ ಶೋನಿಂದ ಬಂದ ಸಂಭಾವನೆಯ ಸಾಕಷ್ಟು ಹಣವನ್ನು ಆ ಕಾರ್ಯಕ್ರಮದಲ್ಲಿ ಗೆಲ್ಲಲಾಗದೆ ಹೋದ ಕಷ್ಟದಲ್ಲಿದ್ದ ಸ್ಪರ್ಧಿಗಳಿಗೆ ನೀಡುತ್ತಿದ್ದರು. ಈ ವಿಷಯ ಅನೇಕರಿಗೆ ಗೊತ್ತಿಲ್ಲ. ಆರ್ಥಿಕವಾಗಿ ಸಂಕಷ್ಟದಲ್ಲಿದ್ದ ಸ್ಪರ್ಧಿಗಳನ್ನು ಗುರುತಿಸಿ, ತಮ್ಮ ಸಂಭಾವನೆಯ ಹಣವನ್ನು ಅವರಲ್ಲಿ ಹಂಚಿ ಸಾಮಾಜಿಕ ಸಂತೋಷಪಡುತ್ತಿದ್ದ ಪುನೀತ್, ಇದೇ ಸಂಭಾವನೆಯ ದೊಡ್ಡ ಮೊತ್ತವನ್ನು ತಮ್ಮ ತಾಯಿ– ತಂದೆ ಸ್ಥಾಪಿಸಿದ್ದ 'ಶಕ್ತಿಧಾಮ' ಸಂಸ್ಥೆಗೆ ಕೊಟ್ಟಿದ್ದರು. ಈ ಸಂಸ್ಥೆಯು ನಿರಾಶ್ರಿತ ಮಹಿಳೆಯರಿಗೆ ಆಶ್ರಯಧಾಮವಾಗಿದೆ. ಈಗ ಮಕ್ಕಳಿಗೂ ಆಶ್ರಯ ಕೊಟ್ಟಿದೆ.

ನನ್ನ ಬಗ್ಗೆ ಪುನೀತ್ ಅವರಿಗೆ ವಿಶೇಷ ಗೌರವವಿತ್ತು. ಗೌರವವು ಆತ್ಮೀಯತೆಯಾಯಿತು. ಹೀಗಾಗಿ ಮೊದಮೊದಲು 'ಸಾರ್' ಎನ್ನುತ್ತಿದ್ದವರು 'ಅಣ್ಣ' ಎನ್ನಲು ಆರಂಭಿಸಿದರು. ನಾನು ಯಾವಾಗ ಕರೆ ಮಾಡಿದರೂ ಕೂಡಲೇ ಸ್ವೀಕರಿಸುತ್ತಿದ್ದರು. ಎಲ್ಲರ ಆರೋಗ್ಯ ವಿಚಾರಿಸುತ್ತಿದ್ದರು. ರಾಜ್‌ಕುಮಾರ್ ಅವರ ಮೂವರು ಮಕ್ಕಳಿಗೆ ನನ್ನ ಪತ್ನಿ ರಾಜಲಕ್ಷ್ಮಿಯೆಂದರೆ ವಿಶೇಷ ಗೌರವ. ರಾಜಲಕ್ಷ್ಮಿ ತೀವ್ರ ಅನಾರೋಗ್ಯದಿಂದ ಆಸ್ಪತ್ರೆಯಲ್ಲಿದ್ದಾಗ ಮೂವರೂ ಬಂದು ನೋಡಿ ಧೈರ್ಯ ಹೇಳಿದರು. ಆಕೆ ನಿಧನ ಹೊಂದಿದಾಗ ಮೂವರೂ ಮನೆಗೆ ಬಂದು ಅಂತಿಮ ದರ್ಶನ ಪಡೆದರು. ಪುನೀತ್ ಅವರು ಅಂದು ಬೇರೆ ಊರಿಗೆ ಹೋಗಬೇಕಾಗಿದ್ದರೂ ಮನೆಗೆ ಬಂದು ಅರ್ಧ ಗಂಟೆ ನಮ್ಮ ಜೊತೆಗಿದ್ದರು. ಇದೆಲ್ಲವೂ ನೆನಪಿಗೆ ಬರುತ್ತಿದೆ.

'ಯುವರತ್ನ' ಚಿತ್ರದ ಒಂದು ದೃಶ್ಯದಲ್ಲಿ ವಿಶಿಷ್ಟ ಪಾತ್ರದಲ್ಲಿ ನಾನು ಅಭಿನಯಿಸಬೇಕಾಗಿತ್ತು. ಇದು ನಿರ್ದೇಶಕರು ಮತ್ತು ಪುನೀತ್ ಅವರ ಅಪೇಕ್ಷೆಯಾಗಿತ್ತು. ಮೈಸೂರಿನಲ್ಲಿ ಚಿತ್ರೀಕರಣವಿದ್ದುದರಿಂದ ನಾನು ಸಮಯ ಹೊಂದಿಸಲಾಗಲಿಲ್ಲ. ಅದು ಸಾಧ್ಯವಾಗಿದ್ದರೆ ಅವರ ಜತೆಗೆ ಅಭಿನಯಿಸಿದ ನೆನಪು ಉಳಿಯುತ್ತಿತ್ತು. ಈಗ ಸಂಕಟ ಉಳಿದಿದೆ.

ಇದೇ 'ಯುವರತ್ನ'ದ ಚಿತ್ರೀಕರಣವು ಧಾರವಾಡದಲ್ಲಿ ನಡೆಯುತ್ತಿದ್ದ ನೆನಪು. ಆಗ ಹಾವೇರಿಯ ಜೂನಿಯರ್ ರಾಜ್‌ಕುಮಾರ್ ಎಂಬ ಖ್ಯಾತಿಯ ಅಶೋಕ್ ಬಸ್ತಿಯವರು ತಮ್ಮೂರಿನಲ್ಲಿ 'ರಾಜಕುಮಾರ್ ಸಾಂಸ್ಕೃತಿಕ ಭವನ' ಕಟ್ಟುತ್ತಿದ್ದು ಅದರ ಶಂಕುಸ್ಥಾಪನೆಗೆ ಪುನೀತ್ ಅವರನ್ನು ಒಪ್ಪಿಸಿಕೊಡಿ ಎಂದು ಒತ್ತಾಯಿಸಿದರು. ಆಗ ನಾನು ಪುನೀತ್ ಅವರನ್ನು ಸಂಪರ್ಕಿಸಿದೆ. ಅವರು 'ನೀವು ಹೇಳಿದ ಮೇಲೆ ಆಯ್ತು ಅಣ್ಣ' ಎಂದು ಹಾವೇರಿಗೆ ಹೋಗಿ ಶಂಕುಸ್ಥಾಪನೆ ನೆರವೇರಿಸಿದರು.

ರಾಜ್‌ಕುಮಾರ್ ಬಗ್ಗೆ ಪುನೀತ್ ಬರೆದ ಪುಸ್ತಕವನ್ನು ನಾನೇ ಲೋಕಾರ್ಪಣೆ ಮಾಡಬೇಕೆಂದು ಅವರು ಮತ್ತು ರಾಘಣ್ಣ ಆಹ್ವಾನಿಸಿದರು. ನನಗೆ ಅದೊಂದು ಅಪರೂಪದ ಸಂದರ್ಭ. ನನ್ನ ಅಂದಿನ ಭಾಷಣವನ್ನು ಮರುಮುದ್ರಣದಲ್ಲಿ ಅಚ್ಚು ಮಾಡುತ್ತೇನೆ ಎಂದು ಹಿಗ್ಗಿನಿಂದ ಹೇಳಿದ್ದರು ಪುನೀತ್.

ಹೀಗೆ ಎಷ್ಟು ನೆನಪುಗಳನ್ನು ಹೇಳಲಿ? ವಿಭಿನ್ನವಾದ, ವಿಶಿಷ್ಟವಾದ ಪಾತ್ರಗಳಲ್ಲಿ ಅಭಿನಯಿಸಿದ್ದರು. ಚಾರಿತ್ರಿಕ ವಸ್ತುವುಳ್ಳ ಚಿತ್ರವೊಂದನ್ನು ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ರೂಪಿಸಿ ಅಭಿವ್ಯಕ್ತಿಸುವ ಅಭೀಪ್ಸೆಯನ್ನು ಒಮ್ಮೆ ನನ್ನೊಂದಿಗೆ ಹಂಚಿಕೊಂಡಿದ್ದರು. ಅಂದರೆ ಅವರ ಅಭಿನಯದ ಹಸಿವು ಮತ್ತು ಹಂಬಲಕ್ಕೆ ಅಪಾರ ವಿಸ್ತಾರವಿತ್ತು; ವ್ಯಕ್ತಿತ್ವಕ್ಕೆ ಅಸಾಧಾರಣ ಪ್ರಬುದ್ಧತೆಯಿತ್ತು. ಸಾಮಾಜಿಕ ಸೇವೆಯ ದೊಡ್ಡ ಆಕಾಂಕ್ಷೆಯನ್ನು ಮತ್ತಷ್ಟು ವಿಸ್ತರಿಸುವ ಒತ್ತಾಸೆಯಿತ್ತು.

ಆದರೆ ಇಂದು ಅವರೇ ಇಲ್ಲ! ಪುನೀತ್ ಅವರನ್ನು ನಾವೆಂದೂ ಮರೆಯುವುದಿಲ್ಲ. ಇಲ್ಲೀವರೆಗೆ ಬರೆದಿದ್ದು ಕೇವಲ ಅಕ್ಷರಗಳಲ್ಲ; ಅಂತರಂಗದ ಆರ್ದ್ರ, ಆಪ್ತ ಹನಿಗಳು. ಪುನೀತ್, ನೀವು ಹಿರಿ ಕಿರಿಯರೆನ್ನದೆ ನಮ್ಮೆಲ್ಲರ ಒಳಗೆ ಇರುತ್ತೀರಿ. ನಿಜ, ಇದು ನಮಗೆ ನಾವು ಮಾಡಿಕೊಳ್ಳುವ ಸಮಾಧಾನ; ಸಾವು ಕಲಿಸಿದ ಸಾಂತ್ವನ.



ಬಾಲಿವುಡ್ ನಟ ಅಮಿತಾಬ್ ಬಚ್ಚನ್ ಅವರೊಂದಿಗೆ ರಾಜ್‌ಕುಮಾರ್ ಅವರ ಕುಟುಂಬ

ಈ ಸಹೋದರರು ಪರಸ್ಪರರ ಅಭಿಮಾನಿಗಳು

'ನಾನು ಶಿವಣ್ಣನ ಅಭಿಮಾನಿ', 'ನಾನು ಅಪ್ಪು ಅಭಿಮಾನಿ...'

– ಹೀಗೆ ಪರಸ್ಪರ ಗೆಳೆಯರಂತೆ ಮಾತನಾಡಿಕೊಂಡಿದ್ದರು ನಟ ಶಿವರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್. ಈ ಇಬ್ಬರ ನಡುವೆ ನಿಂತು ಸಾಕ್ಷಿಯಾದವರು ನಟ ಯಶ್.

ಅಕ್ಟೋಬರ್ 24ರಂದು ಶಿವರಾಜ್‌ಕುಮಾರ್ ಅಭಿನಯದ ಭಜರಂಗಿ – 2 ಚಿತ್ರದ ಬಿಡುಗಡೆ ಪೂರ್ವ ಕಾರ್ಯಕ್ರಮದಲ್ಲಿ ಮೇಲಿನ ಸನ್ನಿವೇಶ ನಡೆಯಿತು. ಅಣ್ಣನ ಚಿತ್ರ ಬಿಡುಗಡೆ ವೇಳೆ ನಿರೂಪಕಿ ಕೇಳಿದ ಪ್ರಶ್ನೆಗೆ ಪುನೀತ್, 'ನಾನು ಶಿವಣ್ಣನ ಅಭಿಮಾನಿ' ಎಂದಿದ್ದರು.

ಅದಕ್ಕೆ ಅದೇ ರೀತಿ ಪ್ರತಿಕ್ರಿಯೆ ಕೊಟ್ಟ ಶಿವರಾಜ್‌ಕುಮಾರ್, 'ನಾನು ಅಪ್ಪು ಅಭಿಮಾನಿ. ಅವನು ಒಳ್ಳೆಯ ಡ್ಯಾನ್ಸರ್. ತುಂಬಾ ಚೆನ್ನಾಗಿ ಡ್ಯಾನ್ಸ್ ಮಾಡುತ್ತಾನೆ' ಎಂದಿದ್ದರು. ಜೊತೆಗೆ ಇತರ ಡ್ಯಾನ್ಸರ್ ನಟರ ಹೆಸರುಗಳನ್ನೂ ಉಲ್ಲೇಖಿಸಿದ್ದರು ಶಿವಣ್ಣ.

'ಶಿವಣ್ಣನ 'ಮನಮೆಚ್ಚಿದ ಹುಡುಗಿ', 'ಜನುಮದ ಜೋಡಿ', 'ಕುರುಬನ ರಾಣಿ' ತುಂಬಾ ಇಷ್ಟ. ಅಲ್ಲಿ ಶಿವಣ್ಣನ ಹಳ್ಳಿ ಹುಡುಗನ ಪಾತ್ರದಲ್ಲಿ ಕಾಣಿಸಿಕೊಳ್ಳುವಾಗ ಅದರ ಲುಕ್ಕೇ ಬೇರೆ' ಎಂದು ಮುಕ್ತವಾಗಿ ಹೊಗಳಿದ್ದರು ಪುನೀತ್. ಭಜರಂಗಿ–2 ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿ ಅರ್ಧ ಪ್ರದರ್ಶನ ಕಾಣುವಾಗಲೇ ಚಿತ್ರದ ಯಶಸ್ಸಿಗೆ ಶುಭ ಕೋರಿದ್ದ ಪುನೀತ್ ಇಲ್ಲವಾದರು. ಅವರ ಗೌರವಾರ್ಥ ಶುಕ್ರವಾರ ರಾಜ್ಯದಾದ್ಯಂತ ಚಿತ್ರ ಪ್ರದರ್ಶನ ಹಾಗೂ ಚಿತ್ರರಂಗದ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಗಿತ್ತು.

ಭಜರಂಗಿ – 2 ಚಿತ್ರದ ಪ್ರಧಾನ ಹಾಡಿಗೆ ಶಿವಣ್ಣ, ಯಶ್ ಮತ್ತು ಪುನೀತ್ ಜೊತೆಯಾಗಿ ಹೆಜ್ಜೆ ಹಾಕಿ ರಂಜಿಸಿದ್ದರು. ಈ ಪುಟ್ಟ ವಿಡಿಯೊ ತುಣುಕು ಎಲ್ಲ ಜಾಲತಾಣಗಳಲ್ಲಿ ವ್ಯಾಪಕವಾಗಿ ಪ್ರಸಾರವಾಗಿ ಪ್ರಶಂಸೆಗೆ ಪಾತ್ರವಾಗಿತ್ತು.



ಭಜರಂಗಿ –2 ಬಿಡುಗಡೆಪೂರ್ವ ಸಮಾರಂಭದಲ್ಲಿ ಶಿವರಾಜ್‌ಕುಮಾರ್, ಯಶ್ ಜೊತೆ ಹೆಜ್ಜೆ ಹಾಕಿದ ಪುನೀತ್ ರಾಜ್‌ಕುಮಾರ್

ಪಟಾಕಿ ಸುಡಬೇಡಿ; ಕ್ಯಾಲೊರಿ ಸುಡಿ:

'ಪಟಾಕಿ ಸುಡಬೇಡಿ ಕ್ಯಾಲೊರಿ ಸುಟ್ಟುಬಿಡಿ...' ಹೀಗೆ ಹೇಳುತ್ತಾ ಕಳೆದ ವರ್ಷ ದೀಪಾವಳಿ ವೇಳೆಗೆ ಪುಟ್ಟ ವಿಡಿಯೊವೊಂದನ್ನು ಹರಿಯಬಿಟ್ಟಿದ್ದರು ಪುನೀತ್.

ತಂದೆ ಡಾ.ರಾಜ್‌ಕುಮಾರ್ ಅವರ ದೀಪಾವಳಿ... ಗೋವಿಂದ ಲೀಲಾವಳಿ ಹಾಡನ್ನು ಗುನುಗಿ ಅಭಿಮಾನಿಗಳಿಗೆ ಹಬ್ಬದ ಶುಭ ಕೋರಿ ಮಾತನಾಡಿದ್ದ ಅವರು, 'ಈ ದೀಪಾವಳಿಯಲ್ಲಿ ಯಾರೂ ಪಟಾಕಿ ಸುಡುವುದು ಬೇಡ. ನಿಮ್ಮಲ್ಲಿರುವ ಕ್ಯಾಲೊರಿ ಸುಟ್ಟುಬಿಡಿ. ಜೊತೆಗೆ ಅಕ್ಕಪಕ್ಕದಲ್ಲಿರುವವರಿಗೆ ಸಾಧ್ಯವಾದಷ್ಟು ಸಹಾಯ ಮಾಡಿ. ಮನೆಯಲ್ಲೇ ಇರಿ. ಸುರಕ್ಷಿತವಾಗಿರಿ' ಎಂದು ಹಾರೈಸಿದ್ದರು ಪುನೀತ್.

ಆಗಾಗ ತಮ್ಮ ಜೀವನಶೈಲಿ, ಆರೋಗ್ಯ ಕಾಪಾಡಿಕೊಳ್ಳುವ ಟಿಪ್ಸ್, ವ್ಯಾಯಾಮಗಳ ಬಗೆಗೆ ಸಾಮಾಜಿಕ ಜಾಲತಾಣಗಳ ಮೂಲಕ ನೇರ ಪ್ರಸಾರದಲ್ಲಿ ಕಾಣಿಸಿಕೊಂಡು ಅಭಿಮಾನಿಗಳಿಗೆ ಹತ್ತಿರವಾಗಿದ್ದರು.

ರಾಯರಲ್ಲಿ ಭಕ್ತಿ ಹೊಂದಿದ್ದರು



ಜನಪ್ರಿಯ ನಟ ಪುನೀತ್ ರಾಜಕುಮಾರ್ ಅವರು ಅಕಾಲಿಕವಾಗಿ ಮರಣ ಹೊಂದಿದ್ದು, ಚಲನಚಿತ್ರ ರಂಗಕ್ಕೆ ಮಾತ್ರವಲ್ಲ ರಾಘವೇಂದ್ರ ಸ್ವಾಮಿಗಳ ಭಕ್ತ ಸಮೂಹಕ್ಕೂ ಅಪಾರವಾದ ಹಾನಿಯಾಗಿದೆ. ಅವರ ಇಡೀ ಕುಟುಂಬ ರಾಯರಲ್ಲಿ ಭಕ್ತಿ ಹೊಂದಿದೆ. ರಾಯರ ಕುರಿತು ಮಂತ್ರಾಲಯದಲ್ಲಿ ಭಕ್ತಿಭಾವುಕರಾಗಿ ಪುನಿತ್ ರಾಜಕುಮಾರ್ ಭಕ್ತಿಗೀತೆ ಹಾಡಿದ್ದರು. ಅಂತಹ ವ್ಯಕ್ತಿ ಈಗ ಇಲ್ಲ ಎನ್ನುವುದು ತುಂಬಾ ನೋವಿನ ಸಂಗತಿ. ಅವರ ಆತ್ಮಕ್ಕೆ ಸದ್ಗತಿ ದೊರಕಲಿ ಎಂದು ಪ್ರಾರ್ಥಿಸುತ್ತೇನೆ.

ಶ್ರೀಸುಬುಧೇಂದ್ರ ತೀರ್ಥ ಸ್ವಾಮಿ
ಮಂತ್ರಾಲಯ ಮಠದ ಪೀಠಾಧಿಪತಿ

ಪುನೀತ್‌ಗೆ ಉಂಟು ರಾಮನಗರದ ಮಣ್ಣಿನ ನಂಟು

ಪ್ರಜಾವಾಣಿ ವಾರ್ತೆ

ರಾಮನಗರ: 'ಪವರ್ ಸ್ಟಾರ್' ಪುನೀತ್ ರಾಜಕುಮಾರ್ ಜಿಲ್ಲೆಯ ಮಣ್ಣಿನೊಂದಿಗೆ ನಂಟು ಹೊಂದಿದ್ದು, ಬಿಡದಿ ಹೋಬಳಿಯ ಶೇಷಗಿರಿಹಳ್ಳಿಯಲ್ಲಿರುವ ಅವರ ತೋಟವನ್ನು 'ಪುನೀತ್ ಫಾರಂ' ಎಂದೇ ಗುರುತಿಸಲಾಗುತ್ತಿದೆ.

ಡಾ.ರಾಜ್‌ಕುಮಾರ್ ಕುಟುಂಬ ದಶಕಗಳ ಹಿಂದೆಯೇ ಇಲ್ಲಿ ಜಮೀನು ಖರೀದಿ ಮಾಡಿತ್ತು. ಸರ್ವೆ ನಂಬರ್ 72 ಹಾಗು 73ರಲ್ಲಿ ಒಟ್ಟು 13 ಎಕರೆ ಜಮೀನಿನಲ್ಲಿ ತೆಂಗು ಬೆಳೆಯಲಾಗುತ್ತಿದೆ. ಪುನೀತ್ ಹೆಸರಿನಲ್ಲಿ 3 ಎಕರೆ ಹಾಗೂ ರಾಜ್ ಕುಟುಂಬದ ಇತರೇ ಸದಸ್ಯರ ಹೆಸರಿನಲ್ಲಿ ಈ ಜಮೀನನ್ನು ಖರೀದಿ ಮಾಡಲಾಗಿತ್ತು. ಇಲ್ಲಿ ರಾಜ್‌ಕುಮಾರ್ ಅವರ ತಮ್ಮ ವರದರಾಜು ಹಾಗೂ ಅವರ ತಾಯಿಯ ಸಮಾಧಿಯನ್ನು ಕಟ್ಟಿಸಿದ್ದರು. ಇಲ್ಲೊಂದು ಪುಟ್ಟ ಮನೆ ಮಾಡಿಕೊಂಡು, ಆಗಾಗ್ಗೆ ಕಾಲ ಕಳೆಯುತ್ತಿದ್ದರು. ಅವರೊಟ್ಟಿಗೆ ಪುನೀತ್ ಸಹ ಇಲ್ಲೇ ಇರುತ್ತಿದ್ದರು. ತಮ್ಮ ಬಾಲ್ಯವನ್ನು ಹೆಚ್ಚಾಗಿ ಇಲ್ಲಿಯೇ ಕಳೆದಿದ್ದರು ಎಂದು ಫಾರಂ ಹೌಸ್ ನೋಡಿಕೊಳ್ಳುವ ಕೆಲಸಗಾರರು ನೆನಪಿಸಿಕೊಳ್ಳುತ್ತಾರೆ.

ಬೆಂಗಳೂರು–ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ ಈ ಜಮೀನು ಇದೆ. ಈ ದಾರಿಯಲ್ಲಿ ಸಂಚರಿಸುವಾಗೆಲ್ಲ ಪುನೀತ್ ತೋಟಕ್ಕೆ ಭೇಟಿ ಕೊಡುತ್ತಿದ್ದರು. ಈಚೆಗೆ ತೋಟದ ಒಂದು ಭಾಗ ಹೆದ್ದಾರಿ ವಿಸ್ತರಣೆಗಾಗಿ ಸ್ವಾಧೀನ ಆಗಿದ್ದು, ಉಳಿದ ಭಾಗದಲ್ಲಿ ತೋಟವನ್ನು ಸುಂದರವಾಗಿ ರೂಪಿಸಲು ಪುನೀತ್ ಯೋಜನೆ ಇಟ್ಟುಕೊಂಡಿದ್ದರು ಎನ್ನಲಾಗಿದೆ. ಆದರೆ, ತಮ್ಮ ಕನಸು ಈಡೇರುವ ಮುನ್ನವೇ ಅವರು ನಿಧನರಾಗಿರುವುದು ಅವರ ಅಭಿಮಾನಿಗಳಲ್ಲಿ ನಿರಾಸೆ ತರಿಸಿದೆ.



ಪತ್ನಿ ಅಶ್ವಿನಿಯೊಂದಿಗೆ ಪುನೀತ್




ಅಪ್ಪು ಸಂಭ್ರಮ...

ಹುಬ್ಬಳ್ಳಿಯ ಚೆನ್ನಮ್ಮ ವೃತ್ತದಲ್ಲಿ ಸಿನಿಮಾವೊಂದರ ಚಿತ್ರೀಕರಣ ಸಂದರ್ಭದಲ್ಲಿ ಅಭಿಮಾನಿಗಳ ನಡುವೆ ಪುನೀತ್ ರಾಜ್‌ಕುಮಾರ್

ಅಪ್ಪನಿಗೆ ತಕ್ಕ ಮಗ 'ಅಪ್ಪು'

ಅಪ್ಪು ಹುಟ್ಟಿನಿಂದಲೇ ಕಲಾವಿದ. ಕಲೆ ಅನ್ನುವುದನ್ನು ಯಾರೂ ಅವನಿಗೆ ಹೇಳಿಕೊಟ್ಟಿಲ್ಲ. 1975, ವರನಟ ರಾಜ್‌ಕುಮಾರ್ ಅತ್ಯಂತ ಪ್ರಬುದ್ಧ ಕಲಾವಿದರಾಗಿದ್ದ ಸಮಯವದು. ಆಗ ರಾಜ್‌ಕುಮಾರ್ ಮೈಸೂರಿನಲ್ಲಿ 'ಮಯೂರ' ಸಿನಿಮಾದ ಶೂಟಿಂಗ್‌ನಲ್ಲಿದ್ದರು. ಇತ್ತ ಪಾರ್ವತಮ್ಮ ರಾಜ್‌ಕುಮಾರ್ ಚೆನ್ನೈನ (ಆಗ ಮದ್ರಾಸ್) ಕಲ್ಯಾಣಿ ಆಸ್ಪತ್ರೆಯಲ್ಲಿದ್ದರು. 1975 ಮಾ.17 ಅಪ್ಪು ಜನಿಸಿದ್ದ. 'A great star was born'.



ಮಗು ಜನಿಸಿದ ಸುದ್ದಿ ತಿಳಿದ ತಕ್ಷಣ ಚಿತ್ರದ ನಿರ್ಮಾಪಕರಾಗಿದ್ದ ವೇಣುಗೋಪಾಲ್ ಚಿತ್ರೀಕರಣವನ್ನೇ ಸ್ಥಗಿತಗೊಳಿಸಿ, ಮಗುವನ್ನು ನೋಡಿಕೊಂಡು ಬನ್ನಿ ಎಂದು ಕಾರ್ ಮಾಡಿ ಕಳುಹಿಸಿಕೊಟ್ಟಿದ್ದರು. ಮರುದಿನ ರಾಜ್‌ಕುಮಾರ್ ಆಸ್ಪತ್ರೆಯಲ್ಲಿದ್ದರು.

ಕಲ್ಯಾಣಿ ಆಸ್ಪತ್ರೆ ನಮ್ಮ ಮನೆಯಿಂದ ನಡೆದುಕೊಂಡು ಹೋಗುವಷ್ಟು ದೂರದಲ್ಲಿತ್ತು. ಹೀಗಾಗಿ ಆಸ್ಪತ್ರೆಗೆ ಊಟ, ತಿಂಡಿ ವ್ಯವಸ್ಥೆ ನಮ್ಮ ಮನೆಯಿಂದಲೇ ಆಗುತ್ತಿತ್ತು. ಪಾರ್ವತಮ್ಮ ರಾಜ್‌ಕುಮಾರ್ ಅವರಿಗೆ ನನ್ನ ಪತ್ನಿ ಎಂದರೆ ಬಹಳ ಪ್ರೀತಿ. ಹೀಗಿತ್ತು ನಮ್ಮ ಸಂಬಂಧ. ಇಂಥ ಸಂಬಂಧ ಬೆಳೆಯುವುದೇ ಅಪರೂಪ.

ರಾಜ್‌ಕುಮಾರ್ ಅವರ ಮೇರುಕಾಲದಲ್ಲಿ ಹುಟ್ಟಿದ ಪುನೀತ್ ಕಲಾಪ್ರತಿಭೆಯನ್ನು ಹುಟ್ಟುವಾಗಲೇ ಹೊತ್ತುತಂದಿದ್ದ. ರಾಜ್‌ಕುಮಾರ್ ಅವರ 'concentrated' ಪ್ರತಿಭೆ ಅಪ್ಪು. ರಾಜ್‌ಕುಮಾರ್ ಒಳ್ಳೆಯ ಹಾಡುಗಾರ, ಡ್ಯಾನ್ಸ್ ಅದ್ಭುತವಾಗಿ ಮಾಡುತ್ತಿದ್ದರು. ಒಳ್ಳೆಯ ಫೈಟರ್, ನಟ. ನಡತೆ, ಗುಣದಲ್ಲಿ ಮುತ್ತು. ಇದನ್ನು ಭಟ್ಟಿ ಇಳಿಸಿಕೊಂಡು ಹುಟ್ಟಿದ ಮಗು ಅಪ್ಪು. ಎರಡೂವರೆ ವರ್ಷದಲ್ಲೇ ಅಪ್ಪು ಡ್ಯಾನ್ಸ್ ಕಲಿತಿದ್ದ. ಅಪ್ಪನಿಗೆ ತಕ್ಕ ಮಗ. ಇಂಥ ಬಾಲಪ್ರತಿಭೆ ಅಪರೂಪ. ಯುವಕನಾದ ಮೇಲೆ ಈ ಕಲೆ ಮತ್ತಷ್ಟು ಅರಳುತ್ತಾ ಬಂತು. ಮ್ಯೂಸಿಕಲ್ ನೈಟ್ಸ್‌ನಲ್ಲಿ ರಾಜ್‌ಕುಮಾರ್ ಅವರಿಗೆ ವಿಶ್ರಾಂತಿ ಬೇಕು ಎಂದಾಗ ಅಪ್ಪು ಹಾಡುತ್ತಿದ್ದ.

ಖಾಸಗಿ ಟ್ಯೂಷನ್‌ನಲ್ಲಿ ಶಿಕ್ಷಣ ಪಡೆದ ಅಪ್ಪು ಓದಿನಲ್ಲೂ ಮುಂದಿದ್ದ. ನನಗಿನ್ನೂ ನೆನಪಿದೆ. ಅಪ್ಪು ಕನ್ನಡ ಶಿಕ್ಷಕರಾಗಿದ್ದ ನಾರಾಯಣ ರಾಯರು ಹೇಳುತ್ತಿದ್ದರು, 'ಏನ್ ಸಾರ್ ಈ ಮಗು.. ಹಿಂಗೆ ಹೇಳಿದ್ದನ್ನು ಹಂಗೆ ಹೇಳ್‌ಬಿಡುತ್ತಲ್ಲಾ' ಎಂದು. ಯುವಕನಾದ ಮೇಲೆ ಅದ್ಭುತವಾದ ಕಂಪ್ಯೂಟರ್ ಜ್ಞಾನವನ್ನು ಅಪ್ಪು ಪಡೆದಿದ್ದ.

ಕನ್ನಡ ಚಿತ್ರರಂಗಕ್ಕೆ ಇದು ತುಂಬಲಾರದ ನಷ್ಟ. ಯುವನಟರು ಇವನಿಂದ ಕಲಿಯುವಂಥದ್ದು ಬಹಳಷ್ಟಿದೆ.

ಎಸ್.ಕೆ. ಭಗವಾನ್, ಚಿತ್ರ ನಿರ್ದೇಶಕ

'ಫಲ ನೀಡದ 3 ಗಂಟೆಗಳ ಪ್ರಯತ್ನ'

ಪುನೀತ್ ರಾಜ್‌ಕುಮಾರ್ ಅವರು ಬೆಳಿಗ್ಗೆ ಜಿಮ್‌ಗೆ ತೆರಳಿ, ಅಲ್ಲಿ ಎರಡು ಗಂಟೆ ವ್ಯಾಯಾಮ ಮಾಡಿದ್ದರು. ಆಗ ಎದೆಯಲ್ಲಿ ನೋವು ಕಾಣಿಸಿಕೊಂಡಿದ್ದರಿಂದ ಕುಟುಂಬದ ವೈದ್ಯರ ಬಳಿ ಹೋಗಿದ್ದರು. ಇಸಿಜಿ ಪರೀಕ್ಷೆ ನಡೆಸಿದಾಗ ಹೃದಯಾಘಾತ ಆಗಿರುವುದು ದೃಢಪಟ್ಟಿತ್ತು. ಹೆಚ್ಚಿನ ಚಿಕಿತ್ಸೆಗೆ ವಿಕ್ರಮ್ ಆಸ್ಪತ್ರೆಗೆ ಬರುವಾಗ ಮಾರ್ಗ ಮಧ್ಯದಲ್ಲಿಯೇ ಹೃದಯದ ಕಾರ್ಯಚಟುವಟಿಕೆ ಸ್ತಬ್ಧವಾಗಿತ್ತು. ಹೃದಯವು ತುಂಬಾ ದುರ್ಬಲವಾಗಿತ್ತು. ಹೃದಯದ ಮಸಾಜ್ ಸೇರಿದಂತೆ ಎಲ್ಲ ರೀತಿಯ ಪ್ರಯತ್ನಗಳನ್ನು ನಡೆಸಲಾಯಿತು. ಮೂರು ಗಂಟೆಗಳು ತಜ್ಞ ವೈದ್ಯರು ಚಿಕಿತ್ಸೆ ನೀಡಿದರೂ ಅವರ ದೇಹ ಚಿಕಿತ್ಸೆಗೆ ಸ್ಪಂದಿಸಲಿಲ್ಲ.


ಡಾ.ರಂಗನಾಥ್ ನಾಯಕ್,
ವಿಕ್ರಮ್ ಆಸ್ಪತ್ರೆ ಹೃದ್ರೋಗ ತಜ್ಞ

ಗಣ್ಯರ ಮಾತಿನಲ್ಲಿ ಅಪ್ಪು...



ಬಾಲನಟರಾಗಿ ಚಿತ್ರರಂಗದಲ್ಲಿ ವೃತ್ತಿ ಆರಂಭಿಸಿದ ಪುನೀತ್ ಅವರ ಹಠಾತ್ ನಿರ್ಗಮನವು ಆಘಾತ ಮೂಡಿಸಿದೆ. ತಮ್ಮ ಅದ್ಭುತ ನಟನೆ, ಹಾಡುಗಾರರಾಗಿ ಕನ್ನಡಿಗರ ಮನಗೆದ್ದಿದ್ದರು. ಟಿ.ವಿ ನಿರೂಪಕರಾಗಿ, ನಿರ್ಮಾಪಕರಾಗಿಯೂ ಛಾಪು ಬೀರಿದ್ದರು. ಬಹುಮುಖ ಪ್ರತಿಭೆಯ ಅಪ್ಪಟ ಕಲಾವಿದರಾಗಿದ್ದರು.

ಎಂ.ವೆಂಕಯ್ಯ ನಾಯ್ಡು, ಉಪ ರಾಷ್ಟ್ರಪತಿ



ಮನಸ್ಸಿಗೆ ತೀವ್ರ ಆಘಾತವಾಗಿದೆ. ಅವರ ನಟಿಸಿದ್ದ 'ಪೃಥ್ವಿ' ಮತ್ತು 'ರಾಜಕುಮಾರ' ಚಿತ್ರವನ್ನು ಅಪ್ಪು ಅವರ ಜೊತೆಯಲ್ಲೇ ನೋಡಿದ್ದೆ. ಈ ದಿನ ಅವರಿಲ್ಲ ಎಂದರೆ ನಂಬಲಸಾಧ್ಯವಾಗಿದೆ. ಈ ದಿನ ಯುವರತ್ನನನ್ನು ಕಳೆದುಕೊಂಡು ನಮ್ಮ ಕರುನಾಡು ಬರಿದಾಗಿದೆ.

ಎಚ್.ಡಿ. ದೇವೇಗೌಡ, ಮಾಜಿ ಪ್ರಧಾನ ಮಂತ್ರಿ



ನಾನು ತೀವ್ರ ಆಘಾತಕ್ಕೆ ಒಳಗಾಗಿದ್ದೇನೆ. ಅತ್ಯಂತ ಕಿರಿಯ ವಯಸ್ಸಿನಲ್ಲೇ ಮೇರುಸಾಧನೆ ಮಾಡಿದ ನಟನನ್ನು ಕರುನಾಡು ಕಳೆದುಕೊಂಡಿದೆ. ಯುವಕರ ಕಣ್ಮಣಿಯಾಗಿದ್ದ ಪುನೀತ್. ನ.1ರಂದು ಅವರ ವೆಬ್‌ಸೈಟ್ ಉದ್ಘಾಟನೆ ಮಾಡಲು ನನ್ನನ್ನು ಆಹ್ವಾನಿಸಿ ಸಮಯ ನಿಗದಿ ಮಾಡಲು ಗುರುವಾರ ಕರೆ ಮಾಡಿದ್ದರು. ಶುಕ್ರವಾರ ಅವರ ಭೇಟಿ ನಿಗದಿಯಾಗಿತ್ತು . ಆದರೆ ವಿಧಿಯಾಟ ಬೇರೆಯದೇ ಆಗಿತ್ತು. ಚಿತ್ರರಂಗವು ನಾಯಕತ್ವ ಇರುವ ನಟನನ್ನು ಕಳೆದುಕೊಂಡಿದೆ. ರಾಜ್‌ಕುಮಾರ್ ಸಂಸ್ಕಾರದಲ್ಲಿ ಬೆಳೆದ ನಡೆ, ನುಡಿ ಅವರದು. ನನಗೆ ಹಾಗೂ ರಾಜ್‌ಕುಮಾರ್ ಅವರ ಕುಟುಂಬಕ್ಕೆ ಬಹಳ ವರ್ಷದ ಸ್ನೇಹವಿದೆ. ಅಭಿಮಾನಿಗಳು ಶಾಂತ ರೀತಿಯಿಂದ ಅವರನ್ನು ನಾವು ಬೀಳ್ಕೊಡಬೇಕು.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ




ಎರಡು ದಿನದ ಹಿಂದಷ್ಟೇ ಚುನಾವಣಾ ಪ್ರಚಾರದ ಬಿಡುವಿನ ವೇಳೆ 'ಅರಸು' ಸಿನಿಮಾವನ್ನು ವೀಕ್ಷಿಸಿದ್ದೆ. ಕಿರುವಯಸ್ಸಿನಲ್ಲೇ ಪುನೀತ್ ಅಗಲಿದ್ದು ತೀವ್ರ ಆಘಾತ ತಂದಿದೆ. ಕನ್ನಡಿಗರ ಹೃದಯದಲ್ಲಿ ಚಿರಸ್ಥಾನ ಪಡೆದ ಅಭಿಮಾನಿಗಳ ಪ್ರೀತಿಯ ಅಪ್ಪು ಅಮರರಾಗಿಯೇ ಉಳಿಯಲಿದ್ದಾರೆ.

ಬಿ.ಎಸ್.ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ



ರಾಜ್‌ಕುಮಾರ್ ಕಾಲದಿಂದಲೂ ಅವರ ಕುಟುಂಬದ ಜೊತೆಯಲ್ಲಿ ಆತ್ಮೀಯ ಸಂಬಂಧ ಹೊಂದಿದ್ದ ನನ್ನ ಪಾಲಿಗೆ ಪುನೀತ್ ಸಾವು ಮನೆ ಸದಸ್ಯನೊಬ್ಬನನ್ನು ಕಳೆದುಕೊಂಡ ಶೋಕ. ನಟನಾ ಕೌಶಲದ ಜೊತೆಗೆ ಸರಳ–ಸಜ್ಜನಿಕೆಯ ನಡವಳಿಕೆಯಿಂದ ಕನ್ನಡಿಗರ ಮನೆ ಮಗನಂತಿದ್ದರು.

ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ



ಈ ಆಘಾತದಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ತಂದೆಯ ಹೆಸರನ್ನು ಉಳಿಸುವ ನಿಟ್ಟಿನಲ್ಲಿ ನಿರ್ಮಾಪಕರಿಗೆ ಶಕ್ತಿಯನ್ನು ತುಂಬಿದವರು ಪುನೀತ್. ಮಾನವೀಯತೆ ಹೊಂದಿದ್ದ, ಸರಳವಾಗಿದ್ದ ಪ್ರತಿಭಾನ್ವಿತ ನಟ.

ಎಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ



ನನ್ನ ನೆರೆಹೊರೆಯವರಾದ, ಸ್ವಂತ ಸಹೋದರನಂತಿದ್ದ ಪುನೀತ್ ಇನ್ನಿಲ್ಲ ಎಂಬ ಸುದ್ದಿಯನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ. ನಾವಿಬ್ಬರೂ ಒಟ್ಟಿಗೆ ವಾಕಿಂಗ್ ಮಾಡಿದ್ದೇವೆ. ಜಿಮ್ ಮಾಡಿದ್ದೇವೆ

ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ



ಪುನೀತ್ ರಾಜ್‌ಕುಮಾರ್ ಅವರ ಹಠಾತ್ ಅಗಲಿಕೆಯ ದುಃಖ ಭರಿಸುವ ಶಕ್ತಿ ಅವರ ಅಭಿಮಾನಿಗಳು, ಸ್ನೇಹಿತರು, ಕುಟುಂಬದ ಸದಸ್ಯರಿಗೆ ಸಿಗಲಿ.

ರಾಹುಲ್ ಗಾಂಧಿ, ಸಂಸದ

ಚಿತ್ರರಂಗದ ಪ್ರಮುಖರ ಪ್ರತಿಕ್ರಿಯೆ



ನಿಜವಾದ ಗೆಳೆಯ, ಹೃದಯವಂತಿಕೆಯ ಅದ್ಭುತ ವ್ಯಕ್ತಿ ನಮ್ಮನ್ನಗಲಿದ್ದಾರೆ. ನಿಮ್ಮನ್ನು ಸದಾ ನೆನಪಿಸಿಕೊಳ್ಳುತ್ತೇವೆ. ನೀವಿಲ್ಲ ಎನ್ನುವುದನ್ನು ಅರಗಿಸಿಕೊಳ್ಳಲು ಸಾಧ್ಯವಿಲ್ಲ.

-ದರ್ಶನ್, ನಟ



ನಾನು ಎತ್ತಿ ಆಡಿಸಿದ ಮಗು ಪುನೀತ್. ಇಷ್ಟು ದೊಡ್ಡ ನಟನಾಗಿ ಬೆಳೆದರೂ ಕೊನೆಯವರೆಗೂ ಕಿಂಚಿತ್ತೂ ಹಮ್ಮು ಬರಲೇ ಇಲ್ಲ. ದೇವರೇ ನೀನೆಷ್ಟು ಕ್ರೂರಿ.

-ಜಯಮಾಲಾ, ನಟಿ



ಕನ್ನಡ ಚಿತ್ರರಂಗಕ್ಕೆ ಈ ಕುಟುಂಬ ನೀಡಿದ ಕೊಡುಗೆ ಬಹಳ ದೊಡ್ಡದು. ರಾಜ್‌ಕುಮಾರ್ ಅವರು ನೀಡಿದ ಸಂಸ್ಕಾರವನ್ನು ಪುನೀತ್ ಎತ್ತಿಹಿಡಿದಿದ್ದರು. ಮಗುವಾಗಿ ಇರುತ್ತಿದ್ದ ಮಗು ಅದು. ಸಣ್ಣ ವಯಸ್ಸಿಗೆ ಇಂಥ ಶಿಕ್ಷೆಯನ್ನು ದೇವರು ಕೊಡಬಾರದಿತ್ತು.

-ಉಮಾಶ್ರೀ, ನಟಿ



ಆಘಾತವಾಗಿದೆ. ಪುನೀತ್ ನಿಧನ ಕನ್ನಡ ಸಿನಿಮಾ ಇಂಡಸ್ಟ್ರಿಗೆ ಮಾತ್ರವಲ್ಲದೆ ಇಡೀ ಭಾರತೀಯ ಸಿನಿಮಾ ರಂಗಕ್ಕೆ ಆದ ನಷ್ಟ.

-ಚಿರಂಜೀವಿ, ತೆಲುಗು ನಟ



ಪುನೀತ್ ರಾಜ್‌ಕುಮಾರ್ ಅವರ ನಿಧನದ ಸುದ್ದಿ ಸಿಡಿಲಿನಂತೆ ಬಡಿದಿದೆ. ಇದನ್ನು ನಂಬಲು ಅಸಾಧ್ಯ. ತಮ್ಮನನ್ನು ಕಳೆದುಕೊಂಡ ಭಾವ. ಈ ನಷ್ಟವನ್ನು ಭರಿಸುವ ಶಕ್ತಿಯನ್ನು ಭಗವಂತ ಕುಟುಂಬಕ್ಕೆ ನೀಡಲಿ.

-ಮೋಹನ್‌ಲಾಲ್, ಮಲಯಾಳಂ ನಟ



ಯುವ ಸಹೋದರ ನಮ್ಮನ್ನಗಲಿ ಇಷ್ಟು ಬೇಗ ಹೋಗಿಬಿಡುತ್ತಾನೆ ಎಂದು ಊಹಿಸಿರಲಿಲ್ಲ. ನಾವಿಬ್ಬರೂ ಒಬ್ಬರನ್ನೊಬ್ಬರು ಇಷ್ಟಪಡುತ್ತಿದ್ದೆವು.

-ಕಮಲಹಾಸನ್, ನಟ



ಆಘಾತವಾಗಿದೆ. ಇಷ್ಟು ಬೇಗ ನೀವು ನಮ್ಮನ್ನು ಅಗಲಿ ಹೋದಿರಿ ಎಂದು ನಂಬಲಾಗುತ್ತಿಲ್ಲ.

-ಜ್ಯೂ.ಎನ್‌ಟಿಆರ್, ತೆಲುಗು ನಟ



ಭಾವನೆಗಳು ಕೆಲವು ವೈಯಕ್ತಿಕ. ಅವುಗಳನ್ನು ಪದಗಳಲ್ಲಿ ಹೇಳಲಾಗದು. RIP ಎಂದು ಹೇಳಿ ಮುಗಿಸಲಾಗದು. ದೇಹ ಮನಸ್ಸಿಗೂ ಮೀರಿದ್ದು ಭಾವನೆ. ಕೆಲವು ಬಾಂಧವ್ಯ ವರ್ಣನೆಗೂ ಮೀರಿದ್ದು. ಬೇರೇನನ್ನು ಹೇಳಲಾಗದ ಸಂದರ್ಭ ಇದು. ಸಿನಿಮಾ ರಂಗದಲ್ಲಿ ಆತ ನನಗೆ ಅತ್ಯಂತ ಆಪ್ತ ಸ್ನೇಹಿತ. ಅಪ್ಪು ನೀವು ಎಂದೆಂದಿಗೂ ಮಾಸದ ನೆನಪು. ಸದಾ ನನ್ನ ನೆನಪಿನಲ್ಲಿ ಎಂದೆಂದೂ ಇರುವಿರಿ ಅಪ್ಪು.

-ರಮ್ಯಾ, ನಟಿ



ಕನ್ನಡ ಚಿತ್ರರಂಗವು ರತ್ನವೊಂದನ್ನು ಕಳೆದುಕೊಂಡಿದೆ. ನಾನು ಇಲ್ಲಿಯವರೆಗೂ ಭೇಟಿಯಾದವರ ಪೈಕಿ ಅತ್ಯಂತ ಸರಳ ಹಾಗೂ ವಿನಮ್ರ ವ್ಯಕ್ತಿ ಪುನೀತ್. ಆದರೆ ಇಷ್ಟು ಬೇಗ ನಮ್ಮನ್ನು ಅಗಲುತ್ತಾರೆ ಎಂದುಕೊಂಡಿರಲಿಲ್ಲ.

-ಅನಿಲ್ ಕುಂಬ್ಳೆ, ನಿವೃತ್ತ ಕ್ರಿಕೆಟಿಗ



ವಾರದ ಹಿಂದೆ ಮಲ್ಲೇಶ್ವರಕ್ಕೆ ಬಂದಿರುವೆ ಬಾ ಅಣ್ಣ ಎಂದು ಕರೆದು ಒಂದು ಗಂಟೆ ಸಮಯ ಕಳೆದ ಆತ್ಮೀಯ ತಮ್ಮ ಪುನೀತ್ ಇಂದಿಲ್ಲ ಎಂದರೆ ಎಂಥ ದುರ್ವಿಧಿ. ಕನ್ನಡ ಚಿತ್ರರಂಗದ ಅನರ್ಘ್ಯರತ್ನ ಹೇಳದೆ ಕೇಳದೆ ನಿರ್ಗಮಿಸಿ ಅಪ್ಪಅಮ್ಮನ ಮಡಿಲು ಸೇರಿತು.

-ಜಗ್ಗೇಶ್, ನಟ

ವಿಧಿಯ ಆಟ ಬಲ್ಲವರಾರು.. ಯಾರು ನಿರೀಕ್ಷಿಸದ ಘಟನೆಯೊಂದು ನಡೆದು ಹೋಗಿದೆ. ಕನ್ನಡ ಸಿನಿಲೋಕಕ್ಕೆ ಮಾತ್ರವಲ್ಲ, ಇಡೀ ಕರ್ನಾಟಕಕ್ಕೆ ಪುನೀತ್ ಅವರ ಸಾವಿನ ನೋವು ತಡೆದುಕೊಳ್ಳಲು ಆಗುತ್ತಿಲ್ಲ.

-ಜೈರಾಜ್, ಕರ್ನಾಟಕ ವಾಣಿಜ್ಯ ಮಂಡಳಿ ಅಧ್ಯಕ್ಷ



ಸ್ವರ್ಗ ಸುಂದರವಾದ ತಾಣ ಎನಿಸುತ್ತಿದೆ. ಏಕೆಂದರೆ ಅಲ್ಲಿ ನೀವಿದ್ದೀರಿ.

-ಧ್ರುವ ಸರ್ಜಾ, ನಟ





ಹೊಸತನದ ಹಂಬಲ ಹೊಸಬರಿಗೆ ಬೆಂಬಲ

● ಪದ್ಮನಾಭ ಭಟ್

‘ದಶಕಗಳ ಹಿಂದೆ ಕಥೆಯೊಂದು ಹುಟ್ಟಿತ್ತು.
ನಮ್ಮ ಜನ, ನಮ್ಮ ನೆಲದ ಹಿರಿಮೆಯನ್ನು ಮೆರೆದಿತ್ತು.
ನಮ್ಮ ಅಡವಿಯ ಹಸಿರನ್ನು ಜಗತ್ತಿಗೇ ಹರಡಿತ್ತು.
ಪೀಳಿಗೆಗೆ ಸ್ಫೂರ್ತಿ ನೀಡಿ ಅಜರಾಮರವಾಗಿತ್ತು.
ಆ ಚರಿತ್ರೆ ಮರುಕಳಿಸುವ ಸಮಯವೀಗ ಬಂದಿದೆ’

ಇದು ಪುನೀತ್ ರಾಜ್‌ಕುಮಾರ್ ಕೊನೆಯದಾಗಿ (ಅ.27) ತಮ್ಮ ಸೋಷಿಯಲ್ ಮೀಡಿಯಾ ಖಾತೆಗಳಲ್ಲಿ ಬರೆದುಕೊಂಡಿದ್ದ ಸಾಲುಗಳು. ತಮ್ಮ ಹೊಸ ಪ್ರಾಜೆಕ್ಟ್ ಒಂದರ ಕುರಿತಾಗಿ ಬರೆದುಕೊಂಡಿರುವ ಈ ಸಾಲುಗಳ ಅಕ್ಷರಕ್ಷರ ಅವರಿಗೇ ಅನ್ವಯಿಸುವಂತಿವೆ. ಆದರೆ, ಕೊನೆಯ ಸಾಲೊಂದು ಸಾವಿನ ರೂಪದ ಚೇಳಾಗಿ ಮನಸ್ಸು ಕುಟುಕುತ್ತದೆ. ಚರಿತ್ರೆ ಮರುಕಳಿಸುವ ಸಮಯದಲ್ಲಿ ಚರಿತ್ರೆಯ ಸೃಷ್ಟಿಕರ್ತನೇ ಬಿಟ್ಟುಹೋಗಿದ್ದಾನೆ; ಅವೆಷ್ಟೋ ಅನನ್ಯ ಕನಸುಗಳನ್ನು ಸೇರಿಸಿ ಹೆಣೆಯುತ್ತಿದ್ದ ಅಪೂರ್ವ ಕುಸುರಿಯೊಂದು ಅರ್ಧಕ್ಕೇ ನಿಂತಿದೆ.



ಪುನೀತ್ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪ್ರಕಟಿಸಿದ ಕೊನೆಯ ಪೋಸ್ಟರ್

ಹೊಸತನಕ್ಕಾಗಿ ಹಾತೊರೆಯುತ್ತಿದ್ದಷ್ಟೇ ಆಸ್ಥೆಯಿಂದ ಹೊಸ ಪ್ರತಿಭಾವಂತರಿಗಾಗಿಯೂ ಪುನೀತ್ ಸದಾಕಾಲ ತಮ್ಮ ಮನೆ–ಮನದ ಬಾಗಿಲುಗಳನ್ನು ತೆರೆದುಕೊಂಡಿರುತ್ತಿದ್ದರು.

‘ನಮ್ಮನ್ನು ಅವರ ಬಳಿ ಹೋಗಗೊಡದಂತೆ ಹಲವರು ತಡೆದಿದ್ದರು. ಆದರೆ ನಮ್ಮ ತಂಡದ ಕಿರುಚಿತ್ರವನ್ನು ನೋಡಿ ಇಷ್ಟಪಟ್ಟು ಅವರಾಗಿಯೇ ನಮ್ಮನ್ನು ಸಂಪರ್ಕಿಸಿದ್ದರು’ ಎನ್ನುವುದು ಚಿತ್ರರಂಗದಲ್ಲಿ ಈಗಷ್ಟೇ ನೆಲೆ ಕಂಡುಕೊಳ್ಳುತ್ತಿರುವ ಯುವ ನಿರ್ದೇಶಕರೊಬ್ಬರ ಮಾತು. ಎಲ್ಲ ಸೂಪರ್‌ಸ್ಟಾರ್‌ಗಳಿಗೂ ಇರುವಂತೆ ಪುನೀತ್ ಸುತ್ತಲೂ ಒಂದು ಅಗೋಚರ ಗೋಡೆಯಿತ್ತು. ಆದರೆ ಆ ಗೋಡೆಯನ್ನು ದಾಟಿ ಅವರ ದೃಷ್ಟಿ ನಾಲ್ಕೂ ನಿಟ್ಟಿನಲ್ಲಿ ಹಾಯುತ್ತಿತ್ತು ಮತ್ತು ಪ್ರತಿಭಾವಂತರನ್ನು ಥಟ್ಟನೆ ಗುರ್ತಿಸುತ್ತಿತ್ತು. ಹೊಸ ಆಲೋಚನೆಗಳು, ಹೊಸ ವಿಚಾರಗಳು, ಹೊಸ ದೃಷ್ಟಿಕೋನ ಯಾರಲ್ಲಿಯೇ ಕಂಡುಬಂದರೂ ಪುನೀತ್ ತಾವಾಗಿಯೇ ಅವರನ್ನು ಸಂಪರ್ಕಿಸುತ್ತಿದ್ದರು.

ಅವರು 2017ರಲ್ಲಿ ‘ಪಿಆರ್‌ಕೆ ಪ್ರೊಡಕ್ಷನ್ಸ್’ ಆರಂಭಿಸಿದ್ದೇ ಹೊಸ ಪ್ರತಿಭೆಗಳನ್ನು ಪ್ರೋತ್ಸಾಹಿಸಬೇಕು, ಜನರಿಗೆ ಇಷ್ಟವಾಗುವಂಥ ಪ್ರಯೋಗಶೀಲ ಸಿನಿಮಾಗಳನ್ನು ಮಾಡಬೇಕು ಎಂಬ ಉದ್ದೇಶದಿಂದ. ಆ ನಿರ್ಮಾಣ ಸಂಸ್ಥೆಯಲ್ಲಿ ತಯಾರಾದ ಮೊದಲ ಸಿನಿಮಾ ಹೇಮಂತ್ ರಾವ್ ನಿರ್ದೇಶನದ ‘ಕವಲುದಾರಿ’. ನಂತರ ಬಂದಿರುವ ‘ಮಾಯಾಬಜಾರ್’, ‘ಲಾ’, ‘ಫ್ರೆಂಚ್ ಬಿರಿಯಾನಿ’ – ಈ ಮೂರೂ ಸಿನಿಮಾಗಳೂ ಹೊಸಬರ ಪ್ರಯತ್ನಗಳೇ. ಡಿ. ಸತ್ಯಪ್ರಕಾಶ್ ಅವರ ನಿರ್ದೇಶನದ ‘ಮ್ಯಾನ್ ಆಫ್ ದಿ ಮ್ಯಾಚ್’, ಅರ್ಜುನ್ ಕುಮಾರ್ ಎಸ್. ಅವರ ‘ಫ್ಯಾಮಿಲಿ ಪ್ಯಾಕ್’, ರಾಘವ ನಾಯಕ್, ಪ್ರಶಾಂತ್ ರಾಜ್ ನಿರ್ದೇಶನದ ‘02’ ಇವಿಷ್ಟು ಅವರ ನಿರ್ಮಾಣ ಸಂಸ್ಥೆಯಲ್ಲಿ ನಿರ್ಮಾಣವಾಗುತ್ತಿದ್ದ ಸಿನಿಮಾಗಳು. ಡ್ಯಾನೀಶ್ ಶೇಠ್ ಜೊತೆಗೆ ಇನ್ನೊಂದು ಸಿನಿಮಾವನ್ನೂ ಘೋಷಿಸಿದ್ದರು. ಇನ್ನು ಚರ್ಚೆಯ ಹಂತದಲ್ಲಿದ್ದ ಸಿನಿಮಾಗಳ ಪಟ್ಟಿ ದೊಡ್ಡದೇ ಇದೆ. ಇವೆಲ್ಲವೂ ಬರೀ ಕಮರ್ಷಿಯಲ್ ಉದ್ದೇಶಗಳ ಆಚೆಗೂ ಸಿನಿಮಾ ಪ್ರೀತಿ ಇರುವ ಹೊಸ ತಲೆಮಾರಿನ ನಿರ್ದೇಶಕರ ಸಿನಿಮಾಗಳು ಎಂಬುದನ್ನು ಗಮನಿಸಿದರೆ ಪುನೀತ್ ಅವರ ಗಮನ ಎತ್ತ ಕಡೆಗಿತ್ತು ಎಂಬುದು ಇನ್ನಷ್ಟು ಸ್ಪಷ್ಟವಾಗುತ್ತದೆ. ಜೇಕಬ್ ವರ್ಗೀಸ್ ಅವರ ನಿರ್ದೇಶನದಲ್ಲಿ, ತಾವೇ ನಾಯಕರಾಗಿ ನಟಿಸಲಿರುವ ಸಿನಿಮಾವನ್ನೂ ಅವರು ಪಿಆರ್‌ಕೆ ನಿರ್ಮಾಣ ಸಂಸ್ಥೆಯಿಂದಲೇ ನಿರ್ಮಿಸಲು ಮುಂದಾಗಿದ್ದರು.

‘ಡಿಫರೆಂಟ್ ಆಗಿ ಏನಾದ್ರೂ ಮಾಡ್ಬೇಕು’ ಎಂಬುದು ಅವರು ಎಲ್ಲರ ಬಳಿಯೂ ಪದೇ ಪದೇ ಹೇಳಿಕೊಳ್ಳುತ್ತಲೇ ಇರುವ ಮಾತಾಗಿತ್ತು. ಅದು ಅವರೊಳಗಿನ ಹೊಸತನದ ತಹತಹದ ಅಭಿವ್ಯಕ್ತಿಯಾಗಿತ್ತು. ಬರೀ ನಿರ್ದೇಶಕರಷ್ಟೇ ಅಲ್ಲ, ಯಾವುದೋ ಸಿನಿಮಾದ ಸಂಭಾಷಣೆ ಇಷ್ಟವಾದರೆ, ಇನ್ಯಾವುದೋ ಹೊಸ ನಟರ ಅಭಿನಯ ಇಷ್ಟವಾದರೆ, ಹಾಡೊಂದು ಅವರ ಮನಸ್ಸನ್ನು ಕಾಡಿದರೆ, ವಿಶಿಷ್ಟ ಕಿರುಚಿತ್ರ ಕಣ್ಣಿಗೆ ಬಿದ್ದರೆ ಅದರ ಹಿಂದಿರುವವರನ್ನು ಕರೆದು ಮಾತಾಡಿಸುತ್ತಿದ್ದರು. ‘ಸ್ಕ್ರಿಪ್ಟ್ ಮಾಡಿಕೊಂಡು ಬನ್ನಿ’ ಎಂದು ಹೇಳುತ್ತಿದ್ದರು. ಹೀಗಾಗಿ ಕನ್ನಡ ಚಿತ್ರರಂಗದಲ್ಲಿ ಪ್ರಯೋಗಶೀಲ ಯುವ ಪೀಳಿಗೆಯ ದೊಡ್ಡ ಬಳಗವೇ ಪುನೀತ್ ಸುತ್ತಲೂ ಸೇರಲಾರಂಭಿಸಿತ್ತು.

‘ಕನ್ನಡದ ಹಲವು ಯುವ, ಪ್ರತಿಭಾವಂತ ಸಿನಿಕರ್ಮಿಗಳ ಜೊತೆಗೆ ಪುನೀತ್ ನಿರಂತರವಾಗಿ ಸಂಪರ್ಕದಲ್ಲಿದ್ದರು; ಚರ್ಚೆ ನಡೆಸುತ್ತಿದ್ದರು. ಅವರ ನಿರ್ಮಾಣ ಸಂಸ್ಥೆಯಿಂದ ಇನ್ನು ಎರಡು ಮೂರು ವರ್ಷಗಳಲ್ಲಿ ಬರಲಿದ್ದ, ಬರಬಹುದಾಗಿದ್ದ ಸಿನಿಮಾಗಳನ್ನು ಗಮನಿಸಿದರೆ ಅವರು ಎಂಥ ದೊಡ್ಡ ಪರಿವರ್ತನೆಯ ಕೆಲಸವನ್ನು ಆರಂಭಿಸಿದ್ದರು ಎಂಬುದರ ಅಂದಾಜು ಸಿಗುತ್ತದೆ. ನಿಜಕ್ಕೂ ಕನ್ನಡ ಚಿತ್ರರಂಗಕ್ಕೆ ಇದು ಬಹುದೊಡ್ಡ ಹಿನ್ನಡೆ’ ಎನ್ನುತ್ತಾರೆ ಪುನೀತ್ ಅವರೊಡನೆ ಹತ್ತಿರದ ಒಡನಾಟ ಇದ್ದ ಯುವ ನಿರ್ದೇಶಕರೊಬ್ಬರು.


ಮತ್ತೆ ಆರಂಭದಲ್ಲಿ ಉಲ್ಲೇಖಿಸಿದ ಸಾಲುಗಳಿಗೇ ಬರುವುದಾದರೆ, ಇದು ಪುನೀತ್ ಅವರ ವ್ಯಕ್ತಿತ್ವದ ಇನ್ನೊಂದು ಮಗ್ಗುಲನ್ನು ಸೂಚಿಸುವ ಡಾಕ್ಯುಫಿಲಂ ಒಂದರ ಕುರಿತಾಗಿ ಬರೆದ ಸಾಲುಗಳಾಗಿದ್ದವು. ರಾಷ್ಟ್ರಪ್ರಶಸ್ತಿ ಪುರಸ್ಕೃತ ‘ವೈಲ್ಡ್ ಕರ್ನಾಟಕ’ ಖ್ಯಾತಿಯ ಅಮೋಘವರ್ಷ ಜೆ.ಎಸ್. ಅವರ ಜೊತೆಗೆ ಸೇರಿ, ಕರ್ನಾಟಕದ ವನ್ಯಸಂಪತ್ತನ್ನು ಪರಿಚಯಿಸುವ ವಿಶಿಷ್ಟ ಡಾಕ್ಯುಫಿಲಂ ಒಂದನ್ನು ಮಾಡುತ್ತಿದ್ದರು. ಸ್ವತಃ ಅವರೇ ಅದರ ಭಾಗವಾಗಿದ್ದರು. ‘ನಮ್ಮ ನೆಲದ, ಕಾಡಿನ ಸಂಪತ್ತನ್ನು ಜನರಿಗೆ ಪರಿಚಯಿಸಿಕೊಡುವ ಈ ಕೆಲಸ ತುಂಬ ಖುಷಿಕೊಡುತ್ತಿದೆ’ ಎಂದು ಆಪ್ತರ ಬಳಿ ಹೇಳಿಕೊಂಡಿದ್ದರು.

ನಾಗರಹೊಳೆ, ಕಾಳಿನದಿ, ಹೊಸಪೇಟೆ ಸೇರಿದಂತೆ ಕರ್ನಾಟಕದ ಹಲವು ಜಾಗಗಳಲ್ಲಿ ಸುತ್ತಿ ಚಿತ್ರೀಕರಣ ಮಾಡಿದ್ದರು. ಸುಮಾರು ಶೇ 90ರಷ್ಟು ಭಾಗ ಚಿತ್ರೀಕರಣ ಮುಗಿದಿತ್ತು. ನವೆಂಬರ್ 1ರ ಕನ್ನಡ ರಾಜ್ಯೋತ್ಸವದಂದು ಇದರ ಟೀಸರ್ ಬಿಡುಗಡೆ ಮಾಡಲು ಎಲ್ಲ ರೀತಿಯ ಸಿದ್ಧತೆಯನ್ನು ಮಾಡಿಕೊಂಡಿದ್ದರು. ಈ ಡಾಕ್ಯುಫಿಲಂಗೆ ಅವರು ಇಡಬೇಕು ಎಂದುಕೊಂಡಿದ್ದ ಹೆಸರು:

‘ಗಂಧದ ಗುಡಿ’

ಈಗ ಆ ಗುಡಿಯಲ್ಲಿ ಮೂರ್ತಿಯಿಲ್ಲ. ಅವರು ಹಚ್ಚಿಹೋದ ದೀಪ ಉರಿಯುತ್ತಿದೆ.

ಇದೋ ಪುನೀತ್ ಪವರ್...



ರಾಜ್ ಅಭಿನಯದ ಚಿತ್ರಗಳಲ್ಲಿ ಬಾಲ ನಟನಾಗಿ

- ವಸಂತ ಗೀತ (1980)
- ಭಾಗ್ಯವಂತ (1981)
- ಚಲಿಸುವ ಮೋಡಗಳು (1982)
- ಎರಡು ನಕ್ಷತ್ರಗಳು (1983)
- ಬೆಟ್ಟದ ಹೂವು (1985)

ನಾಯಕನಾಗಿ ಅಭಿನಯಿಸಿದ ಚಿತ್ರಗಳು

ಕ್ರಮ ಸಂಖ್ಯೆ	ವರ್ಷ	ಚಿತ್ರ	ಕ್ರಮ ಸಂಖ್ಯೆ	ವರ್ಷ	ಚಿತ್ರ
1	2002	ಅಪ್ಪು	15	2010	ಜಾಕಿ
2	2003	ಅಭಿ	16	2011	ಹುಡುಗರು
3	2004	ವೀರ ಕನ್ನಡಿಗ	17	2011	ಪರಮಾತ್ಮ
4	2004	ಮೌರ್ಯ	18	2012	ಅಣ್ಣ ಬಾಂಡ್
5	2005	ಆಕಾಶ್	19	2012	ಯಾರೇ ಕೂಗಾಡಲಿ
6	2005	ನಮ್ಮ ಬಸವ	20	2014	ನಿನ್ನಿಂದಲೇ
7	2006	ಅಜಯ್	21	2015	ಮೈತ್ರಿ
8	2007	ಅರಸು	22	2015	ಪವರ್ ಸ್ಟಾರ್
9	2007	ಮಿಲನ	23	2015	ಧೀರ ರಣ ವಿಕ್ರಮ
10	2008	ಬಿಂದಾಸ್	24	2016	ಚಕ್ರವ್ಯೂಹ
11	2008	ವಂಶಿ	25	2016	ದೊಡ್ಮನೆ ಹುಡುಗ
12	2009	ರಾಜ್ ದಿ ಶೋಮ್ಯಾನ್	26	2017	ರಾಜಕುಮಾರ
13	2009	ಪೃಥ್ವಿ	27	2017	ಅಂಜನಿ ಪುತ್ರ
14	2010	ರಾಮ್	28	2019	ನಟಸಾರ್ವಭೌಮ
			29	2021	ಯುವರತ್ನ

ಪ್ರಶಸ್ತಿಗಳು

ಅತ್ಯುತ್ತಮ ಬಾಲನಟ ರಾಷ್ಟ್ರ ಪ್ರಶಸ್ತಿ	
ಚಲಿಸುವ ಮೋಡಗಳು (1982)	ಬೆಟ್ಟದ ಹೂವು (1985)
ಅತ್ಯುತ್ತಮ ಬಾಲನಟ ರಾಜ್ಯ ಪ್ರಶಸ್ತಿ	
ಚಲಿಸುವ ಮೋಡಗಳು (1982)	ಎರಡು ನಕ್ಷತ್ರಗಳು (1983)

ದಕ್ಷಿಣ ಭಾರತ ಸಿನಿಮಾ ಪ್ರಶಸ್ತಿಗಳು (ಅತ್ಯುತ್ತಮ ನಟ)
ಹುಡುಗರು (2011), **ಯಾರೇ ಕೂಗಾಡಲಿ** (2012), **ರಣವಿಕ್ರಮ** (2013), **ರಾಜಕುಮಾರ** (2018)
ಪ್ರಶಸ್ತಿಗೆ ನಾಮನಿರ್ದೇಶನ: **ಅಣ್ಣಾ ಬಾಂಡ್** (2012), **ದೊಡ್ಮನೆ ಹುಡುಗ** (2017), **ನಟಸಾರ್ವಭೌಮ** (2019)


- ಫಿಲಂಫೇರ್ ಪ್ರಶಸ್ತಿಗಳು

ಬೆಟ್ಟದ ಹೂವು, ಅರಸು, ಹುಡುಗರು, ರಣ ವಿಕ್ರಮ, ರಾಜಕುಮಾರ

- ಸೌತ್ ಸ್ಕೋಪ್ ಉತ್ತಮ ನಟ ಪ್ರಶಸ್ತಿ

ವಂಶಿ, ರಾಜ್ ದಿ ಶೋಮ್ಯಾನ್

ಬ್ರಾಂಡ್ ಅಂಬಾಸಡರ್ ಆಗಿ



- ನಂದಿನಿ (ಕರ್ನಾಟಕ ಹಾಲು ಒಕ್ಕೂಟ), ಚಾಮರಾಜನಗರ ಜಿಲ್ಲೆಯ ಬ್ರಾಂಡ್ ಅಂಬಾಸಡರ್, ಬಿಎಂಟಿಸಿ ಬಸ್ ಆದ್ಯತಾ ಪಥ
- ಕೌಶಲ್ಯ ಕರ್ನಾಟಕ – ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಎಸ್ಕಾಂಗಳ ಡೊಮೆಸ್ಟಿಕ್ ಎಫಿಷಿಯಂಟ್ ಲೈಟಿಂಗ್ ಪ್ರೋಗ್ರಾಂ (ಡೆಲ್ಪ್)– (ಗೃಹಬಳಕೆಗೆ ಸಬ್ಸಿಡಿ ದರದಲ್ಲಿ ಎಲ್‌ಇಡಿ ಬಲ್ಬ್‌ಗಳನ್ನು ವಿತರಿಸುವ ಯೋಜನೆ.)
- ಸರ್ಕಾರದ ಯೋಜನೆಗಳ ಪ್ರಚಾರ ರಾಯಭಾರತ್ವಕ್ಕೆ ಪುನೀತ್ ಯಾವುದೇ ಸಂಭಾವನೆ ಪಡೆದಿಲ್ಲ.
- ಕೌಶಲ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಅಡಿ ಐಟಿಐ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಸೆಳೆಯುವ ನಿಟ್ಟಿನಲ್ಲಿ ಪುನೀತ್ ಆ ಕಾಲೇಜುಗಳಿಗೆ ರಾಯಭಾರಿಯಾಗಿ ಪ್ರಚಾರದಲ್ಲಿ ಕೈ ಜೋಡಿಸಿದ್ದರು. ಡ್ರಿಲ್ ಯಂತ್ರ ಹಿಡಿದು ನಿಂತ ಅವರ ಚಿತ್ರ, ವಿಡಿಯೊಗಳು ವಿದ್ಯಾರ್ಥಿಗಳನ್ನು ಆಕರ್ಷಿಸಿದ್ದವು.
- ಪುನೀತ್ ಅವರನ್ನು ರಾಜಕೀಯಕ್ಕೆ ಸೆಳೆಯಲು ಸಾಕಷ್ಟು ಪ್ರಯತ್ನಗಳು ನಡೆದವು. ಆದರೆ, ಅವರು ರಾಜಕಾರಣದಿಂದ ದೂರವೇ ಉಳಿದರು. ಮಂಡ್ಯದಲ್ಲಿ ಹಾಲಿ ಸಂಸದೆ ಸುಮಲತಾ ಅವರ ಪರ ಪ್ರಚಾರ ನಡೆಸಲು ಕರೆದಾಗಲೂ ಅವರು ಕೋರಿಕೆಯನ್ನು ನಯವಾಗಿಯೇ ನಿರಾಕರಿಸಿದ್ದರು. ಬದಲಾಗಿ ಮತದಾನ ಮಾಡುವಂತೆ ಜನಜಾಗೃತಿ ಮೂಡಿಸುವಲ್ಲಿ ಚುನಾವಣಾ ಆಯೋಗದೊಂದಿಗೆ ಕೈಜೋಡಿಸಿದ್ದರು. ರಾಜಕಾರಣದಿಂದ ದೂರವಿದ್ದರೂ ಎಲ್ಲ ರಾಜಕೀಯ ನಾಯಕರೊಂದಿಗೆ ಸೌಹಾರ್ದ ಸ್ನೇಹ ಸಂಬಂಧ ಹೊಂದಿದ್ದರು.



ಟಿವಿ ಕಾರ್ಯಕ್ರಮ ನಿರೂಪಣೆ: **ಕನ್ನಡದ ಕೋಟ್ಯಧಿಪತಿ**



ನಟ ಪುನೀತ್ ರಾಜ್ ಕುಮಾರ್ ಅಸ್ವಸ್ಥರಾದ ವಿಷಯ ತಿಳಿದು ವಿಕ್ರಂ ಆಸ್ಪತ್ರೆಗೆ ಧಾವಿಸಿದ ನಟ ಶ್ರೀಮುರಳಿ. ಪ್ರಜಾವಾಣಿ ಚಿತ್ರ : ಅನೂಪ್ ರಾಘ.ಟಿ.



ನಟ ಪುನೀತ್ ರಾಜ್‌ಕುಮಾರ್ ನಿಧನದ ಸುದ್ದಿ ಕೇಳಿ ವಿಕ್ರಮ್ ಆಸ್ಪತ್ರೆ ಎದುರು ಅಭಿಮಾನಿಗಳು ಕಣ್ಣೀರಿಟ್ಟು ಗೋಳಾಡಿದರು



ಪುನೀತ್ ಅವರ ಸದಾಶಿವನಗರದ ಮನೆ ಬಳಿ ದುಃಖತಪ್ತ ನಟಿ ಲೀಲಾವತಿ ಅವರಿಗೆ ಮಾಜಿ ಪ್ರಧಾನಿ ಎಚ್‌ಡಿ.ದೇವೇಗೌಡ ಸಾಂತ್ವನ ಹೇಳಿದರು

ಮಿತಾಹಾರ... ಶ್ರದ್ಧೆ ಪೂರಾ!

● ವಿಶಾಖ ಎನ್.

ತೂಕ ಮಾಡಿಟ್ಟಂತೆ ಅನ್ನ-ಸಾಂಬಾರಿನಲ್ಲಿ ತುಸು ಹೆಚ್ಚೇ ತರಕಾರಿಗಳು. ಎರಡು ಸಣ್ಣ ಹೋಳು ಪಪ್ಪಾಯ ಹಣ್ಣು. ಎರಡು ಚಮಚ ಗಸೆಗಸೆ ಪಾಯಸ...

ಪುನೀತ್ ರಾಜ್‌ಕುಮಾರ್ ತಟ್ಟೆಯಲ್ಲಿ ಇದ್ದದ್ದು ಇಷ್ಟು. 'ಅರಸು' ಸಿನಿಮಾ ಚಿತ್ರೀಕರಣ ನಡೆಯುತ್ತಿದ್ದ ಸಂದರ್ಭ ಅದು. ಹಾಸ್ಯನಟರಾಗಿ ಆ ಚಿತ್ರದಲ್ಲಿ ಅಭಿನಯಿಸಿದ್ದ ಕೋಮಲ್ ಕೂಡ ತಾರಾ ಡಯೆಟ್ಟನ್ನು ನೋಡಿ ಆಗ ಕಣ್ಣರಳಿಸಿದ್ದರು.

ಆಗಿನಿಂದಲೇ ಪುನೀತ್ ಡಯೆಟ್ ಕಟ್ಟುನಿಟ್ಟು. ವ್ಯಾಯಾಮ ಅವರಿಗೆ ದೈನಂದಿನ ಕಾಯಂ ಚಟುವಟಿಕೆ. ಸಾಮಾನ್ಯವಾಗಿ ಬಹುತೇಕ ನಟರು ಭುಜದಿಂದ ಸೊಂಟದವರೆಗೆ ದೇಹಾಕಾರ ರೂಪಿಸಿಕೊಳ್ಳುತ್ತಾರೆ. ಪುನೀತ್ ಮೀನಖಂಡಗಳು ಬಹಳ ಗಟ್ಟಿಮುಟ್ಟಾಗಿದ್ದವು. ಅವರು ಕೋವಿಡ್ ಲಾಕ್‌ಡೌನ್‌ನಲ್ಲಿ ಮಾಡಿದಂಥ ವರ್ಕ್‌ಔಟ್‌ನಲ್ಲೂ ಇದು ಸ್ಪಷ್ಟವಾಗಿತ್ತು.

ಸಿನಿಮಾದ ಸಾಹಸ ದೃಶ್ಯಗಳಿಗೆ ಹಾಗೂ ನೃತ್ಯ ಲಾಲಿತ್ಯಕ್ಕೆ ಕಾಲುಗಳು ಗಟ್ಟಿಯಾಗಿರುವುದು ತುಂಬಾ ಮುಖ್ಯ ಎನ್ನುವುದು ಪುನೀತ್ ಅನುಭವದ ನುಡಿಯಾಗಿತ್ತು.

ತಮ್ಮ ಮಕ್ಕಳು ಹೀಗೆ ಅಳೆದೂ ತೂಗಿದಂತೆ ಊಟ ಮಾಡುವುದನ್ನು ಕಂಡಿದ್ದ ಪಾರ್ವತಮ್ಮ ರಾಜ್‌ಕುಮಾರ್, ಒಮ್ಮೆ ಬೇಸರಿಸಿದ್ದರು. ಬೆಂಗಳೂರಿನ ಗಾಂಧಿನಗರದಲ್ಲಿ ರಾಜ್‌ಕುಮಾರ್ ಇಂಟರ್‌ನ್ಯಾಷನಲ್ ಹೋಟೆಲ್ ಉದ್ಘಾಟನೆಯಾದಾಗ ಅವರು ಮಕ್ಕಳ ಡಯೆಟ್ ಪ್ರೀತಿಯನ್ನು ತಾಯಿ ವಾತ್ಸಲ್ಯದಿಂದಲೇ ಖಂಡಿಸಿದ್ದರು.

ರಾಜ್‌ಕುಮಾರ್ ಹೊಟ್ಟೆತುಂಬಾ ಊಟ ಮಾಡುತ್ತಿದ್ದರೂ ದೇಹಾಕಾರ ಕಾಪಾಡಿಕೊಂಡಿದ್ದನ್ನು ಉಲ್ಲೇಖಿಸಿಯೇ ಅವರು ಮಕ್ಕಳನ್ನು ತರಾಟೆಗೆ ತೆಗೆದುಕೊಂಡಾಗ, ಪುನೀತ್ ಮಂದಹಾಸ ಬೀರಿದ್ದರಷ್ಟೆ.

ಫಿಟ್‌ನೆಸ್ ವಿಷಯದಲ್ಲಿ ತಂದೆಯೇ ತಮ್ಮ ಗುರು ಎಂದು ಪುನೀತ್ ಪದೇ ಪದೇ ಹೇಳುತ್ತಿದ್ದರು. ಕೋವಿಡ್ ಲಾಕ್‌ಡೌನ್‌ನಲ್ಲಿ ಸೈಕ್ಲಿಂಗ್ ಮಾಡಿ ಚೈತನ್ಯದ ಪಾಠ ಹೇಳಿದ್ದ ಅವರೇ ಹೀಗೆ ದಿಢೀರನೆ ಅಗಲಿರುವುದು ಎಂಥವರಿಗೂ ಪರಮಾಶ್ಚರ್ಯ.

ಬಾಲ್ಯದಲ್ಲಿ ಆಟಿಕೆ, ಚಾಕೊಲೇಟ್‌ನಂಥ ಸಣ್ಣ ಆಮಿಷಗಳಿಂದಾಗಿ ಅಭಿನಯಿಸಲು ಒಪ್ಪಿದ್ದ ಪುನೀತ್, ನಾಯಕನಾದ ಮೇಲೆ ಪ್ರಜ್ಞಾಪೂರ್ವಕವಾಗಿ ವೃತ್ತಿಶಿಸ್ತನ್ನು ಅಳವಡಿಸಿಕೊಂಡಿದ್ದರು.

'ನಮ್ಮ ತಂದೆಯ ಸೊಂಟದ ಸುತ್ತಳತೆ ಕೊನೆಯವರೆಗೂ ಮೂವತ್ತೆರಡೇ ಇಂಚು ಇತ್ತು' ಎಂದು ಪುನೀತ್ ಹೇಳಿದ್ದ ಮಾತು ಈಗಲೂ ಕಿವಿಯಲ್ಲಿದೆ.

ವಿಕ್ರಮ್ ಆಸ್ಪತ್ರೆ ಎದುರು ಅಭಿಮಾನಿಗಳ ಆಕ್ರಂದನ ● ಹರಿದುಬಂದ ಜನಸ್ತೋಮ

ಪಪ್ಪಿ ಕೊಡುವೆವು ಎದ್ದು ಬನ್ನಿ ‘ಅಪ್ಪು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾವು ಬದುಕಿನ ನಡುವೆ ಹೋರಾಡುತ್ತಿದ್ದ ನೆಚ್ಚಿನ ನಟನನ್ನು ನೋಡಲು ಸೇರಿದ್ದ ಜನಸ್ತೋಮ. ಏನಾಯಿತೆಂಬ ಆತಂಕದಲ್ಲಿ ಓಡೋಡಿ ಬಂದ ಚಿತ್ರರಂಗದ ನಟ–ನಟಿಯರು. ‘ನಟ ಇನ್ನಿಲ್ಲ’ ಎಂಬ ಸುದ್ದಿ ತಿಳಿಯುತ್ತಿದ್ದಂತೆ ಅಭಿಮಾನಿಗಳ ಆಕ್ರಂದನ ಮುಗಿಲು ಮುಟ್ಟಿತ್ತು. ‘ಅಪ್ಪು’ ಪಪ್ಪಿ ಕೊಡುವೆವು ಎದ್ದು ಬನ್ನಿ...’ ಎನ್ನುತ್ತ ಕಣ್ಣೀರಿಟ್ಟರು. ಆಸ್ಪತ್ರೆಗೆ ಕಾವಲಾಗಿದ್ದ ಪೊಲೀಸರು, ಜನರನ್ನು ನಿಯಂತ್ರಿಸಲು ಹರಸಾಹಸಪಟ್ಟರು.

ವಿಕ್ರಮ್ ಆಸ್ಪತ್ರೆ ಎದುರು ಕಂಡುಬಂದ ದೃಶ್ಯಗಳಿವು. ಹೃದಯಾಘಾತಕ್ಕೀಡಾಗಿದ್ದ ನಟ ಪುನೀತ್ ರಾಜ್‌ಕುಮಾರ್ ಅವರನ್ನು ಶುಕ್ರವಾರ ಬೆಳಿಗ್ಗೆ ವಿಕ್ರಮ್ ಆಸ್ಪತ್ರೆಗೆ ಕರೆತರಲಾಗಿತ್ತು. ಸುದ್ದಿ ತಿಳಿದ ಅಭಿಮಾನಿಗಳು, ನಟ–ನಟಿಯರು, ರಾಜಕಾರಣಿಗಳು, ಗಣ್ಯರು ಆಸ್ಪತ್ರೆಗೆ ಬಂದಿದ್ದರು. ಆಸ್ಪತ್ರೆ ಎದುರು ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿದ್ದರು.

ಆಸ್ಪತ್ರೆ ಪ್ರವೇಶ ಹಾಗೂ ನಿರ್ಗಮನ ದ್ವಾರಗಳ ಬಳಿ ಬ್ಯಾರಿಕೇಡ್‌ಗಳನ್ನು ಇರಿಸಿದ್ದ ಪೊಲೀಸರು ಹಗ್ಗವನ್ನು ಕಟ್ಟಿ ಜನರನ್ನು ತಡೆದಿದ್ದರು.

ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಪುನೀತ್ ರಾಜ್‌ಕುಮಾರ್ ಅವರಿಗೆ ಚಿಕಿತ್ಸೆ ಮುಂದುವರಿಸಲಾಗಿತ್ತು. ಆಸ್ಪತ್ರೆಯ ಹೊರಗಡೆ ಅಭಿಮಾನಿಗಳ ಆಕ್ರಂದನ ಹೆಚ್ಚಾಗಿತ್ತು. ‘ಅಪ್ಪು... ಅಪ್ಪು... ಅಪ್ಪು...’ ಎಂದು ಕೂಗಿದ ಅಭಿಮಾನಿಗಳು, ಪುನೀತ್ ರಾಜ್‌ಕುಮಾರ್ ಅವರನ್ನು ನೋಡಬೇಕೆಂದು ಪಟ್ಟು ಹಿಡಿದರು. ಆಸ್ಪತ್ರೆಯೊಳಗೆ ನುಗ್ಗಲು ಯತ್ನಿಸಿದರು.

ಆಸ್ಪತ್ರೆ ಮುಂಭಾಗದಲ್ಲಿ ಅಭಿಮಾನಿಗಳನ್ನು ತಡೆದ ಪೊಲೀಸರು, ‘ಸದ್ಯದಲ್ಲೇ ಆರೋಗ್ಯ ಸ್ಥಿತಿ ಬಗ್ಗೆ ತಿಳಿಸಲಾಗುವುದು’ ಎಂದು ಭರವಸೆ ನೀಡಿದರು. ಅದಾದ ನಂತರವೂ ಅಭಿಮಾನಿಗಳ ಘೋಷಣೆ ನಿಲ್ಲಲಿಲ್ಲ. ನಟ ತೀರಿಕೊಂಡ ಸುದ್ದಿ ತಿಳಿಯುತ್ತಿದ್ದಂತೆ, ಅಭಿಮಾನಿಗಳ ಆಕ್ರಂದನ ಮುಗಿಲುಮುಟ್ಟಿತು. ಮಹಿಳೆಯರು, ಮಕ್ಕಳು, ವೃದ್ಧರು ಸಹ ಪುನೀತ್ ರಾಜ್‌ಕುಮಾರ್ ಅವರನ್ನು ನೆನೆದು ಕಣ್ಣೀರಿಟ್ಟರು.

ನಟ ಶಿವರಾಜ್‌ಕುಮಾರ್, ಅವರ ಪತ್ನಿ ಗೀತಾ ಹಾಗೂ ಕುಟುಂಬದ ಇತರೆ ಸದಸ್ಯರು ಆಸ್ಪತ್ರೆಗೆ ಓಡೋಡಿ ಬಂದರು. ಐಸಿಯು ಬಳಿಯೇ ನಿಂತುಕೊಂಡು, ಪುನೀತ್ ರಾಜ್‌ಕುಮಾರ್ ಅವರ ಆರೋಗ್ಯ ಸ್ಥಿತಿ ಬಗ್ಗೆ ನಿಗಾ ವಹಿಸಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಬಿ.ಸಿ. ಪಾಟೀಲ, ಶಾಸಕ ಬಿ.ಎಸ್.ಯಡಿಯೂರಪ್ಪ, ನಟರಾದ ವಿ. ರವಿಚಂದ್ರನ್, ದರ್ಶನ್, ಯಶ್, ಗಣೇಶ್, ಮುರುಳಿ, ಶ್ರೀನಗರ ಕಿಟ್ಟಿ, ವಿಜಯ್ ರಾಘವೇಂದ್ರ, ನಟಿಯರಾದ ತಾರಾ, ಶ್ರುತಿ, ಸುಧಾರಾಣಿ, ರಂಜಿತಾ ರಾಮ್, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ನಿರ್ದೇಶಕ ಯೋಗರಾಜ್ ಭಟ್, ನಿಖಿಲ್ ಕುಮಾರಸ್ವಾಮಿ ಹಾಗೂ ಇತರರು ಧಾವಂತದಲ್ಲಿ ಆಸ್ಪತ್ರೆಯತ್ತ ಧಾವಿಸಿದರು.

ಭದ್ರತೆಯಲ್ಲಿ ಪಾರ್ಥಿವ ಶರೀರ ರವಾನೆ; ಆಸ್ಪತ್ರೆ ಎದುರು ನೆರೆದಿದ್ದ ಅಭಿಮಾನಿಗಳನ್ನು ಚದುರಿಸಿ ಪಾರ್ಥಿವ ಶರೀರವನ್ನು ಕೊಂಡೊಯ್ಯುವುದು ಪೊಲೀಸರಿಗೆ ಸವಾಲಾಗಿತ್ತು. ಹೀಗಾಗಿ, ನಾಲ್ಕು ಆಂಬುಲೆನ್ಸ್‌ಗಳನ್ನು ಏಕಕಾಲದಲ್ಲಿ ಆಸ್ಪತ್ರೆಗೆ ಕರೆಸಿ ಅಭಿಮಾನಿಗಳನ್ನು ಅತ್ತಿತ್ತ ಓಡಾಡುವಂತೆ ಮಾಡಲಾಯಿತು.

ರಸ್ತೆಯುದ್ದಕ್ಕೂ ಅಕ್ಕ-ಪಕ್ಕದಲ್ಲಿ ಪೊಲೀಸ್ ವಾಹನಗಳನ್ನು ನಿಲ್ಲಿಸಿ, ಅದರ ಮಧ್ಯದಲ್ಲಿ ಪಾರ್ಥಿವ ಶರೀರದ ಆಂಬುಲೆನ್ಸ್ ಹೋಗಲು ದಾರಿ ಮಾಡಲಾಗಿತ್ತು. ಪುನೀತ್ ರಾಜ್‌ಕುಮಾರ್ ಪಾರ್ಥಿವ ಶರೀರವನ್ನು ಹೊತ್ತ ಆಂಬುಲೆನ್ಸ್, ಆಸ್ಪತ್ರೆಯಿಂದ ಸದಾಶಿವನಗರದಲ್ಲಿರುವ ಮನೆಯತ್ತ ಹೊರಟಿತು. ರಸ್ತೆಯುದ್ದಕ್ಕೂ ಪೊಲೀಸರ ಭದ್ರತೆ ಬಿಗಿಯಾಗಿತ್ತು.



ಕಂಠೀರವ ಕ್ರೀಡಾಂಗಣದಲ್ಲಿ ನಟ ಪುನೀತ್ ರಾಜಕುಮಾರ್ ಅವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಲು ಬಂದ ಸಾವಿರಾರು ಅಭಿಮಾನಿಗಳು ಪ್ರಜಾವಾಣಿ ಚಿತ್ರ/ ಎಂ.ಎಸ್ ಮಂಜುನಾಥ್

ಸದಾಶಿವನಗರಕ್ಕೆ ಅಭಿಮಾನಿಗಳ ದಂಡು

ಸದಾಶಿವನಗರದ ಪುನೀತ್ ಅವರ ಮನೆಯ ಸುತ್ತ ಅಭಿಮಾನಿಗಳ ದಂಡು ಹರಿದು ಬಂದಿತ್ತು. ದುಃಖತಪ್ತ ಅಭಿಮಾನಿಗಳು ತಮ್ಮ ನೆಚ್ಚಿನ ನಟನ ಅಂತಿಮ ದರ್ಶನ ಪಡೆಯಲು ಕಾತರದಿಂದ ಕಾಯುತ್ತಿದ್ದರು.

ಆಂಬುಲೆನ್ಸ್‌ನಲ್ಲಿ ಪಾರ್ಥಿವ ಶರೀರ ಮನೆಗೆ ಬಂದ ನಂತರ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಲಾಯಿತು. ಅಂತಿಮ ದರ್ಶನ ಪಡೆಯಲು ಚಿತ್ರರಂಗದ ಗಣ್ಯರು, ರಾಜಕೀಯ ಮುಖಂಡರು ಧಾವಿಸಿದರು.

ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸಂಸದೆ ಸುಮಲತಾ, ನಟಿ ಲೀಲಾವತಿ ಸೇರಿದಂತೆ ಹಲವರು ಆಗಮಿಸಿದರು. ಸಾವಿರಾರು ಅಭಿಮಾನಿಗಳು ಸದಾಶಿವನಗರ ಸುತ್ತಮುತ್ತ ಪ್ರದೇಶದಲ್ಲಿ ಸೇರಿದ್ದರಿಂದ ಸಂಸದೆ ಸುಮಲತಾ ಅವರು ವಾಪಸ್ ತೆರಳಲು ಹರಸಾಹಸ ಮಾಡಬೇಕಾಯಿತು. ಕೊನೆಗೆ ಪೊಲೀಸ್ ಜೀಪ್‌ನಲ್ಲಿ ಸುಮಲತಾ ಅವರನ್ನು ಭದ್ರತೆಯೊಂದಿಗೆ ಕಳುಹಿಸಲಾಯಿತು.

ಕಾಲುವೆಗೆ ಜಿಗಿದು ಪ್ರಾಣ ಬಿಟ್ಟ ಪುನೀತ್ ಅಭಿಮಾನಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ನಟ ಪುನೀತ್ ರಾಜಕುಮಾರ್ ನಿಧನದಿಂದ ತೀವ್ರ ಮನನೊಂದಿದ್ದ ತಾಲ್ಲೂಕಿನ ಕಮಲಾಪುರದ ನಿವಾಸಿ ಶುಕ್ರವಾರ ರಾತ್ರಿ ತುಂಗಭದ್ರಾ ಜಲಾಶಯದ ಕೆಳಮಟ್ಟದ ಕಾಲುವೆಗೆ (ಎಲ್‌ಎಲ್‌ಸಿ) ಜಿಗಿದು ಪ್ರಾಣ ಬಿಟ್ಟಿದ್ದಾರೆ.

ಮೃತರನ್ನು ಕಮಲಾಪುರದ 14ನೇ ವಾರ್ಡಿನ ಕಮ್ಮಾರ ದಿನ್ನಿ ಬಡಾವಣೆ ನಿವಾಸಿ ಕಾಳಪ್ಪ (60) ಎಂದು ಗುರುತಿಸಲಾಗಿದೆ.

‘ಕಾಳಪ್ಪ ಪುನೀತ್ ಅವರ ಕಟ್ಟಾ ಅಭಿಮಾನಿ. ಮಧ್ಯಾಹ್ನ ಟಿ.ವಿ.ಯಲ್ಲಿ ಪುನೀತ್ ಅವರ ನಿಧನದ ಸುದ್ದಿ ನೋಡಿ ತೀವ್ರ ಆಘಾತಕ್ಕೆ ಒಳಗಾಗಿದ್ದಾರೆ. ನೀರು, ಆಹಾರ ಸೇವಿಸದೆ ಸಂಜೆವರೆಗೂ ಟಿ.ವಿ. ನೋಡುತ್ತ ಕುಳಿತಿದ್ದರು. ಸಂಜೆ ತೀವ್ರ ದುಃಖಿತರಾಗಿ ಕಾಲುವೆಗೆ ಜಿಗಿದಿದ್ದರು. ಸ್ಥಳೀಯರು ರಕ್ಷಿಸಿದ್ದರು. ಪುನಃ ರಾತ್ರಿ ಮನೆಯಿಂದ ಹೋಗಿ ಕಾಲುವೆಗೆ ಜಿಗಿದಿದ್ದಾರೆ. ತುಂಬಿ ಹರಿಯುತ್ತಿದ್ದ ಕಾಲುವೆಯಲ್ಲಿ ಕೊಚ್ಚಿ ಕೊಂಡು ಹೋಗಿದ್ದಾರೆ’ ಎಂದು ಅವರ ಸ್ನೇಹಿತ ಕನ್ನೇಶ್ವರ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.



ಕಾಳಪ್ಪ

‘ಪುನೀತ್ ಅವರ ಅಭಿಮಾನಿ ಕಾಳಪ್ಪ ಕಾಲುವೆಗೆ ಜಿಗಿದಿರುವ ವಿಷಯ ಗೊತ್ತಾಗಿದೆ. ಇನ್ನಷ್ಟೇ ಅವರ ದೇಹ ಸಿಗಬೇಕಿದೆ’ ಎಂದು ಡಿವೈಎಸ್ಪಿ ಕಾಶಿಗೌಡ ತಿಳಿಸಿದ್ದಾರೆ. ಇನ್ನಷ್ಟೇ ಠಾಣೆಯಲ್ಲಿ ಪ್ರಕರಣ ದಾಖಲಾಗಬೇಕಿದೆ.

ಅಭಿಮಾನಿಗೆ ಹೃದಯಾಘಾತ

ಮಹದೇಶ್ವರ ಬೆಟ್ಟ ವರದಿ: ಪುನೀತ್ ರಾಜ್‌ಕುಮಾರ್ ಅಭಿಮಾನಿ, ಹನೂರು ತಾಲ್ಲೂಕಿನ ಪೊನ್ನಾಚಿ ಬಳಿಯ ಮರೂರು ಗ್ರಾಮದ ನಿವಾಸಿ ಮುನಿಯಪ್ಪ (30) ಶುಕ್ರವಾರ ಮೃತಪಟ್ಟರು. ಪುನೀತ್ ಅವರ ಕಟ್ಟಾ ಅಭಿಯಾನಿಯಾಗಿದ್ದ ಅವರು, ಪುನೀತ್ ಸಾವಿನ ಸುದ್ದಿ ತಿಳಿದು ಹೃದಯಾಘಾತಕ್ಕೆ ಒಳಗಾಗಿದ್ದರು ಎಂದು ಗ್ರಾಮಸ್ಥರು ಹೇಳಿದ್ದಾರೆ.

ಸಾವಿನಲ್ಲೂ ಸಾರ್ಥಕತೆ ಮೆರೆದ ಪುನೀತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಅವರು ತಮ್ಮ ಕಣ್ಣುಗಳನ್ನು ದಾನ ನೀಡುವ ಮೂಲಕ ಸಾವಿನಲ್ಲೂ ಸಾರ್ಥಕತೆ ಕಂಡಿದ್ದಾರೆ.

ತಂದೆ ರಾಜ್‌ಕುಮಾರ್ ಹಾಗೂ ತಾಯಿ ಪಾರ್ವತಮ್ಮ ಅವರು ಕೂಡ ತಮ್ಮ ನೇತ್ರಗಳನ್ನು ದಾನ ಮಾಡಿದ್ದರು. ಅದರಂತೆ ನಾರಾಯಣ ನೇತ್ರಾಲಯಕ್ಕೆ ಪುನೀತ್ ಅವರ ಕಣ್ಣುಗಳನ್ನೂ ದಾನ ಮಾಡಲಾಗಿದೆ.

‘1994ರಲ್ಲಿ ನಮ್ಮ ಆಸ್ಪತ್ರೆಯ ನೇತ್ರದ ಬ್ಯಾಂಕ್ ಉದ್ಘಾಟಿಸಿದ ರಾಜ್‌ಕುಮಾರ್ ಅವರು, ಕುಟುಂಬದ ಎಲ್ಲ ಸದಸ್ಯರು ನೇತ್ರದಾನ ಮಾಡುವುದಾಗಿ ಪ್ರತಿಜ್ಞೆ ಕೈಗೊಂಡಿದ್ದರು. ಅದರಂತೆ ಅವರ ಹಾಗೂ ಪಾರ್ವತಮ್ಮ ಅವರ ಕಣ್ಣುಗಳನ್ನು ದಾನವಾಗಿ ಪಡೆಯಲಾಗಿತ್ತು. ಪುನೀತ್ ಅವರ ಸಾವಿನ ಆಘಾತದ ನಡುವೆಯೂ ಕುಟುಂಬದವರು ನೇತ್ರದಾನ ಮರೆಯಲಿಲ್ಲ. ತಂದೆಯ ವಚನಗಳನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದ ಪುನೀತ್, ಯುವಜನರಿಗೆ ಮಾದರಿಯಾಗಿದ್ದಾರೆ’ ಎಂದು ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ. ಭುಜಂಗ ಶೆಟ್ಟಿ ತಿಳಿಸಿದರು.

‘ಅವರ ಕಣ್ಣುಗಳಿಂದ ಇಬ್ಬರಿಗೆ ದೃಷ್ಟಿ ದೊರೆಯಲಿದೆ. ನೇತ್ರಕ್ಕಾಗಿ ಹೆಸರು ನೋಂದಾಯಿಸಿದವರಿಗೆ ಎರಡು ದಿನಗಳಲ್ಲಿ ಶಸ್ತ್ರಚಿಕಿತ್ಸೆ ನಡೆಸಿ, ಕಣ್ಣನ್ನು ಅಳವಡಿಸಲಾಗುತ್ತದೆ’ ಎಂದರು.

ಕೆಲ ತಿಂಗಳ ಹಿಂದೆ ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದ ನಟ ಸಂಚಾರಿ ವಿಜಯ್ ಅವರು ಕೂಡ ಕಣ್ಣು ಸೇರಿದಂತೆ ವಿವಿಧ ಅಂಗಾಂಗಗಳನ್ನು ದಾನ ನೀಡಿದ್ದರು.

ಗಾಜನೂರಿನ ಮೊಮ್ಮಗ; ಗಡಿ ಜಿಲ್ಲೆಯ ನಂಟು

ಚಾಮರಾಜನಗರ: ‘ಅಪ್ಪು’ ಎಂದೇ ಎಲ್ಲರಿಂದಲೂ ಪ್ರೀತಿಯಿಂದ ಕರೆಯಿಸಿಕೊಳ್ಳುತ್ತಿದ್ದ ‘ಪವರ್ ಸ್ಟಾರ್’ ಪುನೀತ್ ರಾಜ್‌ಕುಮಾರ್ ಅವರಿಗೆ ಗಡಿ ಜಿಲ್ಲೆ ಚಾಮರಾಜನಗರದೊಂದಿಗೆ ಅವಿನಾಭಾವದ ನಂಟಿದೆ. ಅವರು ಜಿಲ್ಲೆಗೆ ಹೊಂದಿಕೊಂಡಿರುವ ತಮಿಳುನಾಡಿನ ತಾಳವಾಡಿಯ ಗಾಜನೂರಿನ ‘ಮೊಮ್ಮಗ’ನಾಗಿರುವುದು ಅದಕ್ಕೆ ಕಾರಣ.

ತಮ್ಮ ತಂದೆ, ವರನಟ ಡಾ. ರಾಜ್‌ಕುಮಾರ್ ಅವರ ಹುಟ್ಟೂರು ಗಾಜನೂರಿನ ಬಗ್ಗೆ ಪುನೀತ್ ರಾಜ್‌ಕುಮಾರ್ ಅವರಿಗೆ ವಿಶೇಷ ಮಮತೆ ಇತ್ತು. ‘ತಂದೆ ಚಾಮರಾಜನಗರದವರು’ ಎಂದು ಹೆಮ್ಮೆಯಿಂದ ಹೇಳುತ್ತಿದ್ದ ಪುನೀತ್ ಅವರಿಗೆ ಗಡಿ ಜಿಲ್ಲೆಯ ಬಗ್ಗೆಯೂ ವಿಶೇಷ ಅಕ್ಕರೆ ಇತ್ತು. ಬಿಡುವಾದಾಗಲೆಲ್ಲ ಕುಟುಂಬ ಸಮೇತರಾಗಿ ಬರುತ್ತಿದ್ದರು. ಸೋದರತ್ತೆ (ಡಾ.ರಾಜ್ ಅವರ ತಂಗಿ ನಾಗಮ್ಮ) ಹಾಗೂ ಅವರ ಕುಟುಂಬದ ಸದಸ್ಯರೊಂದಿಗೆ ಆತ್ಮೀಯವಾಗಿ ಬೆರೆಯುತ್ತಿದ್ದರು.

ಡಾ.ರಾಜ್ ಜನಿಸಿದ್ದ ದೊಡ್ಡ ಗಾಜನೂರಿನ ಹಳೆಯ ಮನೆಗೆ ಭೇಟಿ ನೀಡುತ್ತಿದ್ದರು. ತಂದೆ ಓಡಾಡಿದ್ದ ಸ್ಥಳಗಳು, ತೋಟಗಳಲ್ಲಿ ಸುತ್ತಾಡುತ್ತಿದ್ದರು. ತಂದೆ ಹೆಚ್ಚು ಹಚ್ಚಿಕೊಂಡಿದ್ದ ದೊಡ್ಡ ಆಲದ ಮರದಡಿ ಕುಳಿತು ಸಮಯವನ್ನೂ ಕಳೆಯುತ್ತಿದ್ದರು.

ಕಳೆದ ಜುಲೈ 30ರಂದು ಪುನೀತ್, ಪತ್ನಿ-ಮಕ್ಕಳೊಂದಿಗೆ ಗಾಜನೂರಿಗೆ ಬಂದಿದ್ದರು. ಆಗ ಅಣ್ಣ ಶಿವರಾಜ್‌ಕುಮಾರ್ ಹಾಗೂ ಅವರ ಕುಟುಂಬದ ಸದಸ್ಯರೂ ಜೊತೆಗಿದ್ದರು.

ಜಿಲ್ಲೆಯ ರಾಯಭಾರಿ: ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಜಿಲ್ಲಾಡಳಿತವು ಪುನೀತ್ ರಾಜ್‌ಕುಮಾರ್ ಅವರನ್ನು ಜಿಲ್ಲೆಯ ರಾಯಭಾರಿಯನ್ನಾಗಿ ನೇಮಿಸಿತ್ತು. ಸಂತಸದಿಂದಲೇ ಜವಾಬ್ದಾರಿ ಹೊತ್ತುಕೊಂಡಿದ್ದ ಅವರು, ಚಾಮರಾಜನಗರ ಜಿಲ್ಲೆಯನ್ನು ತಂದೆಯ ತವರೂರು ಎಂದು ಕರೆದಿದ್ದರು. ‘ನನ್ನನ್ನು ಜಿಲ್ಲೆಯ ರಾಯಭಾರಿಯಾಗಿ ಮಾಡಿರುವುದಕ್ಕೆ ಹೆಮ್ಮೆ ಇದೆ’ ಎಂದೂ ಹೇಳಿದ್ದರು.

ಪುನೀತ್ ಅವರನ್ನು ಜಿಲ್ಲೆಗೆ ಕರೆಸಿ ಒಂದು ಕಾರ್ಯಕ್ರಮ ಮಾಡಬೇಕು ಎಂಬ ಆಸೆಯನ್ನು ಜಿಲ್ಲಾಡಳಿತ ಹೊಂದಿತ್ತು. ಆದರೆ, ಕೋವಿಡ್ ಅದಕ್ಕೆ ಅವಕಾಶ ನೀಡಿರಲಿಲ್ಲ.

ಪಿಎಫ್: ಶೇ 8.5ರಷ್ಟು ಬಡ್ಡಿ ನೀಡಲು ಕೇಂದ್ರ ಒಪ್ಪಿಗೆ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಠೇವಣಿಗಳಿಗೆ 2020–21ನೇ ಸಾಲಿಗೆ ಶೇಕಡ 8.5ರಷ್ಟು ಬಡ್ಡಿ ನೀಡಲು ಕೇಂದ್ರ ಸರ್ಕಾರವು ಶುಕ್ರವಾರ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಐದು ಕೋಟಿಗೂ ಹೆಚ್ಚಿನ ಚಂದಾದಾರರಿಗೆ ಇದರಿಂದಾಗಿ ದೀಪಾವಳಿ ಹೊತ್ತಿನಲ್ಲಿ ಸಂತಸದ ಸುದ್ದಿ ಸಿಕ್ಕಂತಾಗಿದೆ.

ಪಿ.ಎಫ್. ಠೇವಣಿಗೆ ಶೇ 8.5ರಷ್ಟು ಬಡ್ಡಿ ಕೊಡಬೇಕು ಎಂಬ ತೀರ್ಮಾನವನ್ನು ಇಪಿಎಫ್‌ಒ ಧರ್ಮದರ್ಶಿಗಳ ಮಂಡಳಿಯು ಮಾರ್ಚ್ ತಿಂಗಳಿನಲ್ಲಿ ಕೈಗೊಂಡಿತ್ತು. 'ಈ ತೀರ್ಮಾನಕ್ಕೆ ಕೇಂದ್ರ ಹಣಕಾಸು ಸಚಿವಾಲಯವು ಒಪ್ಪಿಗೆ ನೀಡಿದೆ. ಬಡ್ಡಿಯ ಮೊತ್ತವು ಚಂದಾದಾರರ ಖಾತೆಗಳಿಗೆ ಜಮಾ ಆಗಲಿದೆ' ಎಂದು ಮೂಲಗಳು ಹೇಳಿವೆ.

ಇಪಿಎಫ್‌ಒ 2016–17ರಲ್ಲಿ ಶೇ 8.65ರಷ್ಟು, 2017–18ರಲ್ಲಿ ಶೇ 8.55ರಷ್ಟು ಬಡ್ಡಿ ನೀಡಿತ್ತು. 2015–16ರಲ್ಲಿ ಶೇ 8.8ರಷ್ಟು ಬಡ್ಡಿ ನೀಡಿತ್ತು.

ಐಟಿಸಿ ಲಾಭ ಶೇ 10ರಷ್ಟು ಏರಿಕೆ

ನವದೆಹಲಿ (ಪಿಟಿಐ): ಸೆಪ್ಟೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಐಟಿಸಿ ಕಂಪನಿಯ ನಿವ್ವಳ ಲಾಭವು ಶೇಕಡ 10.09 ರಷ್ಟು ಹೆಚ್ಚಳ ಆಗಿದೆ. ಕಂಪನಿಯು ₹ 3,763 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು ₹ 3,418 ಕೋಟಿ ನಿವ್ವಳ ಲಾಭ ದಾಖಲಿಸಿತ್ತು. ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣೆ ಲಾಭವು ₹ 14,662 ಕೋಟಿಗೆ ತಲುಪಿ, ಶೇಕಡ 12.14ರಷ್ಟು ಹೆಚ್ಚಳ ದಾಖಲಿಸಿದೆ.

'ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಉತ್ಪನ್ನಗಳ ಮಾರಾಟದಲ್ಲಿ ಚೇತರಿಕೆ ಕಂಡುಬಂದಿದೆ.' ಎಂದು ಐಟಿಸಿ ಪ್ರಕಟಣೆ ತಿಳಿಸಿದೆ.

ಹಡಗಿನಲ್ಲಿ ಡ್ರಗ್ಸ್ ಪ್ರಕರಣ: ಜಾಮೀನು ದೊರೆತರೂ ಸಕಾಲದಲ್ಲಿ ಜೈಲು ತಲುಪದ ಆದೇಶ

ಆರ್ಯನ್ ಇಂದು ಬಿಡುಗಡೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಮುಂಬೈ: ಬಾಲಿವುಡ್ ಸೂಪರ್ ಸ್ಟಾರ್ ಶಾರುಕ್ ಖಾನ್ ಮಗ, ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಪ್ರಕರಣದ ಆರೋಪಿ ಆರ್ಯನ್ ಖಾನ್ ಅವರಿಗೆ ಬಾಂಬೆ ಹೈಕೋರ್ಟ್ ಜಾಮೀನು ನೀಡಿದ್ದರೂ ಅವರ ಬಿಡುಗಡೆ ಶುಕ್ರವಾರ ಸಾಧ್ಯವಾಗಿಲ್ಲ. ಶನಿವಾರ ಬಿಡುಗಡೆ ಆಗಬಹುದು ಎನ್ನಲಾಗಿದೆ.

ಜಾಮೀನು ಪ್ರಕ್ರಿಯೆಗಳನ್ನು ಪೂರ್ತಿಗೊಳಿಸಲು ಸಮಯ ಹಿಡಿಯಿತು. ನಿಗದಿತ ಸಮಯ ಸಂಜೆ 5.30ರ ಒಳಗೆ ಬಿಡುಗಡೆ ಆದೇಶವನ್ನು ಜೈಲಿಗೆ ತಲುಪಿಸಲು ಸಾಧ್ಯವಾಗಲಿಲ್ಲ. ಹಾಗಾಗಿ, ಆರ್ಯನ್ ಖಾನ್ ಅವರು ಶುಕ್ರವಾರ ರಾತ್ರಿಯೂ ಆರ್ಥರ್ ರೋಡ್ ಜೈಲಿನಲ್ಲಿ ಕಳೆಯುವುದು ಅನಿವಾರ್ಯವಾಗಿದೆ.

ಶಾರುಕ್ ಖಾನ್ ಮತ್ತು ಆರ್ಯನ್ ತಾಯಿ ಗೌರಿ ಅವರು ಮಗನನ್ನು ಮನೆಗೆ ಕರೆದೊಯ್ಯುವುದಕ್ಕಾಗಿ ಆರ್ಥರ್ ರೋಡ್ ಜೈಲಿನ ಸಮೀಪಕ್ಕೆ ಹೋಗಿದ್ದರು. ಆದರೆ, ಬಿಡುಗಡೆ ಸಾಧ್ಯವಿಲ್ಲ ಎಂದು ತಿಳಿದ ಬಳಿಕ ಹಿಂದಿರುಗಿದರು.

ಶಾರುಕ್ ಕುಟುಂಬದ ಸ್ನೇಹಿತೆ ಮತ್ತು ನಟ ಜೂಹಿ ಚಾವ್ಲಾ ಅವರು ಆರ್ಯನ್ ಜಾಮೀನಿಗೆ ಭದ್ರತೆ ಒದಗಿಸಿದ್ದಾರೆ. 'ಆರ್ಯನ್‌ಗೆ ಜಾಮೀನು ದೊರೆತಿರುವುದು ಖುಷಿ ಕೊಟ್ಟಿದೆ. ಆತ ಆದಷ್ಟು ಬೇಗನೆ ಮನೆಗೆ ಮರಳಲಿ' ಎಂದು ಜೂಹಿ ಹೇಳಿದ್ದಾರೆ.

ನ್ಯಾಯಮೂರ್ತಿ ನಿತಿನ್ ಸಾಂಬ್ರೆ ಅವರು ಜಾಮೀನು ಆದೇಶವನ್ನು ಅಂತಿಮಗೊಳಿಸಿದ ಬಳಿಕ, ಆರ್ಯನ್ ವಕೀಲ ಸತೀಶ್ ಮಾನಶಿಂದೆ ಅವರು ಅದನ್ನು ಕೋರ್ಟ್‌ನಿಂದ ಪಡೆದುಕೊಂಡರು.

ನಂತರ, ಜಾಮೀನು ಆದೇಶವನ್ನು ವಿಶೇಷ ಎನ್‌ಡಿಪಿಎಸ್ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು.

'ಎಲ್ಲ ಪ್ರಕ್ರಿಯೆಗಳೂ ಪೂರ್ಣಗೊಂಡವು. ಆರ್ಯನ್‌ನನ್ನು ಬಾಲ್ಯದಿಂದಲೇ ಗೊತ್ತಿರುವ ಜೂಹಿ ಅವರ ಜಾಮೀನು ಭದ್ರತೆಯನ್ನು ಕೋರ್ಟ್ ಒಪ್ಪಿಕೊಂಡಿತು' ಎಂದು ಮನಶಿಂದೆ ಹೇಳಿದ್ದಾರೆ.

ಸೆಷನ್ಸ್ ನ್ಯಾಯಾಲಯದಿಂದ ಬಿಡುಗಡೆ ಆದೇಶ ಸಿಕ್ಕರೂ ಸಂಚಾರ ದಟ್ಟಣೆಯಿಂದಾಗಿ ಆದೇಶವನ್ನು ನಿಗದಿತ ಸಮಯಕ್ಕೆ ಮುಂಚಿತವಾಗಿ ಜೈಲಿಗೆ ತಲುಪಿಸಲು ಸಾಧ್ಯವಾಗಲಿಲ್ಲ.

₹1 ಲಕ್ಷದ ವೈಯಕ್ತಿಕ ಭದ್ರತೆ, ಪಾಸ್‌ಪೋರ್ಟ್ ನ್ಯಾಯಾಲಯಕ್ಕೆ ಸಲ್ಲಿಕೆ, ಮಾದಕ ಪದಾರ್ಥ ನಿಯಂತ್ರಣ ಬ್ಯೂರೊದ ಕಚೇರಿಗೆ ಪ್ರತಿ ಶುಕ್ರವಾರ ಹಾಜರಾಗಬೇಕು ಮುಂತಾದ ಷರತ್ತುಗಳನ್ನು ಹಾಕಲಾಗಿದೆ.

'ವಾಂಖೆಡೆ, ಬಿಜೆಪಿ ನಂಟು ಬಯಲಿಗೆಳೆಯುವೆ'

ಮುಂಬೈ (ಪಿಟಿಐ): ಡಿಸೆಂಬರ್‌ನಲ್ಲಿ ಮಹಾರಾಷ್ಟ್ರ ವಿಧಾನಸಭೆಯ ಚಳಿಗಾಲದ ಅಧಿವೇಶನ ನಡೆಯಲಿದೆ. ಆ ವೇಳೆ, ಸಮೀರ್ ವಾಂಖೆಡೆ ಮತ್ತು ಬಿಜೆಪಿ ನಾಯಕರ ನಡುವಿನ ಸಂಬಂಧವನ್ನು ಬಯಲಿಗೆಳೆಯುತ್ತೇನೆ ಎಂದು ನವಾಬ್ ಮಲಿಕ್ ಹೇಳಿದ್ದಾರೆ.

ಶಾರುಖ್ ಖಾನ್ ಅವರ ಮಗ ಆರ್ಯನ್ ಖಾನ್ ಅವರಿಗೆ ಬಾಂಬೆ ಹೈಕೋರ್ಟ್ ಗುರುವಾರ ಜಾಮೀನು ನೀಡಿದ ಹಿನ್ನೆಲೆಯಲ್ಲಿ ಟ್ವೀಟ್ ಮಾಡಿದ್ದ ಅವರು, 'ಇಲ್ಲಿಗೇ ಸಿನಿಮಾ ಮುಗಿದಿಲ್ಲ. ತಾವು ಪರಿಶಿಷ್ಟ ಜಾತಿಗೆ ಸೇರಿದವರು ಎಂದು ಸುಳ್ಳು ದಾಖಲೆಗಳನ್ನು ನೀಡಿ ಉದ್ಯೋಗ ಪಡೆದ ಕಾರಣ ವಾಂಖೆಡೆ ತಮ್ಮ ಹುದ್ದೆ ಕಳೆದುಕೊಂಡು, ಕಾನೂನು ಕ್ರಮ ಎದುರಿಸುವ ಮೂಲಕ ಮುಕ್ತಾಯವಾಗುತ್ತದೆ' ಎಂದು ಹೇಳಿದ್ದಾರೆ.



ಆರ್ಥರ್ ರೋಡ್ ಜೈಲು ಮುಂದೆ ಬಿಗಿ ಭದ್ರತೆ ಏರ್ಪಡಿಸಲಾಗಿದೆ ಪಿಟಿಐ ಚಿತ್ರ

'ಫ್ಯಾಷನ್ ಟಿ.ವಿ. ಮುಖ್ಯಸ್ಥನನ್ನು ಬಂಧಿಸಿ'

ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಸೇವನೆಗೆ ಸಂಬಂಧಿಸಿದಂತೆ ಮಾದಕದ್ರವ್ಯ ನಿಯಂತ್ರಣ ಸಂಸ್ಥೆ (ಎನ್‌ಸಿಬಿ) ದಾಳಿ ನಡೆಸಿದ ವೇಳೆ ಅಲ್ಲಿ ಹಾಜರಿದ್ದ ಗಡ್ಡಧಾರಿ ವ್ಯಕ್ತಿಯನ್ನು ಫ್ಯಾಷನ್ ಟೀವಿ ಇಂಡಿಯಾದ ಮುಖ್ಯಸ್ಥ ಕಾಶಿಫ್ ಖಾನ್ ಎಂದು ಮಹಾರಾಷ್ಟ್ರ ಸಚಿವ ನವಾಬ್ ಮಲಿಕ್ ಗುರುತಿಸಿದ್ದಾರೆ. ಅವರೇ ಆ ಪಾರ್ಟಿಯ ಮುಖ್ಯ ಆಯೋಜಕರು. ಅವರನ್ನು ಕೂಡಲೇ ಬಂಧಿಸಿ ಎಂದು ಮಲಿಕ್ ಆಗ್ರಹಿಸಿದ್ದಾರೆ.

'ಹಡಗಿನಲ್ಲಿ ಹುಡುಗಿಯೊಬ್ಬಳ ಜೊತೆ ನೃತ್ಯ ಮಾಡುತ್ತಿದ್ದ ವ್ಯಕ್ತಿ ಕಾಶಿಫ್ ಖಾನ್, ಆತ ಡ್ರಗ್ಸ್ ದಂಧೆ, ವಯಸ್ಕರ ಚಿತ್ರಗಳ ದಂಧೆಗಳನ್ನು ನಡೆಸುತ್ತಾನೆ. ಆತ ಎನ್‌ಸಿಬಿಯ ವಲಯ ನಿರ್ದೇಶಕ ಸಮೀರ್ ವಾಂಖೆಡೆ ಅವರ ಆಪ್ತ ಸ್ನೇಹಿತ' ಎಂದು ಆರೋಪ ಮಾಡಿದ್ದಾರೆ.

'ಐಷಾರಾಮಿ ಹಡಗಿನ ಮೇಲೆ ದಾಳಿ ನಡೆಸಲು ಸುಮಾರು ಒಂದು ತಿಂಗಳಿಂದ ಎನ್‌ಸಿಬಿ ಯೋಜನೆ ರೂಪಿಸುತ್ತಿತ್ತು ಎಂದು ನಮಗೆ ತಿಳಿದಿದೆ. ಈ ಪಾರ್ಟಿಯನ್ನು ಯಾರು ಆಯೋಜಿಸಿದ್ದರು ಎಂದು ಈ ಒಂದು ತಿಂಗಳ ಯೋಜನೆ ಮತ್ತು ತನಿಖೆಯಲ್ಲಿ ಎನ್‌ಸಿಬಿಗೆ ಗೊತ್ತಾಗಲಿಲ್ಲವೇ' ಎಂದು ಅವರು ಪ್ರಶ್ನಿಸಿದ್ದಾರೆ.

ಈ ಆರೋಪಗಳ ಕುರಿತು ಪ್ರತಿಕ್ರಿಯೆ ನೀಡಿದ ಸಮೀರ್ ವಾಂಖೆಡೆ, 'ಇದು ಸುಳ್ಳು, ಕಾನೂನು ಎಲ್ಲವನ್ನೂ ನೋಡಿಕೊಳ್ಳುತ್ತದೆ' ಎಂದಿದ್ದಾರೆ.

ಆರೋಪ ಅಲ್ಲಗಳೆದ ಕಾಶಿಫ್: ಈ ಆರೋಪಗಳನ್ನು ಕಾಶಿಫ್ ಖಾನ್ ತಳ್ಳಿಹಾಕಿದ್ದಾರೆ. 'ಎನ್‌ಸಿಬಿ ವಲಯ ನಿರ್ದೇಶಕ ಸಮೀರ್ ವಾಂಖೆಡೆ ಪರಿಚಯ ನನಗೆ ಇಲ್ಲ. ಅವರನ್ನು ನಾನು ಭೇಟಿಯೂ ಆಗಿಲ್ಲ. ಅವತ್ತು ದಾಳಿ ನಡೆದಾಗ ನನಗೆ ಅದರ ಬಗ್ಗೆ ಸುಳಿವಿರಲಿಲ್ಲ. ಬೇರೆ ಎಲ್ಲರಂತೆ ನನ್ನನ್ನೂ ಪರಿಶೀಲನೆಗೆ ಒಳಪಡಿಸಲಾಯಿತು. ನವಾಬ್ ಮಲಿಕ್ ಅವರು ಗೊಂದಲಕ್ಕೆ ಒಳಗಾಗಿರಬಹುದು. ನನ್ನ ವಿರುದ್ಧ ಕಳ್ಳ ವ್ಯವಹಾರಗಳ ಆರೋಪಗಳು ಸಾಬೀತಾದರೆ ನಾನು ಅವರ ಕಾಲಿಗೆ ಬೀಳುತ್ತೇನೆ' ಎಂದಿದ್ದಾರೆ.

ಗುಪ್ತಚರ ಮಾಹಿತಿ ಹಂಚಿಕೆಗೆ ಅಮೆರಿಕದ ಜತೆ ಒಪ್ಪಂದ


ನವದೆಹಲಿ: ಭಾರತ ಮತ್ತು ಅಮೆರಿಕವು ಭಯೋತ್ಪಾದಕ ದಾಳಿಯ ಬಗ್ಗೆ ಪರಸ್ಪರ ಗುಪ್ತಚರ ಮಾಹಿತಿ ಹಂಚಿಕೊಳ್ಳುವ ಒಪ್ಪಂದವನ್ನು ಮತ್ತಷ್ಟು ವಿಸ್ತರಿಸಲು ಒಪ್ಪಿಕೊಂಡಿವೆ. ಅಮೆರಿಕ ಮತ್ತು ಭಾರತವನ್ನು ಗುರಿಯಾಗಿಸಿಕೊಂಡು ಅಫ್ಗಾನಿಸ್ತಾನದಲ್ಲಿ ನಡೆಯುವ ಭಯೋತ್ಪಾದಕ ಚಟುವಟಿಕೆಗಳ ಕುರಿತು ಮಾಹಿತಿ ಹಂಚಿಕೊಳ್ಳಲು ಈ ಒಪ್ಪಂದವನ್ನು ವಿಸ್ತರಿಸಲಾಗಿದೆ.

ವಾಷಿಂಗ್ಟನ್ ಡಿಸಿಯಲ್ಲಿ ನಡೆದ ಭಾರತ ಮತ್ತು ಅಮೆರಿಕದ ರಕ್ಷಣಾ ಸಚಿವಾಲಯದ 'ಭಯೋತ್ಪಾದನೆ ತಡೆ ಜಂಟಿ ಕಾರ್ಯಕಾರಿ ಗುಂಪಿ'ನ ಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ. ಈ ಸಂಬಂಧ ಎರಡೂ ದೇಶಗಳು ಜಂಟಿ ಹೇಳಿಕೆ ನೀಡಿವೆ.

ಅಫ್ಗಾನಿಸ್ತಾನವು ಈಗ ತಾಲಿಬಾನ್ ವಶವಾಗಿರುವ ಕಾರಣ, ಭಯೋತ್ಪಾದನಾ ಚಟುವಟಿಕೆಗಳು ಹೆಚ್ಚಾಗಿವೆ. ಭಾರತ ಮತ್ತು ಅಮೆರಿಕವನ್ನು ಗುರಿಯಾಗಿಸಿಕೊಂಡು ಭಯೋತ್ಪಾದನೆ ನಡೆಸಲು ಅಫ್ಗಾನಿಸ್ತಾನವನ್ನು ನೆಲೆಯಾಗಿ ಮಾಡಿಕೊಳ್ಳುವುದನ್ನು ತಡೆಗಟ್ಟುವ ಉದ್ದೇಶದಿಂದ ಎರಡೂ ದೇಶಗಳು ಒಪ್ಪಂದವನ್ನು ವಿಸ್ತರಿಸಿಕೊಂಡಿವೆ.

ಅಫ್ಗಾನಿಸ್ತಾನದ ಮೂಲಕ ಶಸ್ತ್ರಾಸ್ತ್ರ ಕಳ್ಳಸಾಗಣೆ ನಡೆಯುತ್ತಿದೆ. ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನೂ ಹಂಚಿಕೊಳ್ಳಲಾಗುತ್ತದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,857
ಇಂದಿನ ಅಂತ್ಯ	17,671
▼	185
ದಿನದ ಗರಿಷ್ಠ	17,915

ವಿನಿಮಯ ದರ

$ ಡಾಲರ್	74.88
£ ಪೌಂಡ್	103.26
€ ಯುರೊ	87.27
¥ ಯೆನ್ (100ಕ್ಕೆ)	65.75

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1420 (1410)
ಸೋಯಾ (ರಿಫೈನ್ಡ್)	₹1300(1295)
ಸೂರ್ಯಕಾಂತಿ (ರಿಫೈನ್ಡ್)	₹1335 (1335)
ಪಾಮೋಲಿನ್	₹1198 (1200)

ಯುಕೊ ಬ್ಯಾಂಕ್ ಲಾಭ ಏರಿಕೆ

ಬೆಂಗಳೂರು: ಯೂಕೊ ಬ್ಯಾಂಕ್‌ನ ಸೆಪ್ಟೆಂಬರ್ ತ್ರೈಮಾಸಿಕ ನಿವ್ವಳ ಲಾಭವು ಶೇಕಡ 583ರಷ್ಟು ಹೆಚ್ಚಳವಾಗಿದ್ದು, ₹ 205.39 ಕೋಟಿಗೆ ತಲುಪಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹ 30.12 ಕೋಟಿ ನಿವ್ವಳ ಲಾಭ ಗಳಿಸಿತ್ತು.

ಹಿಂದಿನ ವರ್ಷದ ಈ ಅವಧಿಯಲ್ಲಿ ಬ್ಯಾಂಕ್ ಒಟ್ಟು ₹ 4,327.13 ಕೋಟಿ ಆದಾಯ ಗಳಿಸಿತ್ತು. ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದ ಅವಧಿಯಲ್ಲಿ ಒಟ್ಟು ಆದಾಯವು ₹ 4,655.86 ಕೋಟಿಗೆ ಹೆಚ್ಚಳವಾಗಿದೆ.

ಬ್ಯಾಂಕ್‌ನ ವಸೂಲಾಗದ ಸಾಲದ (ಎನ್‌ಪಿಎ) ಒಟ್ಟು ಪ್ರಮಾಣವು ಸೆಪ್ಟೆಂಬರ್ ತ್ರೈಮಾಸಿಕದ ಕೊನೆಯಲ್ಲಿ ಶೇಕಡ 8.98ಕ್ಕೆ ಇಳಿಕೆ ಆಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಎನ್‌ಪಿಎ ಪ್ರಮಾಣವು ಶೇಕಡ 11.62ರಷ್ಟು ಇತ್ತು ಎಂದು ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

29-10-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9350-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1430 (1420)
ಒಂದು ವಾರದ ಡೆಲಿವರಿ	1425 (1415)
ಸೋಯಾ ಕಚ್ಚಾ	1255 (1252)
ಪಾಮ್ ವಾರದ ಡೆಲಿವರಿ	1196 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1265)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,600 (47,950)
ಬೆಳ್ಳಿ ಕೆ.ಜಿ
64,450 (64,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಜಿಯೊ ಸ್ಮಾರ್ಟ್‌ಫೋನ್ ಬೆಲೆ ₹6,499

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಜಿಯೊ ಕಂಪನಿಯು ಗೂಗಲ್ ಜೊತೆಗೂಡಿ ತಾನು ಅಭಿವೃದ್ಧಿಪಡಿಸಿರುವ ಹೊಸ ಸ್ಮಾರ್ಟ್‌ಫೋನ್ ಬೆಲೆಯನ್ನು ಬಹಿರಂಗಪಡಿಸಿದೆ. ಈ ಫೋನ್‌ನ ಬೆಲೆ ₹ 6,499.

ಆದರೆ, ₹ 1,999 ಮಾತ್ರ ಪಾವತಿಸಿ ಈ ಫೋನ್ ಖರೀದಿಸಬಹುದು. ಇನ್ನುಳಿದ ಮೊತ್ತವನ್ನು 18 ತಿಂಗಳು ಅಥವಾ 24 ತಿಂಗಳ ಕಂತುಗಳ ಮೂಲಕ ಪಾವತಿಸಬಹುದು ಎಂದು ಕಂಪನಿ ಹೇಳಿದೆ. ಈ ಕಂತುಗಳ ಮೊತ್ತವು ಗ್ರಾಹಕರು ಪ್ರತಿ ತಿಂಗಳು ತಮ್ಮ ಮೊಬೈಲ್ ರಿಚಾರ್ಜ್ ಮಾಡಿಸಿಕೊಳ್ಳಲು ಪಾವತಿಸಬೇಕಿರುವ ಮೊತ್ತವನ್ನೂ ಒಳಗೊಂಡಿರುತ್ತದೆ. ಈ ಫೋನ್ ದೀಪಾವಳಿ ವೇಳೆಗೆ ಅಂಗಡಿಗಳಲ್ಲಿ ಲಭ್ಯವಾಗಲಿದೆ.

ಕ್ವಾಲ್‌ಕಾಂ ಸ್ನ್ಯಾಪ್‌ಡ್ರ್ಯಾಗನ್ ಪ್ರೊಸೆಸರ್, 2 ಜಿಬಿ ರ್‍ಯಾಮ್, 32 ಜಿಬಿ ಆಂತರಿಕ ಮೆಮೊರಿ ಈ ಫೋನ್‌ನಲ್ಲಿ ಇರಲಿದೆ, ಆಂತರಿಕ ಮೆಮೊರಿಯನ್ನು 512 ಜಿಬಿವರೆಗೆ ವಿಸ್ತರಣೆ ಮಾಡಿಕೊಳ್ಳಲು ಅವಕಾಶ ಇದೆ. 5.45 ಇಂಚುಗಳ ಪರದೆಯನ್ನು ಇದು ಹೊಂದಿದೆ.

ತಿಂಗಳ ಕಂತು	ಅವಧಿ	ಏನೆಲ್ಲ ಸಿಗುತ್ತದೆ
₹300	24 ತಿಂಗಳು	ತಿಂಗಳಿಗೆ 5 ಜಿಬಿ ಡೇಟಾ, 100 ನಿಮಿಷಗಳ ಕರೆ
₹350	18 ತಿಂಗಳು	ತಿಂಗಳಿಗೆ 5 ಜಿಬಿ ಡೇಟಾ, 100 ನಿಮಿಷಗಳ ಕರೆ
₹450	24 ತಿಂಗಳು	ಪ್ರತಿದಿನ 1.5 ಜಿಬಿ ಡೇಟಾ, ಅನಿಯಮಿತ ಕರೆ ಸೌಲಭ್ಯ
₹500	18 ತಿಂಗಳು	ಪ್ರತಿದಿನ 1.5 ಜಿಬಿ ಡೇಟಾ, ಅನಿಯಮಿತ ಕರೆ ಸೌಲಭ್ಯ
₹500	24 ತಿಂಗಳು	ಪ್ರತಿದಿನ 2 ಜಿಬಿ ಡೇಟಾ, ಅನಿಯಮಿತ ಕರೆ ಸೌಲಭ್ಯ
₹550	18 ತಿಂಗಳು	ಪ್ರತಿದಿನ 2 ಜಿಬಿ ಡೇಟಾ, ಅನಿಯಮಿತ ಕರೆ ಸೌಲಭ್ಯ
₹550	24 ತಿಂಗಳು	ಪ್ರತಿದಿನ 2.5 ಜಿಬಿ ಡೇಟಾ, ಅನಿಯಮಿತ ಕರೆ ಸೌಲಭ್ಯ
₹600	18 ತಿಂಗಳು	ಪ್ರತಿದಿನ 2.5 ಜಿಬಿ ಡೇಟಾ, ಅನಿಯಮಿತ ಕರೆ ಸೌಲಭ್ಯ

ಈ ಫೋನ್ ದೀಪಾವಳಿಯ ಹೊತ್ತಿನಿಂದ ಅಂಗಡಿಗಳಲ್ಲಿ ಲಭ್ಯವಾಗಲಿದೆ.

ಜಿಯೊಫೋನ್ ನೆಕ್ಸ್ಟ್ ಖರೀದಿಸಲು ಆಸಕ್ತಿ ಇರುವವರು ತಮ್ಮ ಹತ್ತಿರದ ಜಿಯೊ ಮಾರ್ಟ್ ಡಿಜಿಟಲ್ ರಿಟೇಲರ್ ಅಥವಾ jio.com/next ವೆಬ್‌ಸೈಟ್‌ಗೆ ಭೇಟಿ ನೀಡಿ ಹೆಸರು ನೋಂದಾಯಿಸಬಹುದು. ಅಥವಾ, ವಾಟ್ಸ್‌ಆ್ಯಪ್ ಮೂಲಕ 70182-70182 ಸಂಖ್ಯೆಗೆ HI ಎಂದು ಸಂದೇಶ ಕಳುಹಿಸಬಹುದು.

ಜಿಯೊ ಕಡೆಯಿಂದ ಪ್ರತಿಕ್ರಿಯೆ ಲಭ್ಯವಾದ ನಂತರದಲ್ಲಿ ಹತ್ತಿರದ ಜಿಯೊಮಾರ್ಟ್ ರಿಟೇಲರ್ ಬಳಿ ಹೋಗಿ ಫೋನ್ ಪಡೆದುಕೊಳ್ಳಬಹುದು ಎಂದು ಕಂಪನಿ ತಿಳಿಸಿದೆ.

'ಇಂಗ್ಲಿಷ್ ಓದಲು ಆಗದವರು, ಇಂಗ್ಲಿಷ್‌ನಲ್ಲಿನ ಹೂರಣವನ್ನು ಅನುವಾದಿಸಿಕೊಳ್ಳುವ ಸೌಲಭ್ಯ ಇದರಲ್ಲಿದೆ. ತಮ್ಮ ಭಾಷೆಯಲ್ಲೇ ಇರುವ ಹೂರಣವನ್ನೂ ಈ ಫೋನ್ ಬಳಕೆದಾರರಿಗೆ ಓದಿ ಹೇಳಬಲ್ಲದು. ನಾವು ಇಂಡಿಯಾ ಮತ್ತು ಭಾರತದ ನಡುವಿನ ಅಂತರವನ್ನು ಕಡಿಮೆ ಮಾಡುತ್ತಿದ್ದೇವೆ ಎಂದು ಹೇಳಲು ಹೆಮ್ಮೆಯಾಗುತ್ತಿದೆ' ಎಂದು ರಿಲಯನ್ಸ್ ಅಧ್ಯಕ್ಷ ಮುಕೇಶ್ ಅಂಬಾನಿ ಅವರು ಪ್ರತಿಕ್ರಿಯೆ ನೀಡಿದ್ದಾರೆ.


ರಿಲಯನ್ಸ್ ಡಿಜಿಟಲ್‌ನಲ್ಲಿ ಕೊಡುಗೆಗಳು

ಬೆಂಗಳೂರು: ರಿಲಯನ್ಸ್ ಡಿಜಿಟಲ್ ಮಳಿಗೆಯಲ್ಲಿ ದೀಪಾವಳಿ ಸಂದರ್ಭದಲ್ಲಿ ವಿಶೇಷ ಕೊಡುಗೆಗಳು ಸಿಗಲಿವೆ. ಮೈಜಿಯೊ ಸ್ಟೋರ್ಸ್ ಮತ್ತು reliancedigital.in ವೆಬ್‌ಸೈಟ್‌ಗಳಲ್ಲಿಯೂ ಈ ಕೊಡುಗೆಗಳು ಸಿಗಲಿವೆ.

ಎಲೆಕ್ಟ್ರಾನಿಕ್ಸ್ ವಸ್ತುಗಳ ಮೇಲೆ ವಿವಿಧ ಕೊಡುಗೆಗಳು ಮಾತ್ರವಲ್ಲದೆ, ಎಕ್ಸಿಸ್ ಬ್ಯಾಂಕ್, ಸಿಟಿ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಕೋಟಕ್ ಬ್ಯಾಂಕ್ ಕ್ರೆಡಿಟ್ ಹಾಗೂ ಡೆಬಿಟ್ ಕಾರ್ಡ್ ಮೂಲಕ ಮಾಡುವ ಪಾವತಿಗಳಿಗೆ ಶೇಕಡ 10ರಷ್ಟು ರಿಯಾಯಿತಿ ಕೂಡ ಇರಲಿದೆ. ಈ ಕೊಡುಗೆಗಳು ನವೆಂಬರ್ 7ರವರೆಗೆ ಚಾಲ್ತಿಯಲ್ಲಿ ಇರಲಿವೆ.

ಟಿವಿ, ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್, ರೆಫ್ರಿಜರೇಟರ್, ವಾಷಿಂಗ್ ಮೆಷಿನ್ ಮತ್ತು ಇತರ ಗೃಹೋಪಯೋಗಿ ಉಪಕರಣಗಳ ಮೇಲೆ ವಿಶೇಷ ಕೊಡುಗೆಗಳು ಇರಲಿವೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಆರ್‌ಬಿಐ ಗವರ್ನರ್ ಆಗಿ ದಾಸ್ ಅಧಿಕಾರ ಅವಧಿ ವಿಸ್ತರಣೆ



ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರ ಅಧಿಕಾರ ಅವಧಿಯನ್ನು ಕೇಂದ್ರ ಸರ್ಕಾರವು ಮೂರು ವರ್ಷಗಳಿಗೆ ವಿಸ್ತರಿಸಿದೆ. ಅವರು 2024ರ ಡಿಸೆಂಬರ್‌ವರೆಗೂ ಆರ್‌ಬಿಐ ಗವರ್ನರ್ ಆಗಿ ಮುಂದುವರಿಯಲಿದ್ದಾರೆ.

ಊರ್ಜಿತ್ ಪಟೇಲ್ ಅವರ ರಾಜೀನಾಮೆ ನಂತರ, ದಾಸ್ ಅವರನ್ನು ಆರ್‌ಬಿಐನ 25ನೆಯ ಗವರ್ನರ್ ಆಗಿ 2018ರ ಡಿಸೆಂಬರ್ 11ರಂದು ಮೂರು ವರ್ಷಗಳ ಅವಧಿಗೆ ನೇಮಕ ಮಾಡಲಾಗಿತ್ತು. ದಾಸ್ ಅವರ ಅಧಿಕಾರ ಅವಧಿಯನ್ನು ವಿಸ್ತರಿಸುವ ತೀರ್ಮಾನವನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಪುಟದ ನೇಮಕಾತಿ ಸಮಿತಿಯು ಕೈಗೊಂಡಿದೆ.

ಡಿ. 10ರಿಂದ ಅನ್ವಯವಾಗುವಂತೆ ಮುಂದಿನ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ದಾಸ್ ಅವರನ್ನು ಮರುನೇಮಕ ಮಾಡಲು ಸಮಿತಿಯು ಒಪ್ಪಿದೆ ಎಂದು ಆದೇಶದಲ್ಲಿ ಹೇಳಲಾಗಿದೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು 2014ರಲ್ಲಿ ಅಧಿಕಾರಕ್ಕೆ ಬಂದ ನಂತರದಲ್ಲಿ ಎರಡನೆಯ ಅವಧಿಗೆ ಗವರ್ನರ್ ಆಗಿ ನೇಮಕಗೊಂಡಿರುವ ಮೊದಲ ವ್ಯಕ್ತಿ ದಾಸ್.

ರಾಜ್ಯದ ಸುತ್ತೋಲೆ ಪ್ರಶ್ನಿಸಿದ್ದ ಅರ್ಜಿ ವಜಾ

ನವದೆಹಲಿ: ಕೋವಿಡ್ ನಿಯಂತ್ರಣದ ಹಿನ್ನೆಲೆಯಲ್ಲಿ ಕೇರಳ ನಿವಾಸಿಗಳ ಪ್ರವೇಶ ನಿರ್ಬಂಧಿಸಿ ಕರ್ನಾಟಕ ಸರ್ಕಾರ ಹೊರಡಿಸಿದ್ದ ಸುತ್ತೋಲೆಯನ್ನು ಪ್ರಶ್ನಿಸಿ, ಕೇರಳದ ಮಂಜೇಶ್ವರ ಶಾಸಕ ಎ.ಕೆ.ಎಂ. ಅಶ್ರಫ್ ಸಲ್ಲಿಸಿದ ಮೇಲ್ಮನವಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

'ಕರ್ನಾಟಕ ಸರ್ಕಾರವು ಪ್ರವೇಶ ನಿರ್ಬಂಧಿಸಿ ವಿಧಿಸಲಾದ ಷರತ್ತುಗಳು ಅಸಮಂಜಸವಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿದೆ.

ಕರ್ನಾಟಕಕ್ಕೆ ಏಳನೇ ಸ್ಥಾನ: ಕೇರಳಕ್ಕೆ ಅಗ್ರಪಟ್ಟ

ಆಡಳಿತ ಸೂಚ್ಯಂಕ: ರಾಜ್ಯದ ಸ್ಥಾನ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಆಡಳಿತ ಸೂಚ್ಯಂಕದಲ್ಲಿ (ಪಿಎಐ) ಈ ಬಾರಿ ಕೇರಳ ಅಗ್ರ ಸ್ಥಾನ ಪಡೆದಿದೆ.

ಕೇರಳವು ದೊಡ್ಡ ರಾಜ್ಯಗಳ ವಿಭಾಗದಲ್ಲಿ ಈ ಸ್ಥಾನ ಪಡೆದಿದ್ದು, ಕರ್ನಾಟಕವು ಏಳನೇ ಸ್ಥಾನ ಪಡೆದಿದೆ. 2020ರಲ್ಲಿ ಕರ್ನಾಟಕ ಐದನೇ ಸ್ಥಾನ ಪಡೆದಿತ್ತು. ಹೀಗಾಗಿ, ಒಂದು ವರ್ಷದಲ್ಲಿ ಎರಡು ಸ್ಥಾನಗಳ ಕುಸಿತ ಕಂಡಂತಾಗಿದೆ.

ಸಣ್ಣ ರಾಜ್ಯಗಳ ವಿಭಾಗದಲ್ಲಿ ಸಿಕ್ಕಿಂ ಅಗ್ರಸ್ಥಾನ ಪಡೆದಿದೆ. ಕೇಂದ್ರಾಡಳಿತ ಪ್ರದೇಶಗಳ ವಿಭಾಗದಲ್ಲಿ ಪುದುಚೇರಿ ಮೊದಲ ಸ್ಥಾನ ಪಡೆದಿದೆ.

ಸಾರ್ವಜನಿಕ ಆಡಳಿತ ಕೇಂದ್ರದ (ಪಿಎಸಿ) ಮುಖ್ಯಸ್ಥ ಡಾ.ಎ. ರವಿಂದ್ರ ಅವರು, 2021ನೇ ಸಾಲಿನ ರಾಜ್ಯಗಳ ರ್‍ಯಾಂಕಿಂಗ್ ಪಟ್ಟಿಯನ್ನು ವರ್ಚುವಲ್ ವ್ಯವಸ್ಥೆ ಮೂಲಕ ಬಿಡುಗಡೆ ಮಾಡಿದರು.

'ಆದಾಯದ ಅಸಮಾನತೆ ಹೆಚ್ಚುತ್ತಿರುವುದನ್ನು ತಡೆಯುವುದು ಇಂದಿನ ಮುಖ್ಯ ಸವಾಲು. ಜಗತ್ತಿನಾದ್ಯಂತ ಕೋವಿಡ್–19 ಸಾಂಕ್ರಾಮಿಕ ಕಾಯಿಲೆಯಿಂದ ವಿಭಿನ್ನ ರೀತಿಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಸೃಷ್ಟಿಯಾಗಿವೆ. ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಆದ್ಯತೆ ನೀಡಬೇಕು. ರಾಜ್ಯ ಸರ್ಕಾರಗಳು ವಿವಿಧ ಯೋಜನೆಗಳಿಗೆ ಈ ಸಮಸ್ಯೆಗಳಿಗೆ ಸ್ಪಂದಿಸಿವೆ. ಆದರೆ, ಇನ್ನೂ ಸಾಕಷ್ಟು ಪ್ರಗತಿ ಸಾಧಿಸಬೇಕಾಗಿದೆ' ಎಂದು ಡಾ. ಎ. ರವೀಂದ್ರ ಹೇಳಿದರು.

ಪಿಎಸಿ ಕಾರ್ಯಕ್ರಮ ಅಧಿಕಾರಿ ಸಮೃದ್ಧಿ ಪಾಂಡೆ, 'ಕೇಂದ್ರ ಸರ್ಕಾರದ ಪ್ರಮುಖ ಐದು ಯೋಜನೆಗಳನ್ನು ಪ್ರತ್ಯೇಕವಾಗಿ ವಿಶ್ಲೇಷಿಸಿರುವುದನ್ನು ಸಹ ಸೂಚ್ಯಂಕ ಸಿದ್ಧಪಡಿಸುವಾಗ ಪರಿಗಣಿಸಲಾಗಿದೆ' ಎಂದು ವಿವರಿಸಿದರು.

'ಕೇಂದ್ರ ಸರ್ಕಾರದ ಯೋಜನೆಗಳಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ರಾಷ್ಟ್ರೀಯ ಆರೋಗ್ಯ ಮಿಷನ್(ಎನ್‌ಎಂಎಚ್), ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳು(ಎಸ್‌ಎಂಎಸ್‌ಎ), ಸಮಗ್ರ ಶಿಕ್ಷಾ ಅಭಿಯಾನ (ಎಸ್‌ಎಂಎಸ್‌ಎ) ಹಾಗೂ ಮಧ್ಯಾಹ್ನದ ಬಿಸಿಯೂಟ (ಎಂಡಿಎಂಎಸ್) ಅನುಷ್ಠಾನದ ಕುರಿತು ವಿಶ್ಲೇಷಿಸಲಾಗಿದೆ' ಎಂದು ತಿಳಿಸಿದರು.

ದೇಶದಲ್ಲಿ ಸಾರ್ವಜನಿಕ ಆಡಳಿತ ಸುಧಾರಣೆಗೆ ಸಲಹೆ ನೀಡುವ ಉದ್ದೇಶದಿಂದ 1994ರಲ್ಲಿ ಪಿಎಸಿಯನ್ನು ಸ್ಥಾಪಿಸಲಾಗಿದೆ. ರಾಜ್ಯಗಳ ಆಡಳಿತಕ್ಕೆ ಸಂಬಂಧಿಸಿದ 14 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿ) ಹಾಗೂ 43 ಆದ್ಯತಾ ವಿಷಯಗಳನ್ನು ಆಧರಿಸಿ ಅಧ್ಯಯನ ನಡೆಸಿ ಸೂಚ್ಯಂಕ ಸಿದ್ಧಪಡಿಸಲಾಗುತ್ತಿದೆ.

ಪ್ರಸಕ್ತ ವರ್ಷ ಕೋವಿಡ್–19ಗೆ ಸಂಬಂಧಿಸಿದಂತೆ ರಾಜ್ಯಗಳು ಕೈಗೊಂಡ ಕ್ರಮಗಳು ಮತ್ತು ಈ ಸಾಂಕ್ರಾಮಿಕ ಕಾಯಿಲೆಯಿಂದ ಉಂಟಾದ ಪರಿಣಾಮಗಳ ಬಗ್ಗೆಯೂ ವಿಶ್ಲೇಷಿಸಲಾಗಿದೆ. ಕರ್ನಾಟಕವು ಕೆಲವು ವಲಯಗಳಲ್ಲಿ ಕಳಪೆ ಸಾಧನೆ ತೋರಿರುವುದನ್ನು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.


ಬೆಂಗಳೂರಿನಲ್ಲಿ ಶುಕ್ರವಾರ ಸಾರ್ವಜನಿಕ ವ್ಯವಹಾರಗಳ ಕೇಂದ್ರದ (ಪಿಎಸಿ) ಮುಖ್ಯಸ್ಥ ಡಾ.ಎ. ರವಿಂದ್ರ ಅವರು ರಾಜ್ಯಗಳ ರ್‍ಯಾಂಕಿಂಗ್ ಪಟ್ಟಿ ಬಿಡುಗಡೆ ಮಾಡಿದರು(ಎಡದಿಂದ ಎರಡನೇಯವರು), ಪಿಎಸಿ ನಿರ್ದೇಶಕ ಜಿ. ಗುರುಚರಣ್, ಕಾರ್ಯನಿರ್ವಾಹಕ ನಿರ್ದೇಶಕಿ ಡಾ. ಅನ್ನಪೂರ್ಣ ರವಿಚಂದರ್ ಇದ್ದರು

ದೊಡ್ಡ ರಾಜ್ಯಗಳು	ಶ್ರೇಯಾಂಕ
ಕೇರಳ	1
ತಮಿಳುನಾಡು	2
ತೆಲಂಗಾಣ	3
ಛತ್ತೀಸಗಢ	4
ಗುಜರಾತ್	5
ಪಂಜಾಬ್	6
ಕರ್ನಾಟಕ	7
ಆಂಧ್ರಪ್ರದೇಶ	8
ಜಾರ್ಖಂಡ	9
ಮಧ್ಯಪ್ರದೇಶ	10

ಸಣ್ಣ ರಾಜ್ಯಗಳು	ಶ್ರೇಯಾಂಕ
ಸಿಕ್ಕಿಂ	1
ಗೋವಾ	2
ಮಿಜೋರಾಂ	3
ಹಿಮಾಚಲ ಪ್ರದೇಶ	4
ತ್ರಿಪುರಾ	5
ಮೇಘಾಲಯ	6
ಅರುಣಾಚಲ ಪ್ರದೇಶ	7
ನಾಗಾಲ್ಯಾಂಡ್	8
ದೆಹಲಿ	9
ಉತ್ತರಾಖಂಡ	10
ಮಣಿಪುರ	11

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600- 650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000 -1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಹೊಸನಗರ	
ಚಾಲಿ	42699-44799
ಕೆಂಪುಗೋಟು	35549-38149
ರಾಶಿ	40049-46519
ಕಾರ್ಕಳ	
ಹೊಸತು	35000-42500
ಹಳತು	46000-50000
ಕುಮಟಾ	
ಚಿಪ್ಪು	32099-39509
ಕೋಕ	20109-35019
ಫ್ಯಾಕ್ಟರಿ	10169-18299
ಹಳೆಚಾಲಿ	39099-41599
ಹೊಸಚಾಲಿ	43019-46599
ಕುಂದಾಪುರ	
ಹಳೆಚಾಲಿ	46000-49500
ಹೊಸಚಾಲಿ	30000-37000
ಮಂಗಳೂರು	
ಕೋಕ	24000-48900
ಪುತ್ತೂರು	
ಕೋಕ	10500-26000
ಹೊಸತು	35500-50000
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	49399-50982
ಗೊರಬಲು	16049-39560
ರಾಶಿ	43039-46602
ಸರಕು	51500-75896
ಸಿದ್ದಾಪುರ	
ಬಿಳಿಗೋಟು	29099-41589
ಚಾಲಿ	42699-47269
ಕೋಕ	22899-36908
ಕೆಂಪುಗೋಟು	27099-32089
ರಾಶಿ	41899-47099
ತಟ್ಟಿಬೆಟ್ಟೆ	33099-42899
ಶಿರಸಿ	
ಬೆಟ್ಟೆ	20100-47689
ಬಿಳಿಗೋಟು	18099-42009
ಚಾಲಿ	27119-47809
ರಾಶಿ	17199-50199
ಸುಳ್ಯ	
ಕೋಕ	10000-26000
ಹೊಸತು	30900-50000
ಯಲ್ಲಾಪುರ	
ಆಪಿ	53699-53699
ಬಿಳಿಗೋಟು	32609-41269
ಕೋಕ	22600-31009
ಚಾಲಿ	43088-48169
ಕೆಂಪುಗೋಟು	31299-36155
ರಾಶಿ	47399-52099
ತಟ್ಟಿಬೆಟ್ಟೆ	39000-44969
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	263-512
ದ್ವಿತಳಿ (ಬಿ.ವಿ)	285-555

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12,900	12,500	12,900	199.95ಸೆಂಟ್ಸ್
ಎಸಿ	6,325	-	5,250	
ಆರ್‌ಪಿ	6,000	-	6,200	ಲಂಡನ್
ಆರ್‌ಸಿ	3,510	-	3,600	2177ಡಾಲರ್ಸ್

ಐರೋಪ್ಯ ನಿಯೋಗದೊಂದಿಗೆ ಮೋದಿ ಚರ್ಚೆ

ರೋಮ್ (ಪಿಟಿಐ): ಯುರೋಪಿಯನ್ ಕೌನ್ಸಿಲ್ ಅಧ್ಯಕ್ಷ ಚಾರ್ಲ್ಸ್ ಮಿಷಲ್ ಹಾಗೂ ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡರ್ ಲೆಯೆನ್ ಅವರನ್ನು ಶುಕ್ರವಾರ ಇಲ್ಲಿ ಭೇಟಿಯಾದ ಪ್ರಧಾನಿ ನರೇಂದ್ರ ಮೋದಿ, ವ್ಯಾಪಾರ–ಹೂಡಿಕೆ ಕುರಿತ ಒಪ್ಪಂದ, ಹವಾಮಾನ ಬದಲಾವಣೆ, ಕೋವಿಡ್–19, ಜಾಗತಿಕ ಹಾಗೂ ಪ್ರಾದೇಶಿಕ ಬೆಳವಣಿಗೆಗಳ ಬಗ್ಗೆ ವಿಸ್ತೃತ ಚರ್ಚೆ ನಡೆಸಿದರು.

ಅ.30ರಿಂದ ನಡೆಯಲಿರುವ ಜಿ–20 ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಆಗಮಿಸಿರುವ ಮೋದಿ, ಜಾಗತಿಕ ಆರ್ಥಿಕತೆ, ಕೋವಿಡ್–19 ನಂತರದಲ್ಲಿನ ಆರೋಗ್ಯ ಚೇತರಿಕೆಗೆ ಸಂಬಂಧಿಸಿದಂತೆ ಹಲವು ರಾಷ್ಟ್ರಗಳ ಮುಖ್ಯಸ್ಥರೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ.

ರೋಮ್‌ನಲ್ಲಿ ಪ್ರಧಾನಿ ಮೋದಿ ಅವರ ಮೊದಲ ಅಧಿಕೃತ ಕಾರ್ಯಕ್ರಮ ಇದಾಗಿದ್ದು, 'ಭಾರತ ಮತ್ತು ಐರೋಪ್ಯ ಒಕ್ಕೂಟಗಳ ಬಾಂಧವ್ಯವನ್ನು ಬಲಪಡಿಸುವ ನಿಟ್ಟಿನಲ್ಲಿ ವಿಸ್ತೃತ ಮಾತುಕತೆ ನಡೆದಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಂ ಬಾಗ್ಚಿ ತಿಳಿಸಿದ್ದಾರೆ.

ಜುಲೈ 2020ರಲ್ಲಿ ವರ್ಚುವಲ್ ವೇದಿಕೆಯಲ್ಲಿ ನಡೆದಿದ್ದ ಭಾರತ–ಐರೋಪ್ಯ ಒಕ್ಕೂಟದ ನಡುವಿನ 15ನೇ ಶೃಂಗಸಭೆಯಲ್ಲಿ ಮೋದಿ, ಮಿಷಲ್, ಲೆಯೆನ್ ಪಾಲ್ಗೊಂಡಿದ್ದರು.

ಗಾಂಧೀಜಿ ಪ್ರತಿಮೆಗೆ ನಮನ

ಶುಕ್ರವಾರ ರೋಮ್‌ಗೆ ಆಗಮಿಸಿದ ಪ್ರಧಾನಿ ಮೋದಿ, ಮಹಾತ್ಮ ಗಾಂಧಿ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.

'ಗಾಂಧೀಜಿಯವರ ಆದರ್ಶಗಳು ಜಗತ್ತಿನ ಲಕ್ಷಾಂತರ ಜನರಿಗೆ ಧೈರ್ಯ ಹಾಗೂ ಸ್ಫೂರ್ತಿ ನೀಡಿದ್ದು, ರೋಮ್‌ನಲ್ಲಿ ಅವರ ಪ್ರತಿಮೆಗೆ ಗೌರವ ಸಲ್ಲಿಸುವ ಭಾಗ್ಯ ನನ್ನದಾಯಿತು' ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

ಭಾರತೀಯ ಸಮುದಾಯದ ಹರ್ಷ: ರೋಮ್‌ಗೆ ಆಗಮಿಸಿದ ಮೋದಿ ಅವರನ್ನು, ಅಲ್ಲಿನ ಭಾರತೀಯ ಸಮುದಾಯದವರು ಹರ್ಷೋಲ್ಲಾಸದಿಂದ ಬರಮಾಡಿಕೊಂಡರು.

ಇದಕ್ಕೆ ಸಂಬಂಧಪಟ್ಟ ವಿಡಿಯೊವೊಂದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಲಾಗಿದ್ದು, ಉದ್ಯಾನವೊಂದರಲ್ಲಿ ಹಸನ್ಮುಖರಾಗಿ ಹೆಜ್ಜೆ ಹಾಕಿದ ಮೋದಿ, ಅಲ್ಲಿ ಸೇರಿದ್ದ ಭಾರತೀಯ ಸಮುದಾಯದವರ ಜತೆ ಕೈಕುಲುಕುವ ದೃಶ್ಯಗಳಿವೆ.

ಭಾರತದ ಧ್ವಜ ಹಿಡಿದು, ಸಂಭ್ರಮದಿಂದ ಜನರು ಮೋದಿ ಹೆಸರನ್ನು ಕೂಗುತ್ತಿದ್ದರೆ, ಅವರತ್ತ ಕೈಬೀಸುತ್ತ ಮೋದಿ ಸಾಗಿದರು. ತಂಡವೊಂದು ಪ್ರಸ್ತುತಪಡಿಸಿದ ಭಜನೆಯನ್ನು ತದೇಕಚಿತ್ತದಿಂದ ಆಲಿಸಿದರು. ಅವರು ನೀಡಿದ ಪುಸ್ತಕ ಕೊಡುಗೆಯನ್ನು ಸ್ವೀಕರಿಸಿದರು. ಆ ನಂತರ ನಡೆದ, 'ಓಂ ನಮಃ ಶಿವಾಯ' ಪಠಣದಲ್ಲಿ ತಾವೂ ಭಾಗಿಯಾದರು.

ಕೇಂದ್ರ ಅಧೀನ ಸಂಸ್ಥೆಗಳ ಕಾರ್ಮಿಕ ವಿಡಿಎ ಏರಿಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಕಾಯಂ ಮತ್ತು ಗುತ್ತಿಗೆ ಕಾರ್ಮಿಕರ ಬದಲಾಗುವ ತುಟ್ಟಿ ಭತ್ಯೆಯನ್ನು (ವಿಡಿಎ) ಹೆಚ್ಚಿಸಿ ಕಾರ್ಮಿಕ ಸಚಿವಾಲಯವು ಆದೇಶ ಹೊರಡಿಸಿದೆ. ಇದರಿಂದಾಗಿ, ಈ ನೌಕರರ ಕನಿಷ್ಠ ವೇತನದಲ್ಲಿ ಏರಿಕೆ ಆಗಲಿದೆ.

ಅಕ್ಟೋಬರ್ 1ರಿಂದ ಈ ಏರಿಕೆಯು ಅನ್ವಯವಾಗಲಿದೆ. ಕೇಂದ್ರ ಸರ್ಕಾರದ ಅಧೀನ ಸಂಸ್ಥೆಗಳ ಅಡಿ ನಿರ್ಮಾಣ, ರಸ್ತೆ-ಹೆದ್ದಾರಿಗಳ ನಿರ್ವಹಣೆ, ರನ್‌ವೇ ನಿರ್ವಹಣೆ, ಸ್ವಚ್ಛತಾ ಸಿಬ್ಬಂದಿ, ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕಾರ್ಮಿಕರು, ಕಾವಲುಗಾರರು, ಗಣಿ ಕಾರ್ಮಿಕರಿಗೆ ಈ ಏರಿಕೆ ಅನ್ವಯವಾಗಲಿದೆ. ಅಂದಾಜು 1.5 ಕೋಟಿ ಕಾರ್ಮಿಕರಿಗೆ ಇದರ ಪ್ರಯೋಜನ ದೊರೆಯಲಿದೆ ಎಂದು ಸಚಿವಾಲಯವು ಹೇಳಿದೆ.



ಇರಲಿ ಸಂಪೂರ್ಣ ಸುರಕ್ಷತೆ

ನಡಹಳ್ಳಿ ವಸಂತ್

ಪುಟಾಣಿ ನಂದಿನಿ ಕಳೆದ ವಾರ ಖುಷಿಯಿಂದಲೇ ಶಾಲೆಗೆ ಹೋದರೂ ಬರುವಾಗ ಮಾತ್ರ ಮುಖ ಸಪ್ಪೆಯಾಗಿತ್ತು. ಒಂದೂವರೆ ವರ್ಷದ ನಂತರ ಶಾಲೆಗೆ ಕಾಲಿಟ್ಟಿರುವುದು, ಸುಸ್ತಾಗಿರಬಹುದು ಎಂದುಕೊಂಡರು ನಂದಿನಿಯ ಅಮ್ಮ. ಆದರೆ ಮರುದಿನ ಶಾಲೆಗೆ ಹೊರಡಲು ಹಟ ಮಾಡಿದ ನಂದಿನಿ, 'ಅಲ್ಲಿ ಭಯ ಆಗುತ್ತಮ್ಮ, ಟೀಚರ್ ಹೇಳಿದ್ದು ಏನೂ ತಲೆಗೇ ಹೋಗಲ್ಲ..' ಎಂದು ಭಯ ತೋಡಿಕೊಂಡಾಗ ಆಕೆಯ ಪೋಷಕರು ದಿಗಿಲು ಬಿದ್ದರು.

ಇದು ಕೇವಲ ನಂದಿನಿಯ ಪೋಷಕರ ಹೆದರಿಕೆ ಮಾತ್ರವಲ್ಲ, ಬಹುತೇಕ ಪುಟಾಣಿಗಳ ತಂದೆ- ತಾಯಂದಿರು ಮಕ್ಕಳ ಈ ರೀತಿಯ ಮನಸ್ಥಿತಿ ಬಗ್ಗೆ ಆತಂಕಗೊಂಡಿರಬಹುದು. ಇದಕ್ಕೆ ಕಾರಣಗಳೂ ಸಾಕಷ್ಟಿವೆ.

ಸುಮಾರು ಒಂದೂವರೆ ವರ್ಷದ ನಂತರ ಹಂತಹಂತವಾಗಿ ಶಾಲೆಗಳು ತೆರೆಯುತ್ತಿವೆ. ಯಾಂತ್ರಿಕ ಕಲಿಕೆಯಿಂದ ನೇರ ಕಲಿಕೆಗೆ ಬದಲಾಯಿಸಿಕೊಳ್ಳುವುದಕ್ಕೆ 10-12 ವರ್ಷದ ಮಕ್ಕಳಿಗೂ ಸಮಯದ ಅಗತ್ಯವಿದೆ. ಪ್ರಾಥಮಿಕ ಶಾಲಾ ಮಕ್ಕಳಿಗೆ ಇವೆಲ್ಲದರ ಕುರಿತಾಗಿ ಬಹಳ ಗೊಂದಲವಿರುತ್ತದೆ. ಪ್ರಥಮ ಬಾರಿಗೆ ಶಾಲೆಗಳಿಗೆ ಹೋಗುತ್ತಿರುವ ಮಕ್ಕಳಿಗಂತೂ ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವ ಸಮಯ ಸಿಗುವ ಮೊದಲೇ ಪರೀಕ್ಷೆಗಳು ಶುರುವಾಗಬಹುದು. ಕಲಿಕೆಯಲ್ಲಿ ಹಿಂದೆಬೀಳುವ ಆತಂಕದಲ್ಲಿರುವ ಪೋಷಕರು ಮಕ್ಕಳು ಹೆಚ್ಚಿನ ಸಮಯ ಓದಿಗೆ ಮೀಸಲಿಡುವಂತೆ ನಿರೀಕ್ಷಿಸುವುದು ಸಹಜ. ಈ ಎಲ್ಲಾ ಧಾವಂತದಲ್ಲಿ ಮಕ್ಕಳ ಮನಸ್ಥಿತಿಯನ್ನು ಗಮನಿಸುವುದು ಹೇಗೆ?

ಸಹಜ ಕಲಿಕೆ-ಸುರಕ್ಷಿತ ವಾತಾವರಣ

ಕಲಿಕೆಗೆ ಉತ್ತಮ ಶಿಕ್ಷಕರು, ಸೂಕ್ತ ವಾತಾವರಣ, ಆಧುನಿಕ ಪರಿಕರಗಳು ಇತ್ಯಾದಿಗಳೆಲ್ಲಾ ಇರಬೇಕು ಎನ್ನುವುದು ಮೇಲುನೋಟಕ್ಕೆ ಸತ್ಯ ಎನ್ನಿಸಬಹುದು. ಮಕ್ಕಳ ಮನಸ್ಸಿನ ಫಲವತ್ತತೆಯನ್ನು ಗುರುತಿಸುವುದು, ಉಳಿಸುವುದು ಮತ್ತು ಬೆಳೆಸುವುದು ಸಾಧ್ಯವಾದರೆ ಮಾತ್ರ ಕಲಿಕೆ ಸಹಜವಾಗಿರುತ್ತದೆ ಮತ್ತು ಮಕ್ಕಳು ತಮ್ಮ ಶಕ್ತಿಯನ್ನು ಪೂರ್ಣವಾಗಿ ಅದರಲ್ಲಿ ತೊಡಗಿಸಬಲ್ಲರು.

ಮಕ್ಕಳು ಮಾತ್ರವಲ್ಲ, ವಯಸ್ಕರೂ ಕೂಡ ತಮ್ಮ ನೆನಪಿನ ಶಕ್ತಿ ಮತ್ತು ವಿವೇಚನಾ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಳ್ಳಲು ಸಾಧ್ಯವಾಗುವುದು ಒತ್ತಡ ಮತ್ತು ಭಯಗಳಿಲ್ಲದ ಮಾನಸಿಕ ಸಮತೋಲನ ಕಾಯ್ದುಕೊಂಡಾಗ ಮಾತ್ರ. ಒತ್ತಡ ಮೆದುಳಿನಲ್ಲಿ ನೆನಪಿನ ಸ್ಥಾನವಾದ ಹಿಪ್ಪೋಕ್ಯಾಂಪಸ್‌ನ ಗಾತ್ರವನ್ನು ಕುಗ್ಗಿಸುತ್ತದೆ ಎಂದು ಸಂಶೋಧನೆಗಳು ಹೇಳುತ್ತವೆ. ಭಯ ನಮ್ಮ ದೇಹದ ರಕ್ಷಣಾವ್ಯವಸ್ಥೆಯನ್ನು ಪ್ರಚೋದಿಸುತ್ತದೆಯೇ ಹೊರತು ಯೋಚಿಸುವ ಮೆದುಳನ್ನಲ್ಲ. ಹಾಗಾಗಿಯೇ ಪರೀಕ್ಷೆಯಲ್ಲಿ ಎದೆ ಹೊಡೆದುಕೊಂಡು, ಮೈ ಬೆವರುತ್ತಿರುವಾಗ ಎಲ್ಲವೂ ಮರೆತು ಹೋಗುವುದು ಅನಿವಾರ್ಯವಾದ ಪರಿಣಾಮ.

ಭಯ ಒತ್ತಡಗಳಿಲ್ಲದ ಸ್ಥಿತಿ ಯಾವಾಗ ಸಾಧ್ಯ? ಮಗುವಿಗೆ ಕಲಿಕೆಯ ವಾತಾವರಣ ಸಂಪೂರ್ಣ ಸುರಕ್ಷಿತ ಎನ್ನಿಸಿದಾಗ ಮಾತ್ರ. ಇದು ಕೇವಲ ಭೌತಿಕ ಸುರಕ್ಷತೆಯಲ್ಲ, ಮಗುವಿನ ಅಂತರಂಗಕ್ಕೆ ಅದರ ಅನುಭವವಾಗಬೇಕು. ಸುರಕ್ಷಿತ ವಾತಾವರಣವನ್ನು ಶಾಲೆಯವರು ಕೊಡಬೇಕು ಎನ್ನುವುದು ನಿಜವಾದರೂ ಪೋಷಕರು ಸುಮ್ಮನಿರುವಂತಿಲ್ಲ. ಶಾಲೆಯ ವಾತಾವರಣ, ಶಿಕ್ಷಣ ಪದ್ಧತಿ ಮುಂತಾದವುಗಳ ಚರ್ಚೆಯನ್ನು ಸದ್ಯಕ್ಕೆ ಬದಿಗಿಟ್ಟು ಪೋಷಕರು ಮನೆಯಲ್ಲಿಯೇ ಮಾಡಬಹುದಾದ ವಿಷಯಗಳತ್ತ ಗಮನಹರಿಸೋಣ.

ಮಾನಸಿಕ ಸುರಕ್ಷತೆ

ಭಯ ಮತ್ತು ಒತ್ತಡಗಳು ಕೇವಲ ಮೆದುಳಿನಲ್ಲಿ ದಾಖಲಾಗುತ್ತವೆ ಎನ್ನುವುದು ಸಾಮಾನ್ಯವಾದ ತಿಳಿವಳಿಕೆ. ನಮ್ಮ ನರಮಂಡಲದ ಸಂಚಾರ ವ್ಯವಸ್ಥೆ ಇವುಗಳ ಸೂಚನೆಗಳನ್ನು ಗ್ರಹಿಸಿದ ಕೂಡಲೇ ಆತಂಕದ ಪ್ರಭಾವ ಇಡೀ ದೇಹದ ಮೇಲೆ ಉಂಟಾಗುತ್ತದೆ. ವಾಹನ ಚಲಾಯಿಸುವಾಗ ಒಮ್ಮೆ ಅಪಘಾತವಾದರೆ ಅದರ ನೆನಪಿನಿಂದ ಹೊರಬರಲು ಬಹಳ ಸಮಯ ಬೇಕಾಗುವಂತೆ ಮಗು ಒಮ್ಮೆ ಅನುಭವಿಸುವ ಭಯದಿಂದ ಮುಕ್ತವಾಗುವುದು ಅಷ್ಟು ಸರಳವಲ್ಲ. ಕೇವಲ ಪೋಷಕರ ಉತ್ತೇಜನ ಆಶ್ವಾಸನೆಗಳಿಂದ ಸುರಕ್ಷತೆ ಮೂಡಲಾರದು. ಭಯದ ಸೂಚನೆಗಳು ಸಾಮಾನ್ಯವಾಗಿ ದೈಹಿಕವಾಗಿಯೂ ಕಾಣಿಸಿಕೊಳ್ಳುತ್ತವೆ. ಪದೇಪದೇ ಜ್ವರ ಬರುವುದು, ಬಾಯಾರಿಕೆ, ಮೂತ್ರದ ಒತ್ತಡ ಉಂಟಾಗುವುದು, ಊಟ, ನಿದ್ದೆ, ಆಟಗಳಲ್ಲಿ ಆಸಕ್ತಿ ಕುಂದುವುದು, ಅತಿಯಾಗಿ ತಿನ್ನುವುದು, ಮೊಬೈಲ್‌ಗೆ ಅಂಟಿಕೊಳ್ಳುವುದು- ಮುಂತಾದವು ಭಯದ ಸೂಚನೆಗಳಾಗಿರಬಹುದು. ಎಲ್ಲವನ್ನೂ ಸ್ಪಷ್ಟವಾಗಿ ಹೇಳುವುದಕ್ಕೆ ಅನುವಾಗುವ ಮೆದುಳಿನ ಅಂಗಗಳು ಮಕ್ಕಳಲ್ಲಿ ಬೆಳವಣಿಗೆಯಾಗಿರುವುದಿಲ್ಲ. ಹಾಗಾಗಿ ತಮ್ಮ ಒಡನಾಟದಲ್ಲಿ ಪೋಷಕರು ಮಕ್ಕಳ ಮನಸ್ಥಿತಿಯನ್ನು ಗಮನಿಸಬೇಕಾಗುತ್ತದೆ. ❖

1 ಶಾಲೆಯಿಂದ ಬಂದ ಕೂಡಲೇ ಹೋಂವರ್ಕ್, ಪರೀಕ್ಷೆ, ಅಂಕಗಳನ್ನು ಕುರಿತು ಮಾತನಾಡದಿದ್ದರೆ ಒಳ್ಳೆಯದು. ಮಗುವಿನ ದೇಹ ಅದರ ಶಾಲೆಯ ಅನುಭವಗಳನ್ನು ಹೇಳುತ್ತಿರುತ್ತದೆ. ಪೋಷಕರು ನಿಧಾನವಾಗಿ ಮಗುವಿನ ಅನುಭವದ ಪ್ರಪಂಚದಲ್ಲಿ ಇಣುಕಬೇಕಾಗುತ್ತದೆ. ಇದಕ್ಕಾಗಿ ಕೆಲವು ಸರಳ ಪ್ರಶ್ನೆಗಳನ್ನು ಕೇಳಬಹುದು. ಶಾಲೆಯಲ್ಲಿ ಮನೆಯವರು ಯಾರೂ ಇರಲಿಲ್ಲ ಅನಿಸುತ್ತಿತ್ತಾ? ಹಸಿವಾದರೆ, ಬಾಯಾರಿಕೆಯಾದರೆ, ನಿದ್ದೆ ಬಂದರೆ, ಸೂಸೂ ಬಂದರೆ ಯಾರನ್ನು ಕೇಳೋದು ಅಂತ ಅನಿಸಿತ್ತಾ? ಶಾಲೆ ಬಿಡೋದು ತಡ ಆದ್ರೆ, ಅಮ್ಮ ಕರಕೊಂಡು ಹೋಗಕ್ಕೆ ಬರದೆ ಹೋದ್ರೆ ಅಂತ ಭಯವಾಗಿತ್ತಾ? ಯಾರ ಜೊತೆಗಾದ್ರೂ ಮಾತಾಡ್ಬೇಕೂ ಆಟ ಆಡ್ಬೇಕು ಅಂತ ಅನಿಸಿತ್ತಾ? ಆಗ ಏನು ಮಾಡ್ದೆ? ಅಳು ಬಂತಾ?- ಮುಂತಾಗಿ. "ಅನಿಸುವಿಕೆ"ಯ ಕುರಿತು ಮಾತನಾಡುವುದು ಅತ್ಯಗತ್ಯ. ಏಕೆಂದರೆ ಇದು ಭಾವನಾತ್ಮಕ ಲೋಕದ ಅನುಭವಗಳನ್ನು ಹೊರತರುತ್ತದೆ.

2 ಮಕ್ಕಳ ಅನುಭವವನ್ನು ದೊಡ್ಡವರ ಪ್ರಪಂಚದಿಂದ ಅಳೆಯಬಾರದು. ಕಡಿಮೆ ಮಾತನಾಡುತ್ತಾ, ಹೆಚ್ಚುಹೆಚ್ಚು ಪ್ರಶ್ನೆ ಕೇಳುತ್ತಾ ಹೋದರೆ ಮಕ್ಕಳ ಮನೋಪ್ರಪಂಚವನ್ನು ತಲುಪುವುದು ಸುಲಭ. ಆಸಕ್ತಿಯಿಂದ ಕೇಳಿದಷ್ಟೂ ಮಗುವಿನ ನರಮಂಡಲ ಶಾಂತವಾಗಿ ಭಯ ಹಿಂದೆ ಸರಿಯುತ್ತದೆ.

3 ದುಃಖವಾಗುವುದು, ಭಯವಾಗುವುದು ದೌರ್ಬಲ್ಯ ಎನ್ನಿಸುವಂತೆ ಬೇರೆಯವರ ಉದಾಹರಣೆ ಕೊಡುವುದು ಹಾನಿಕಾರಕ. ಆತಂಕ ನಮ್ಮೆಲ್ಲರ ಸಹಜ ಅನುಭವ. ಧೈರ್ಯದ ಮಾತುಗಳ ಬುದ್ಧಿವಾದವನ್ನು ಭಯ ಮತ್ತು ಒತ್ತಡಗಳಲ್ಲಿರುವ ಮನಸ್ಸು ಸ್ವೀಕರಿಸುವುದಿಲ್ಲ. ಶಾಲೆಗೆ ಹೋಗುವುದು ಅನಿವಾರ್ಯ, ನಾವೆಲ್ಲಾ ನಿನ್ನ ಬೆಂಬಲಕ್ಕೆ ಯಾವಾಗಲೂ ಇದ್ದೇವೆ ಎನ್ನುವ ಮಾತನಾಡಬಹುದು.

4 ಶಾಲಾ ವಾತಾವರಣ ಸುರಕ್ಷಿತ ಎಂದು ಮಗುವಿಗೆ ಅನ್ನಿಸದಿದ್ದರೆ ಅದರಲ್ಲಿ ಮಗುವಿನದೋ ಅಥವಾ ಶಿಕ್ಷಕರದ್ದೋ ತಪ್ಪಿರಬೇಕು ಎಂದೇನಿಲ್ಲ. ಹೊಸ ವಾತಾವರಣಕ್ಕೆ ತೆರೆದುಕೊಳ್ಳುವುದಕ್ಕೆ ಮಗುವಿಗೆ ಸಹಾಯದ ಅಗತ್ಯವಿದೆ ಎಂದಷ್ಟೇ ತಿಳಿಯಬೇಕು. ಶಿಸ್ತು ಮತ್ತು ಶಿಕ್ಷೆ ಭಯವನ್ನು ಹೆಚ್ಚುಮಾಡುತ್ತವೆ ಎಂದು ಮರೆಯುವಂತಿಲ್ಲ.

5 ದೈಹಿಕ ಆರೋಗ್ಯ ಮತ್ತೆಮತ್ತೆ ಏರುಪೇರಾಗುತ್ತಿದ್ದರೆ ತಜ್ಞ ಮನೋಚಿಕಿತ್ಸಕರ ಸಹಾಯ ಪಡೆಯಬಹುದು. ಮಕ್ಕಳು ಅಪರಿಚಿತರೊಡನೆ ಸುಲಭವಾಗಿ ತೆರೆದುಕೊಳ್ಳುವುದಿಲ್ಲ. ಹಾಗಾಗಿ ಪೋಷಕರಿಗೇ ಆಪ್ತಸಮಲೋಚಕರ ಸಹಾಯ ಹೆಚ್ಚಾಗಿ ಅಗತ್ಯವಿರುತ್ತದೆ.

ಪರೀಕ್ಷೆಯ ಗುಮ್ಮ

ಗಾರ್ಡನ್ ನ್ಯೂಫೀಲ್ಡ್ ಎನ್ನುವ ಕೆನಡಾದ ಸುಪ್ರಸಿದ್ಧ ಮನಶಾಸ್ತ್ರಜ್ಞ ಮತ್ತು ಮನೋಚಿಕಿತ್ಸಕ ಹೇಳುವಂತೆ ಮೌಲ್ಯಮಾಪನ ಮತ್ತು ಪರೀಕ್ಷೆಗಳು ಮಕ್ಕಳಲ್ಲಿ ಭಯವನ್ನು ಹುಟ್ಟಿಸುವುದರಿಂದ ಕಲಿಕೆಗೆ ಮಾರಕವಾಗುತ್ತದೆ. ಆದರೆ ಇದು ಇವತ್ತಿನ ಶಿಕ್ಷಣ ವ್ಯವಸ್ಥೆಯ ಅನಿವಾರ್ಯತೆಗಳು. ಕೊರೊನಾದ ದೀರ್ಘ ರಜೆಯ ನಂತರ ಇನ್ನೂ ಶಾಲಾ ವಾತಾವರಣಕ್ಕೆ ಹೊಂದಿಕೊಳ್ಳಲು ಕಷ್ಟಪಡುತ್ತಿರುವ ಮಕ್ಕಳ ಮೇಲೆ ಪೋಷಕರು ಪರೀಕ್ಷೆಯ ಗುಮ್ಮನನ್ನು ಈಗಲೇ ಹೇರಬಾರದು. ಪ್ರಾಥಮಿಕ ಶಾಲಾ ಮಕ್ಕಳ ಜೊತೆಗಂತೂ ಈ ವರ್ಷ ಪರೀಕ್ಷೆ ಅಂಕಗಳ ವಿಷಯದ ಚರ್ಚೆಯನ್ನು ಮಾಡಲೇಬಾರದು.





ಬನಾರಸ್ ಸೀರೆಗೆ ಆ್ಯಂಟಿಕ್ ಒಡವೆಯ ಸೊಬಗು

ರೇಷ್ಮಾ

ದೀಪಗಳ ಹಬ್ಬಕ್ಕೆ ರೇಷ್ಮೆ ಸೀರೆ ಉಟ್ಟರೆ ಸಂಭ್ರಮ ಕಳೆಗಟ್ಟಿದಂತೆ. ಅದರಲ್ಲೂ ಸಾಂಪ್ರದಾಯಿಕ ಬನಾರಸ್ ಸೀರೆ ಉಟ್ಟು, ಅದಕ್ಕೆ ಒಪ್ಪುವ ಚಿನ್ನದ ಒಡವೆಗಳನ್ನು ಧರಿಸಿದರೆ ಕೋವಿಡ್ ಕಹಿಯನ್ನು ಅರೆಗಳಿಗೆಯಾದರೂ ಮರೆಯಬಹುದು. ಉಟ್ಟಾಗ ನೀಟಾಗಿ, ಸುಂದರವಾಗಿ ಕಾಣುವ ಈ ಬನಾರಸ್ ಸೀರೆ ಕುರಿತ ಆಕರ್ಷಣೆ ಯಾವತ್ತೂ ಕುಂದುವಂಥದ್ದಲ್ಲ. ಆರು ಗಜದ ಈ ಸೀರೆ ಚಿನ್ನ ಹಾಗೂ ಬೆಳ್ಳಿ ಎಳೆಗಳಿಂದ ಕಂಗೊಳಿಸುವಂಥದ್ದು. ಬನಾರಸ್ ಸೀರೆಯಲ್ಲಿ ಕಥಾನ್ (ಶುದ್ಧ ರೇಷ್ಮೆ ಸೀರೆ), ಅರ್ಗಾಂಝಾ, ಜಾರ್ಜೆಟ್ ಬನಾರಸ್ ಸೀರೆ, ಜಂಗ್ಲಾ, ಕಟ್‌ವರ್ಕ್, ಟಿಶ್ಯೂ, ಬುಟಿದಾರ್.. ಹೀಗೆ ವಿವಿಧ ಬಗೆಯ ಸೀರೆಗಳಿವೆ.

ಮೊಘಲರು ಇದರ ಸಂಕೀರ್ಣ ನೇಯ್ಗೆ ಹಾಗೂ ವಿನ್ಯಾಸದ ಕರಕುಶಲತೆಯನ್ನು ಭಾರತಕ್ಕೆ ಪರಿಚಯಿಸಿದರು ಎನ್ನುತ್ತದೆ ಇತಿಹಾಸ. ವಾರಾಣಸಿಯಲ್ಲಿ ನೇಕಾರರ ಕೈಯಲ್ಲಿ ಅರಳುತ್ತಿದ್ದ ಸೀರೆಗಳಿಗೆ ಖ್ಯಾತ ವಿನ್ಯಾಸಕಾರರು ವಿವಿಧ ರೂಪ ನೀಡಿ ಜನಪ್ರಿಯಗೊಳಿಸಿದ್ದಾರೆ. ಈ ಸೀರೆಯ ಗಾಢ ರಂಗು, ಜರಿಯ ವಿನ್ಯಾಸದ ಒಡಲು, ಸೆರಗು ಮತ್ತು ಅಂಚು ಆಕರ್ಷಕ. ಸಾಂಪ್ರದಾಯಿಕ ಸೀರೆ ಬಹಳ ಭಾರ ಕೂಡ. ಎಷ್ಟೋ ಕುಟುಂಬಗಳಲ್ಲಿ ನೂರಾರು ವರ್ಷಗಳ ಹಿಂದಿನ ಬನಾರಸ್ ಸೀರೆಯನ್ನು ಇನ್ನೂ ಕೆಡದಂತೆ ಕಾಪಿಟ್ಟುಕೊಂಡು ಬರಲಾಗುತ್ತಿದೆ.

'ಬನಾರಸ್ ಸೀರೆ ಉಟ್ಟಾಗ ದೊಡ್ಡದಾಗಿ ಕಾಣುವ ಒಡವೆಗಳನ್ನು ಧರಿಸಬೇಕು. ಕಿವಿಯೋಲೆ, ಸರ, ಬಳೆ ಎಲ್ಲವೂ ಆಡಂಬರವಾಗಿ ಕಾಣುವಂತಿದ್ದರೆ ಈ ಸೀರೆಯ ಅಂದ ಇನ್ನಷ್ಟು ಹೆಚ್ಚುವುದರಲ್ಲಿ ಅನುಮಾನವಿಲ್ಲ' ಎನ್ನುತ್ತಾರೆ ಬೆಂಗಳೂರಿನ ಜಯನಗರದ ಅಂಗನಾ ಫ್ಯಾಷನ್ ವುಮೆನ್ ಬುಟಿಕ್‌ನ ಸುಪ್ರಿಯಾ ಸಂದೀಪ್. ❖

ಗರ್ಭಿಣಿಯರಲ್ಲಿ ಬಿ.ಪಿ



ಸ್ಪಂದನ

ಡಾ. ವೀಣಾ ಎಸ್. ಭಟ್

1. ನನಗೆ ಡೆಲಿವರಿ ಆಗುವ 20 ದಿನಗಳ ಮುಂಚೆ ಬಿ.ಪಿ 145/90 ಬಂದಿತ್ತು. ವೈದ್ಯರು ಲೆಬೆಟೆಲೋಲ್ ಮಾತ್ರೆ ತೆಗೆದುಕೊಳ್ಳುವುದಕ್ಕೆ ಹೇಳಿದ್ದರು. ಈಗ ಹೆರಿಗೆ ಆಗಿ 3 ತಿಂಗಳ ನಂತರ ಆಸ್ಪತ್ರೆಗೆ ಹೋಗಿ ಬಿ.ಪಿ ಚೆಕ್ ಮಾಡಿಸಿದರೆ 140/80 ಆಸುಪಾಸಿನಲ್ಲಿ ತೋರಿಸುತ್ತದೆ. ವೈದ್ಯರು ಮಾತ್ರೆ ಮುಂದುವರೆಸಲು ಹೇಳಿದ್ದಾರೆ. ಧ್ಯಾನ ಮತ್ತು ಪ್ರಾಣಾಯಾಮ ಮಾಡುತ್ತಲೇ ಇದ್ದೇನೆ. ಉಪ್ಪು ಕಡಿಮೆ ಮಾಡಿದ್ದೇನೆ. ಆಸ್ಪತ್ರೆಯಲ್ಲಿ ಟೆನ್ಷನ್ ಇಂದ ಬಿ.ಪಿ ಹೆಚ್ಚು ತೋರಿಸುತ್ತದೆಯೇ? ಬಿ.ಪಿ ಅನ್ನು ಕಡಿಮೆ ಮಾಡಲು ಸಲಹೆ ನೀಡಿ?

ಹೆಸರು, ಊರು ತಿಳಿಸಿಲ್ಲ

ಗರ್ಭಧಾರಣೆಯ ಕಾರಣದಿಂದ ಏರು ರಕ್ತದೊತ್ತಡ ಇದ್ದರೆ ಹೆರಿಗೆಯಾಗಿ 12 ವಾರದೊಳಗೆ ರಕ್ತದೊತ್ತಡ ಸಹಜ ಸ್ಥಿತಿಗೆ ಬರುತ್ತದೆ. ನಿಮಗೆ ಇನ್ನೂ ಏರು ರಕ್ತದೊತ್ತಡ ಇರುವುದರಿಂದ ನೀವೀಗಾಗಲೇ ಧ್ಯಾನ, ಪ್ರಾಣಾಯಾಮ ಮಾಡುತ್ತಿರುವುದನ್ನು ಯಾವ ಕಾರಣಕ್ಕೂ ಬಿಡಬೇಡಿ. ಉಪ್ಪನ್ನು ಕಡಿಮೆ ತಿನ್ನುವುದನ್ನು ಬಿಡಬೇಡಿ. ಪ್ರತಿ ಮನುಷ್ಯನಿಗೆ ದಿನಕ್ಕೆ ಪ್ರತಿದಿನ ಕೇವಲ 2.5 ರಿಂದ 5ಗ್ರಾಂ ಉಪ್ಪಿನ ಅವಶ್ಯಕತೆಯಿದ್ದರೂ ನಾವೆಲ್ಲ ತಿನ್ನುತ್ತಿರುವುದು ಸರಾಸರಿ 15ರಿಂದ 20 ಗ್ರಾಂನಷ್ಟು ಉಪ್ಪನ್ನು. ಇದರಿಂದ ಆರೋಗ್ಯ ಹದಗೆಡುತ್ತಿದೆ. ನಿಮಗೆ ಈಗಾಗಲೇ ಹೆರಿಗೆಯಾಗಿ 3 ತಿಂಗಳಾಗಿರುವುದರಿಂದ ನಿಮ್ಮ ವೈದ್ಯರ ಹತ್ತಿರ ಇನೊಮ್ಮೆ ಬಿ.ಪಿ. ತಪಾಸಣೆ ಮಾಡಿಸಿಕೊಂಡು ಸಲಹೆ, ಚಿಕಿತ್ಸೆ ಪಡೆಯಿರಿ. ಇನ್ನೂ ಏರು ರಕ್ತದೊತ್ತಡ ಮುಂದುವರೆದರೆ ಅದು ಬೇರೆ ಕಾರಣದಿಂದ ಎಂದು ಬೇರೆ ಬೇರೆ ಪರೀಕ್ಷೆಗಳನ್ನು ನಡೆಸಬೇಕಾಗುತ್ತದೆ. ಕೆಲವರಿಗೆ ಬಿಳಿಕೋಟಿನ ವೈದ್ಯರನ್ನು ನೋಡಿದ ತಕ್ಷಣ ಸ್ವಲ್ಪಮಟ್ಟಿಗೆ ಬಿ.ಪಿ ಹೆಚ್ಚಾದಂತೆ ಅನಿಸಿದರೂ ಅದು ಸ್ವಲ್ಪಹೊತ್ತಿನ ನಂತರ ಕಡಿಮೆಯಾಗುತ್ತದೆ. ನಿರಂತರವಾಗಿರುವುದಿಲ್ಲ. ನೀವು ಬಿ.ಪಿ ಮಾತ್ರೆ ನುಂಗುತ್ತಿದ್ದೀರೆ ಇಲ್ಲವೇ ಎಂದು ತಿಳಿಸಿಲ್ಲ. ಬಾಳೆಹಣ್ಣು, ಬೀಟ್ರೂಟ್, ವಿಟಮಿನ್ 'ಸಿ'ಯುಕ್ತ ನಿಂಬೆ, ಕಿತ್ತಳೆ, ನೆಲ್ಲಿಕಾಯಿ ಇವೆಲ್ಲಾ ಸಹಜವಾಗಿ ಸ್ವಲ್ಪಮಟ್ಟಿಗೆ ಬಿ.ಪಿ.ಯನ್ನು ನಿಯಂತ್ರಣದಲ್ಲಿಡುತ್ತವೆ. ಅವುಗಳನ್ನೆಲ್ಲ ದಿನನಿತ್ಯ ಬಳಸಿ. ಯಾವುದಕ್ಕೂ ವೈದ್ಯರ ಮೇಲ್ವಿಚಾರಣೆ ಇರಲೇಬೇಕು, ನಿರ್ಲಕ್ಷಿಸಬೇಡಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ದಕ್ಷಿಣ ಆಫ್ರಿಕಾ–ಶ್ರೀಲಂಕಾ ಮುಖಾಮುಖಿ


ಶಾರ್ಜಾ (ಪಿಟಿಐ): ಬ್ಲ್ಯಾಕ್ ಲೈವ್ಸ್ ಮ್ಯಾಟರ್‌ಗೆ ಸಂಬಂಧಿಸಿದ ವಿವಾದವನ್ನು ಸುಸೂತ್ರವಾಗಿ ನಿಭಾಯಿಸಿರುವ ದಕ್ಷಿಣ ಆಫ್ರಿಕಾ ತಂಡ ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಸೂಪರ್ 12ರ ಪಂದ್ಯದಲ್ಲಿ ಶನಿವಾರ ಶ್ರೀಲಂಕಾವನ್ನು ಎದುರಿಸಲಿದೆ.

ಟೂರ್ನಿಯಲ್ಲಿ ಈ ವರೆಗೆ ಉತ್ತಮ ಸಾಮರ್ಥ್ಯ ತೋರುತ್ತ ಬಂದಿರುವ ಉಭಯ ತಂಡಗಳ ಈ ಹಣಾಹಣಿ ಕುತೂಹಲ ಕೆರಳಿಸಿದೆ. ಬೌಲಿಂಗ್ ವಿಭಾಗವನ್ನು ಹೆಚ್ಚು ನೆಚ್ಚಿಕೊಂಡಿರುವ ಶ್ರೀಲಂಕಾ, ಎದುರಾಳಿ ತಂಡದ ಫಫ್ ಡು ಪ್ಲೆಸಿ, ರೀಜಾ ಹೆನ್ರಿಕ್ಸ್, ರಸಿ ವ್ಯಾನ್ ಡೆರ್ ಡುಸೆನ್, ಏಡನ್ ಮರ್ಕರಮ್, ಡೇವಿಡ್ ಮಿಲ್ಲರ್ ಮುಂತಾದವರನ್ನು ನಿಯಂತ್ರಿಸುವುದೇ ಎಂಬುದು ಈ ಪಂದ್ಯದ ಪ್ರಮುಖ ಅಂಶ. ಸ್ಪಿನ್ನ-ರ್‌ಗಳಾದ ವಾನಿಂದು ಹಸರಂಗ ಮತ್ತು ಮಹೀಶ್ ತೀಕ್ಷಣ ಅವರನ್ನು ಎಚ್ಚರದಿಂದ ಎದುರಿಸದೇ ಹೋದರೆ ದಕ್ಷಿಣ ಆಫ್ರಿಕಾ ಆಪತ್ತಿಗೆ ಸಿಲುಕಲಿದೆ.

ವೆಸ್ಟ್ ಇಂಡೀಸ್ ಎದುರಿನ ಪಂದ್ಯದಲ್ಲಿ ಮೂರು ವಿಕೆಟ್ ಉರುಳಿಸಿರುವ ಡ್ವೇನ್ ಪ್ರಿಟೋರಿಯಸ್ ಈಗ ಉತ್ತಮ ಲಯದಲ್ಲಿದ್ದಾರೆ ಇದು ದಕ್ಷಿಣ ಆಫ್ರಿಕಾ ತಂಡದಲ್ಲಿ ಭರವಸೆ ಮೂಡಿಸಿದೆ. ಪ್ರಿಟೋರಿಯಸ್‌ಗೆ ಬಲ ತುಂಬಲು ಅನುಭವಿಗಳಾದ ಕಗಿಸೊ ರಬಾಡ ಮತ್ತು ಆ್ಯನ್ರಿಚ್ ನಾರ್ಕಿಯಾ ಇದ್ದಾರೆ. ಕೇಶವ್ ಮಹಾರಾಜ್ ಮತ್ತು ತಬ್ರೇಜ್ ಶಂಸಿ ಅವರನ್ನು ಒಳಗೊಂಡ ಸ್ಪಿನ್ ವಿಭಾಗವೂ ತಂಡಕ್ಕೆ ಶಕ್ತಿ ತುಂಬಿದೆ.

ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಏಳು ವಿಕೆಟ್‌ಗಳಿಂದ ಸೋತಿರುವ ಶ್ರೀಲಂಕಾ ಗೆಲುವಿನ ಲಯಕ್ಕೆ ಮರಳಲು ಪ್ರಯತ್ನಿಸಲಿದೆ. ಚರಿತ್ ಅಸಲಂಕ, ವಿಕೆಟ್ ಕೀಪರ್ ಕುಶಾಲ್ ಪೆರೇರ, ಪಥುಮ್ ನಿಸಾಂಕ ಮತ್ತು ಅವಿಷ್ಕ ಫೆರ್ನಾಂಡೊ ಅವರ ಮೇಲೆ ತಂಡದ ನಿರೀಕ್ಷೆ ಇದೆ.

ಟ್ವೆಂಟಿ–20ಯಲ್ಲಿ ಮುಖಾಮುಖಿ



ಪುರುಷರ ಫ್ರಾಂಚೈಸಿಗೆ ಸಾರಾ ಕೋಚ್


ಸಾರಾ ಟೇಲರ್

ಅಬುಧಾಬಿ (ಪಿಟಿಐ): ಇಂಗ್ಲೆಂಡ್‌ನ ಮಾಜಿ ಕ್ರಿಕೆಟ್ ಆಟಗಾರ್ತಿ ಸಾರಾ ಟೇಲರ್ ಅವರು ಪುರುಷರ ಕ್ರಿಕೆಟ್ ಫ್ರಾಂಚೈಸಿಯ ಕೋಚ್ ಹುದ್ದೆಗೆ ನೇಮಕವಾದ ಮೊದಲ ಮಹಿಳೆಯಾಗಿದ್ದಾರೆ.

ಮುಂದಿನ ತಿಂಗಳು 19ರಿಂದ ನಡೆಯಲಿರುವ ಅಬುಧಾಬಿ ಟಿ10 ಲೀಗ್‌ನಲ್ಲಿ ಅಬುಧಾಬಿ ತಂಡಕ್ಕೆ ಅವರು ಸಹಾಯಕ ಕೋಚ್ ಆಗಿ ಕಾರ್ಯನಿರ್ವ-ಹಿಸಲಿದ್ದಾರೆ.

ಇಂಗ್ಲೆಂಡ್ ತಂಡದ ವಿಕೆಟ್‌ಕೀಪರ್ ಆಗಿದ್ದ ಸಾರಾ ಟೇಲರ್ 10 ಟೆಸ್ಟ್, 126 ಅಂತರರಾಷ್ಟ್ರೀಯ ಏಕದಿನ ಮತ್ತು 90 ಟ್ವೆಂಟಿ–20 ಪಂದ್ಯಗಳಲ್ಲಿ ಆಡಿದ್ದಾರೆ.

ಬಾಂಗ್ಲಾದೇಶಕ್ಕೆ ಸೋಲು; ಕೀರನ್ ಪೊಲಾರ್ಡ್ ಬಳಗದ ಸೆಮಿಫೈನಲ್ ಆಸೆ ಜೀವಂತ

ವೆಸ್ಟ್ ಇಂಡೀಸ್‌ಗೆ ರೋಚಕ ಜಯ

ಶಾರ್ಜಾ (ಎಎಫ್‌ಪಿ): ಸತತ ಎರಡು ಸೋಲಿನ ನಂತರ ಚೇತರಿಸಿಕೊಂಡ ವೆಸ್ಟ್ ಇಂಡೀಸ್ ತಂಡ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಶುಕ್ರವಾರ ರೋಚಕ ಜಯ ಸಾಧಿಸಿತು. ಗುಂಪು ಒಂದರ ಹಣಾಹಣಿಯಲ್ಲಿ ಬಾಂ-ಗ್ಲಾದೇಶವನ್ನು ಮೂರು ರನ್‌ಗಳಿಂದ ಮಣಿಸಿದ ಹಾಲಿ ಚಾಂಪಿಯನ್ನರು ಸೆಮಿಫೈನಲ್ ಆಸೆಯನ್ನು ಜೀವಂತವಾ-ಗಿರಿಸಿಕೊಂಡರು.

143 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಬಾಂಗ್ಲಾದೇಶ ಒಂದು ಹಂತದಲ್ಲಿ ಸುಲಭ ಜಯ ಸಾಧಿಸುವತ್ತ ಹೆಜ್ಜೆ ಹಾಕಿತ್ತು. ಆದರೆ ನಂತರ ವೆಸ್ಟ್ ಇಂಡೀಸ್ ಪ್ರಾಬಲ್ಯ ಮೆರೆಯಿತು. ಕೊನೆಯ ಓವರ್‌ನಲ್ಲಿ ಬಾಂಗ್ಲಾದೇಶದ ಗೆಲುವಿಗೆ 13 ರನ್ ಬೇಕಾಗಿತ್ತು. ಆದರೆ ಆ್ಯಂಡ್ರೆ ರಸೆಲ್ ಬಿಗಿ ದಾಳಿ ನಡೆಸಿ ನಿಯಂತ್ರಿಸಿದರು.

ಕೈ ಹಿಡಿದ ಪೂರನ್: ಕ್ರಿಸ್ ಗೇಲ್, ಎವಿನ್ ಲೂಯಿಸ್, ಶಿಮ್ರಾನ್ ಹೆಟ್ಮೆಯರ್ ಮತ್ತು ಆ್ಯಂಡ್ರೆ ರಸೆಲ್ ಮುಂತಾದ ದಿಗ್ಗಜರ ವೈಫಲ್ಯದಿಂದಾಗಿ ವೆಸ್ಟ್ ಇಂಡೀಸ್ ಕುಸಿತದ ಹಾದಿ ಹಿಡಿದಿತ್ತು. ಈ ಸಂದರ್ಭದಲ್ಲಿ ಕೈ ಹಿಡಿದವರು ನಿಕೋಲಸ್ ಪೂರನ್. 22 ಎಸೆತಗಳಲ್ಲಿ 40 ರನ್ ಗಳಿಸಿದ ಪೂರನ್ ಅವರ ಅಮೋಘ ಆಟದ ಬಲದಿಂದ ತಂಡಕ್ಕೆ ಸವಾಲಿನ ಮೊತ್ತ ಕಲೆ ಹಾಕಲು ಸಾಧ್ಯವಾಯಿತು.

ಟಾಸ್ ಗೆದ್ದ ಬಾಂಗ್ಲಾದೇಶ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಜೋಡಿ ಕ್ರಿಸ್ ಗೇಲ್ ಮತ್ತು ಎವಿನ್ ಲೂಯಿಸ್ ಅವರನ್ನು ಎರಡಂಕಿ ಮೊತ್ತ ತಲುಪುವ ಮೊದಲೇ ವಾಪಸ್ ಕಳುಹಿಸಿದ ಬೌಲರ್‌ಗಳು ನಾಯಕ ಮೊಹಮ್ಮದುಲ್ಲ ಅವರ ನಿರ್ಧಾರವನ್ನು ಸಮರ್ಥಿಸಿಕೊಂಡರು. ಮೂರನೇ ಕ್ರಮಾಂಕದ ಬ್ಯಾಟರ್ ರಾಸ್ಟನ್ ಚೇಸ್ ಟ್ವೆಂಟಿ–20 ಪದಾರ್ಪಣೆ ಪಂದ್ಯದಲ್ಲಿ ತಾಳ್ಮೆಯಿಂದ ಬ್ಯಾಟ್ ಬೀಸಿ ತಂಡಕ್ಕೆ ಆಸರೆಯಾಗಲು ಪ್ರಯತ್ನಿಸಿದರು. ಆದರೆ ಮತ್ತೊಂದು ತುದಿಯಲ್ಲಿ ಶಿಮ್ರಾನ್ ಹೆಟ್ಮೆಯರ್ ಕೂಡ ಔಟಾದಾಗ ತಂಡ ತೀವ್ರ ಸಂಕಷ್ಟಕ್ಕೆ ಸಿಲುಕಿತು. ಚೇಸ್ ಜೊತೆಗೂಡಿದ ಕಿರನ್ ಪೊಲಾರ್ಡ್ ಸ್ವಲ್ಪ ಹೊತ್ತು ಕ್ರೀಸ್‌ನಲ್ಲಿ ಉಳಿದರು. ನಿಕೋಲಸ್ ಪೂರನ್ ಐದನೇ ವಿಕೆಟ್‌ಗೆ 57 ರನ್‌ಗಳ ಜೊತೆಯಾಟದ ಮೂಲಕ ಆಸರೆಯಾದರು. ಮಾಜಿ ನಾಯಕ ಜೇಸನ್ ಹೋಲ್ಡರ್ ಕೊನೆಯ ಓವರ್‌ನಲ್ಲಿ ಎರಡು ಸಿಕ್ಸರ್ ಸಿಡಿಸಿ ಐದು ಎಸೆಗಳಲ್ಲಿ 15 ರನ್ ಗಳಿಸಿದರು.


ನಿಕೋಲಸ್ ಪೂರನ್ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ವೆಸ್ಟ್ ಇಂಡೀಸ್ 7ಕ್ಕೆ 142 (20 ಓವರ್)
ಗೇಲ್ ಬಿ ಮೆಹದಿ 4 (10 ಎ), ಎವಿನ್ ಸಿ ಮುಷ್ಫಿಕುರ್ ಬಿ ಮುಸ್ತಫಿಜುರ್ 6 (9 ಎ, 4x1), ಚೇಸ್ ಬಿ ಷರೀಫುಲ್ 39 (46 ಎ, 4x2), ಹೆಟ್ಮೆಯರ್ ಸಿ ಸೌಮ್ಯ ಬಿ ಮೆಹದಿ 9 (7 ಎ, 4x1), ಪೊಲಾರ್ಡ್ ಔಟಾಗದೆ 14 (18 ಎ, 6x1), ರಸೆಲ್ ರನೌಟ್ (ತಸ್ಕಿನ್) 0 (0 ಎ), ಪೂರನ್ ಸಿ ನಯೀಮ್ ಬಿ ಶೊರಿಫುಲ್ 40 (22 ಎ, 4x1 , 6x4), ಬ್ರಾವೊ ಸಿ ಸೌಮ್ಯ ಬಿ ಮುಸ್ತಫಿಜುರ್ 1 (3 ಎ), ಹೋಲ್ಡರ್ ಔಟಾಗದೆ 15 (5 ಎ, 6x2)
ಇತರೆ (ಬೈ 1, ಲೆಗ್‌ಬೈ 6, ವೈಡ್ 7) 14
ವಿಕೆಟ್ ಪತನ: 1-12 (ಎವಿನ್ ಲೂಯಿಸ್, 2.6), 2-18 (ಕ್ರಿಸ್ ಗೇಲ್, 4.2), 3-32 (ಶಿಮ್ರಾನ್ ಹೆಟ್ಮೆಯರ್, 6.4), 4-62 (ಆ್ಯಂಡ್ರೆ ರಸೆಲ್, 12.4), 5-119 (ನಿಲೋಲಸ್ ಪೂರನ್, 18.1), 6-119 (ರಾಸ್ಟನ್ ಚೇಸ್, 18.2), 7-123 (ಡ್ವೇನ್ ಬ್ರಾವೊ, 19.1)
ಬೌಲಿಂಗ್: ಮೆಹದಿ ಹಸನ್ 4-0-27-2, ತಸ್ಕಿನ್ ಅಹಮ್ಮದ್ 4-0-17-0, ಮುಸ್ತಫಿಜುರ್ ರಹಮಾನ್ 4-0-43-2, ಷರೀಫುಲ್ ಇಸ್ಲಾಮ್ 4-0-20-2, ಶಕೀಬ್ ಅಲ್ ಹಸನ್ 4-0-28-0

ಬಾಂಗ್ಲಾದೇಶ 5ಕ್ಕೆ 139 (20 ಓವರ್)
ನಯೀಮ್ ಬಿ ಹೋಲ್ಡರ್ 17 (19 ಎ, 4x2), ಶಕೀಬ್ ಸಿ ಹೋಲ್ಡರ್ ಬಿ ರಸೆಲ್ 9 (12 ಎ, 4x1), ಲಿಟನ್ ಸಿ ಹೋಲ್ಡರ್ ಬಿ ಬ್ರಾವೊ 44 (43 ಎ, 4x4), ಸೌಮ್ಯ ಸಿ ಗೇಲ್ ಬಿ ಹೊಸೇನ್ 17 (13 ಎ, 4x2) ಮುಷ್ಫಿಕುರ್ ಬಿ ರಾಂಪಾಲ್ 8 (7 ಎ, 4x1), ಮೊಹಮ್ಮದುಲ್ಲ ಔಟಾಗದೆ 31 (24 ಎ, 4x2, 6x1), ಅಫೀಫ್ ಔಟಾಗದೆ 2 (2 ಎ)
ಇತರೆ (ಬೈ 2, ಲೆಗ್‌ಬೈ 1, ವೈಡ್ 8) 11
ವಿಕೆಟ್ ಪತನ: 1-21 (ಶಕೀಬ್ ಅಲ್ ಹಸನ್, 4.3), 2-29 (ಮೊಹಮ್ಮದ್ ನಯೀಮ್, 5.4), 3-60 (ಸೌಮ್ಯ ಸರ್ಕಾರ್, 10.4), 4-90 (ಮುಷ್ಫಿಕುರ್ ರಹೀಮ್, 13.3), 5-130 (ಲಿಟನ್ ದಾಸ್, 18.6)
ಬೌಲಿಂಗ್: ರವಿ ರಾಂಪಾಲ್ 4-0-25-1, ಜೇಸನ್ ಹೋಲ್ಡರ್ 4-0-22-1, ಆ್ಯಂಡ್ರೆ ರಸೆಲ್ 4-0-29-1, ಅಕೀಲ್ ಹೊಸೇನ್ 4-0-24-1, ಡ್ವೇನ್ ಬ್ರಾವೊ 4-0-36-1

ಫಲಿತಾಂಶ: ವೆಸ್ಟ್ ಇಂಡೀಸ್‌ಗೆ 3 ರನ್‌ಗಳ ಜಯ.

ಇಂಗ್ಲೆಂಡ್‌ಗೆ ಆಸ್ಟ್ರೇಲಿಯಾ ಸವಾಲು

ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿ ಮಾರ್ಗನ್–ಆ್ಯರನ್ ಫಿಂಚ್ ಬಳಗ

ದುಬೈ (ಪಿಟಿಐ): ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡಗಳಲ್ಲಿ ಒಂದು ಎಂದೇ ಪರಿಗಣಿಸಲಾಗಿರುವ ಇಂಗ್ಲೆಂಡ್‌ಗೆ ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಸೂಪರ್ 12 ಹಂತದಲ್ಲಿ ಈಗ ಭಾರಿ ಸವಾಲು ಎದುರಾಗಿದೆ. ಶನಿವಾರ ನಡೆಯಲಿರುವ ಪಂದ್ಯದಲ್ಲಿ ಏಯಾನ್ ಮಾರ್ಗನ್ ಬಳಗ ಆಸ್ಟ್ರೇಲಿಯಾವನ್ನು ಎದುರಿಸಲಿದೆ.

ಮೊದಲ ಎರಡೂ ಪಂದ್ಯಗಳಲ್ಲಿ ಜಯ ಗಳಿಸಿರುವ ಉಭಯ ತಂಡಗಳು ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿವೆ. ಈ ಪಂದ್ಯದಲ್ಲಿ ಗೆಲ್ಲುವ ಮೂಲಕ ಸೆಮಿಫೈನಲ್ ಹಾದಿ ಸುಗಮವಾಗಿಸುವ ಹಂಬಲವೂ ಈ ತಂಡಗಳಿಗೆ ಇದೆ.

ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾದ ಬ್ಯಾಟಿಂಗ್ ವಿಭಾಗ ನಿರೀಕ್ಷಿತ ಮಟ್ಟದಲ್ಲಿ ಆಡಿರಲಿಲ್ಲ. ಆದರೆ ನಂತರ ಚೇತರಿಸಿಕೊಂಡಿತ್ತು. ಡೇವಿಡ್ ವಾರ್ನರ್ ಮತ್ತು ನಾಯಕ ಆ್ಯರನ್ ಫಿಂಚ್ ಲಯಕ್ಕೆ ಮರಳಿರುವುದರಿಂದ ತಂಡಕ್ಕೆ ಆನೆಬಲ ಬಂದಂತಾಗಿದೆ.

ಬೌಲಿಂಗ್ ವಿಭಾಗದ ಮೇಲೆ ಆಸ್ಟ್ರೇಲಿಯಾದ ಹೆಚ್ಚು ಭರವಸೆ ಇರಿಸಿಕೊಂಡಿದೆ. ವೇಗಿಗಳಾದ ಜೋಶ್ ಹ್ಯಾಜಲ್‌ವುಡ್, ಮಿಷೆಲ್ ಸ್ಟಾರ್ಕ್ ಮತ್ತು ಪ್ಯಾಟ್ ಕಮಿನ್ಸ್ ಅವರಿಗೆ ಲೆಗ್ ಸ್ಪಿನ್ನರ್ ಆ್ಯಡಂ ಜಂಪಾ ಅವರಿಂದ ಉತ್ತಮ ಬೆಂಬಲ ಲಭಿಸುತ್ತಿದೆ. ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಮಾರ್ಕಸ್ ಸ್ಟೋಯಿನಿಸ್ ಅವರ ಬೌಲಿಂಗ್ ಪರಿಣಾಮ ಬೀರದೇ ಇರುವುದೊಂದೇ ತಂಡದ ಆತಂಕ.


ಇಂಗ್ಲೆಂಡ್ ಮೊದಲೆರಡು ಪಂದ್ಯಗಳಲ್ಲಿ ಭರ್ಜರಿ ಜಯ ಗಳಿಸಿ ಮೂರನೇ ಪಂದ್ಯಕ್ಕೆ ಅಣಿಯಾಗಿದೆ. ಇದು ಆಸ್ಟ್ರೇಲಿಯಾ ಪಾಳಯದಲ್ಲಿ ಸ್ವಲ್ಪ ತಳಮಳ ಉಂಟುಮಾಡಿದೆ. ತಂಡದ ಬೌಲಿಂಗ್ ಆರಂಭಿಸುವ ಜವಾಬ್ದಾರಿಯ ಆಫ್ ಸ್ಪಿನ್ನರ್ ಮೋಯಿನ್ ಅಲಿ ಅವರಿಗೆ ನೀಡಲಾಗಿದೆ. ಎರಡೂ ಪಂದ್ಯಗಳಲ್ಲಿ ಅವರು ಇದನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಡೆತ್ ಓವರ್‌ಗಳಲ್ಲಿ ಟೈಮಲ್ ಮಿಲ್ಸ್ ಪರಿಣಾಮ ಬೀರುತ್ತಿದ್ದಾರೆ.


ಏಯಾನ್ ಮಾರ್ಗನ್ –ಎಎಫ್‌ಪಿ ಚಿತ್ರ


ಆ್ಯರನ್ ಫಿಂಚ್– ರಾಯಿಟರ್ಸ್ ಚಿತ್ರ

ಟ್ವೆಂಟಿ–20 ರ‍್ಯಾಂಕಿಂಗ್

1 ಇಂಗ್ಲೆಂಡ್ | 6 ಆಸ್ಟ್ರೇಲಿಯಾ



ಟ್ವೆಂಟಿ–20 ವಿಶ್ವಕಪ್‌ನಲ್ಲಿ ಬಲಾಬಲ

	ಪಂದ್ಯ	ಜಯ	ಸೋಲು
ಆಸ್ಟ್ರೇಲಿಯಾ	31	18	13
ಇಂಗ್ಲೆಂಡ್	34	17	16

1 ಫಲಿತಾಂಶವಿಲ್ಲ

ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಪಾಕ್ ತಂಡಕ್ಕೆ ಮೂರನೇ ಗೆಲುವು

ಅಫ್ಗನ್ ದಿಟ್ಟ ಹೋರಾಟಕ್ಕೆ ಸಿಗದ ಜಯ; ಬಾಬರ್ ಆಜಂ ಅರ್ಧಶತಕ

ದುಬೈ: ಬಾಬರ್ ಆಜಂ ತಾಳ್ಮೆಯ ಅರ್ಧಶತಕದ ನೆರವಿನಿಂದ ಪಾಕಿಸ್ತಾನ ತಂಡವು ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೂಪರ್ 12ರಲ್ಲಿ ಮೂರನೇ ಜಯ ಸಾಧಿಸಿತು. ಇದರೊಂದಿಗೆ ಸೆಮಿಫೈನಲ್ ಪ್ರವೇಶವನ್ನು ಬಹುತೇಕ ಖಚಿತಪಡಿಸಿ-ಕೊಂಡಿದೆ.

ಶುಕ್ರವಾರ ನಡೆದ ಸೂಪರ್ 12ರ ಹಂತದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಅಫ್ಗಾನಿಸ್ತಾನ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 147 ರನ್ ಗಳಿಸಿತು. ಅದಕ್ಕುತ್ತರವಾಗಿ ಪಾಕ್ ತಂಡವು 19 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 148 ರನ್ ಗಳಿಸಿತು. 5 ವಿಕೆಟ್‌ಗಳಿಂದ ಗೆದ್ದಿತು.

ಅಫ್ಗನ್ ತಂಡದ ಅನುಭವಿ ರಶೀದ್ ಖಾನ್ (2 ವಿಕೆಟ್) ಮತ್ತು ಬೌಲಿಂಗ್ ಪಡೆಯ ಶಿಸ್ತಿನ ದಾಳಿಯಿಂದಾಗಿ ಪಾಕ್ ತಂಡವು ಎಚ್ಚರಿಕೆಯಿಂದ ಆಡಬೇಕಾಯಿತು. ಮೂರನೇ ಓವರ್‌ನಲ್ಲಿ ರಿಜ್ವಾನ್ ಔಟಾದರು. ಬಾಬರ್ ಮತ್ತು ಫಕರ್ ಜಮಾನ್ ಸೇರಿ ಎರಡನೇ ವಿಕೆಟ್ ಜೊತೆಯಾಟದಲ್ಲಿ 63 ರನ್ ಸೇರಿಸಿದರು. 12ನೇ ಓವರ್‌ನಲ್ಲಿ ಮೊಹಮ್ಮದ್ ನಬಿ ಎಸೆತದಲ್ಲಿ ಜಮಾನ್ ಕ್ಲೀನ್ ಬೌಲ್ಡ್ ಆದರು. ಆದರೆ, ಬಾಬರ್ ಆಟ ಮುಂದುವರಿಸಿದರು. ಹಫೀಜ್ ಹೆಚ್ಚು ಹೊತ್ತು ನಿಲ್ಲಲಿಲ್ಲ. ಬಾಬರ್ ಜೊತೆಗೂಡಿದ ಶೋಯಬ್ ಮಲಿಕ್ ಇನಿಂಗ್ಸ್‌ಗೆ ಸ್ಥಿರತೆ ಒದಗಿಸುವ ಪ್ರಯತ್ನ ಮಾಡಿದರು.

ಆದರೆ 17 ಮತ್ತು 18ನೇ ಓವರ್‌ನಲ್ಲಿ ಕ್ರಮವಾಗಿ ಬಾಬರ್ ಮತ್ತು ಶೋಯಬ್ ಔಟಾದರು. ಗೆಲುವಿಗಾಗಿ ಕೊನೆಯ ಎರಡು ಓವರ್‌ಗಳಲ್ಲಿ ಪಾಕ್ ತಂಡಕ್ಕೆ 24 ರನ್‌ಗಳ ಅಗತ್ಯವಿತ್ತು. 19ನೇ ಓವರ್‌ನಲ್ಲಿ ಹೆಚ್ಚು ಏರಿಳಿತಗಳಿಗೆ ಆಸ್ಪದ ಕೊಡದ ಆಸಿಫ್ ಅಲಿ ನಾಲ್ಕು ಸಿಕ್ಸರ್‌ಗಳನ್ನು ಸಿಡಿಸಿ ತಂಡದ ಜಯಕ್ಕೆ ಹಾದಿ ತೋರಿದರು.

ಅವರು ಕೇವಲ ಏಳು ಎಸೆತಗಳಲ್ಲಿ 25 ರನ್ ಗಳಿಸಿದರು.

ಮಿಂಚಿದ ನಬಿ, ನೈಬ್: ಪಾಕ್ ತಂಡದ ಬೌಲಿಂಗ್ ಪಡೆಯು ಅಫ್ಗನ್ ತಂಡಕ್ಕೆ ಆರಂಭದಲ್ಲಿಯೇ ಪೆಟ್ಟುಕೊಟ್ಟಿತು. ಇಮದ್ ವಾಸೀಂ, ಶಹೀನ್ ಅಫ್ರಿದಿ, ಹಸನ್ ಅಲಿ, ಹ್ಯಾರಿಸ್ ರವೂಫ್ ಅವರ ಬೌಲಿಂಗ್ ಮುಂದೆ ಮಧ್ಯಮ ಕ್ರಮಾಂಕವೂ ಕುಸಿಯಿತು. 76 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡ ತಂಡವು ಬೇಗನೆ ಕುಸಿಯುವ ಆತಂಕ ಮೂಡಿತ್ತು. ಆದರೆ, 13ನೇ ಓವರ್‌ನಲ್ಲಿ ಜೊತೆಗೂಡಿದ ನಾಯಕ ನಬಿ (35;32ಎ, 5ಬೌಂಡರಿ) ಮತ್ತು ನೈಬ್ (ಔಟಾಗದೆ 35; 25ಎ, 4ಬೌಂ, 1ಸಿ) ಇನಿಂಗ್ಸ್‌ನ ಚಿತ್ರಣವನ್ನೇ ಬದಲಿಸಿಬಿ-ಟ್ಟರು. ಮುರಿಯದ ಏಳನೇ ವಿಕೆಟ್ ಜೊತೆಯಾಟದಲ್ಲಿ 71 ರನ್‌ಗಳನ್ನು ಕಲೆಹಾಕಿದರು. ಈ ರನ್‌ಗಳು ಬಂದಿದ್ದು ಕೊನೆಯ 7 ಓವರ್‌ಗಳಲ್ಲಿ ಎಂಬುದು ಗಮನಾರ್ಹ.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 20 ಓವರ್‌ಗಳಲ್ಲಿ 6ಕ್ಕೆ 147 (ರೆಹಮಾನುಲ್ಲಾ ಗುರ್ಬಾಜ್ 10, ಅಸ್ಗರ್ ಅಫ್ಗನ್ 10, ಕರೀಮ್ ಜನತ್ 15, ನಜೀಬುಲ್ಲಾ ಜದ್ರಾನ್ 22, ಮೊಹಮ್ಮದ್ ನಬಿ ಔಟಾಗದೆ 35, ಗುಲ್ಬದೀನ್ ನೈಬ್ ಔಟಾಗದೆ 35, ಇಮದ್ ವಾಸೀಂ 25ಕ್ಕೆ2) ಪಾಕಿಸ್ತಾನ: 19 ಓವರ್‌ಗಳಲ್ಲಿ 5ಕ್ಕೆ 148 (ಬಾಬರ್ ಆಜಂ 51, ಫಕರ್ ಜಮಾನ್ 30, ಶೋಯಬ್ ಮಲಿಕ್ 19, ಆಸಿಫ್ ಅಲಿ ಔಟಾಗದೆ 25; ಮುಜೀಬ್ ಉರ್ ರೆಹಮಾನ್ 14ಕ್ಕೆ 1, ಮೊಹಮ್ಮದ್ ನಬಿ 36ಕ್ಕೆ 1, ನವೀನ್ ಉಲ್ ಹಕ್ 22ಕ್ಕೆ 1, ರಶೀದ್ ಖಾನ್ 26ಕ್ಕೆ 2).

ಫಲಿತಾಂಶ: ಪಾಕಿಸ್ತಾನ ತಂಡಕ್ಕೆ 5 ವಿಕೆಟ್‌ಗಳ ಜಯ.


ಪಾಕಿಸ್ತಾನದ ಆಸಿಫ್ ಅಲಿ ಬ್ಯಾಟಿಂಗ್– ಪಿಟಿಐ ಚಿತ್ರ

ರಾಷ್ಟ್ರೀಯ ಈಜು ಚಾಪಿಯನ್‌ಷಿಪ್: ದಾಖಲೆಯೊಂದಿಗೆ ಎರಡು ಚಿನ್ನ ಗೆದ್ದ ಶ್ರೀಹರಿ ನಟರಾಜ್

ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ಕರ್ನಾಟಕ ತಂಡ

ಬೆಂಗಳೂರು: ಕರ್ನಾಟಕದ ಈಜುಪಟುಗಳು ಇಲ್ಲಿಯ ಬಸವನಗುಡಿ ಈಜು ಕೇಂದ್ರದಲ್ಲಿ ಶುಕ್ರವಾರ ಮುಕ್ತಾಯಗೊಂಡ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಚಾಂಪಿಯನ್ ಪ್ರಶಸ್ತಿ ಗೆದ್ದರು.

ಈಜು ವಿಭಾಗದಲ್ಲಿ ರಾಜ್ಯದ ಪುರುಷರ ತಂಡವು 119 ಪಾಯಿಂಟ್ಸ್ ಕಲೆಹಾಕಿದರೆ, ಮಹಿಳಾ ತಂಡವು 77 ಪಾಯಿಂಟ್ಸ್ ಸಂಗ್ರಹಿಸಿತು. ಕರ್ನಾಟಕದ ಶ್ರೀಹರಿ ನಟರಾಜ್ (ಐದು ಚಿನ್ನ, ಮೂರು ದಾಖಲೆ) ಶ್ರೇಷ್ಠ ಈಜುಪಟು ಎನಿಸಿಕೊಂಡರೆ, ಮಹಿಳೆಯರ ವಿಭಾಗದಲ್ಲಿ ಮಹಾರಾಷ್ಟ್ರದ ಅಪೇಕ್ಷಾ ಫರ್ನಾಂಡಿಸ್ (ಮೂರು ಚಿನ್ನ, ಎರಡು ಬೆಳ್ಳಿ) ಅವರಿಗೆ ಈ ಗೌರವ ಒಲಿಯಿತು.

ಒಟ್ಟಾರೆ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ 300 ಪಾಯಿಂಟ್ಸ್ ಕಲೆಹಾಕಿತು. ಒಟ್ಟು 36 ಪದಕಗಳು (17 ಚಿನ್ನ, 10 ಬೆಳ್ಳಿ, 9 ಕಂಚು) ತಂಡದ ಪಾಲಾದವು. ಈ ಪಟ್ಟಿಯಲ್ಲಿ ಮಹಾರಾಷ್ಟ್ರ (21 ಪದಕ) ಎರಡನೇ ಸ್ಥಾನ ಗಳಿಸಿತು. ಪುರುಷರ ಡೈವಿಂಗ್‌ನಲ್ಲಿ ಎಸ್‌.ಎಸ್‌.ಬಿ.ಸಿ. ಹಾಗೂ ಮಹಿಳಾ ವಿಭಾಗದಲ್ಲಿ ಆರ್‌.ಎಸ್‌.ಪಿ.ಬಿ. ಚಾಂಪಿಯನ್ ಆಗಿ ಹೊರಹೊಮ್ಮಿದವು.

ಪುರುಷರ ವಾಟರ್‌ಪೋಲೊದಲ್ಲಿ ಆರ್‌.ಎಸ್‌.ಪಿ.ಬಿ. ಮತ್ತು ಮಹಿಳೆಯರ ವಿಭಾಗದಲ್ಲಿ ಕೇರಳ ತಂಡಗಳು ಪ್ರಶಸ್ತಿ ಗೆದ್ದವು. ಚಾಂಪಿಯನ್‌ಷಿಪ್‌ನ ನಾಲ್ಕನೇ ಹಾಗೂ ಕೊನೆಯ ದಿನ ಶ್ರೀಹರಿ ನಟರಾಜ್ 200 ಮೀ. ಫ್ರೀಸ್ಟೈಲ್‌ನಲ್ಲಿ ಮತ್ತೊಂದು ದಾಖಲೆ ಬರೆದರು. ಪೊಲೀಸ್ ತಂಡದ ಸಜನ್ ಪ್ರಕಾಶ್ 100 ಮೀ. ಬಟರ್‌ಫ್ಲೈನಲ್ಲಿ ತಮ್ಮದೇ ದಾಖಲೆ ಉತ್ತಮಪಡಿಸಿಕೊಂಡರು.

ಭಾರತ ತಂಡ ಪ್ರಕಟ: ಅಬುಧಾಬಿಯಲ್ಲಿ ನಡೆಯಲಿರುವ ವಿಶ್ವ ಶಾರ್ಟ್‌ಕೋರ್ಸ್ ಚಾಂಪಿಯನ್‌ಷಿಪ್‌ಗೆ ಇದೇ ವೇಳೆ ಭಾರತ ತಂಡವನ್ನು ಭಾರತ ಈಜು ಫೆಡರೇಷನ್ (ಎಸ್‌ಎಫ್‌ಐ) ಪ್ರಕಟಿಸಿತು. ಶ್ರೀಹರಿ ನಟರಾಜ್ ಮತ್ತು ಸಜನ್ ಪ್ರಕಾಶ್ ಅವರು 'ಎ' ಅರ್ಹತೆಯೊಂದಿಗೆ ಸ್ಥಾನ ಗಳಿಸಿದರೆ, ಕುಶಾಗ್ರ ರಾವತ್ 'ಬಿ' ಅರ್ಹತೆಯೊಂದಿಗೆ ಸ್ಥಾನ ಪಡೆದರು. ರಿಧಿಮಾ ವೀರೇಂದ್ರಕುಮಾರ್ ಅವರು ಗರಿಷ್ಠ ಫಿನಾ ಪಾಯಿಂಟ್ಸ್ ಗಳಿಸಿದ ಆಧಾರದ ಮೇಲೆ ತಂಡಕ್ಕೆ ಆಯ್ಕೆಯಾದರು.

ನಾಲ್ಕನೇ ಹಾಗೂ ಕೊನೆಯ ದಿನದ ಫಲಿತಾಂಶಗಳು: **ಪುರುಷರು:** 200 ಮೀ. ಫ್ರೀಸ್ಟೈಲ್: ಶ್ರೀಹರಿ ನಟರಾಜ್ (ಕರ್ನಾಟಕ)–1, ಕಾಲ: 1:49.78 (ನೂತನ ದಾಖಲೆ: ಈ ಹಿಂದಿನ ದಾಖಲೆ: ಸಜನ್ ಪ್ರಕಾಶ್; 1:50.35), ಕುಶಾಗ್ರ ರಾವತ್ (ದೆಹಲಿ)–2, ತನಿಶ್ ಜಾರ್ಜ್ ಮ್ಯಾಥ್ಯು (ಕರ್ನಾಟಕ)–3. 200 ಮೀ. ಬ್ಯಾಕ್‌ಸ್ಟ್ರೋಕ್: ಶ್ರೀಹರಿ ನಟರಾಜ್ (ಕರ್ನಾಟಕ)–1, ಕಾಲ: 2:04.20, ಉತ್ಕರ್ಷ್ ಪಾಟೀಲ್ (ಕರ್ನಾಟಕ)–2, ಸಿದ್ಧಾಂತ್ ಸೆಜ್ವಾಲ್ (ದೆಹಲಿ)–3. 100 ಮೀ. ಬ್ಯಾಕ್‌ಸ್ಟ್ರೋಕ್: ಲೋಹಿತ್ ಎಂ. (ಆರ್‌.ಎಸ್‌.ಪಿ.ಬಿ)–1, ಧನುಷ್ ಎಸ್. (ತಮಿಳುನಾಡು)–2, ಅರುಣ್ ಎಸ್. (ಎಸ್‌.ಎಸ್‌.ಬಿ.ಸಿ)–3. 100 ಮೀ. ಬಟರ್‌ಫ್ಲೈ: ಸಜನ್ ಪ್ರಕಾಶ್ (ಪೊಲೀಸ್)–1, ಕಾಲ: 53.24 (ನೂತನ ದಾಖಲೆ: ಈ ಹಿಂದಿನ ದಾಖಲೆ ಸಜನ್: 53.46), ಮಿಹಿರ್ ಅಂಬ್ರೆ (ಮಹಾರಾಷ್ಟ್ರ)–2, ಆದಿತ್ಯ ಡಿ. (ತಮಿಳುನಾಡು)–3. 400 ಮೀ. ಮೆಡ್ಲೆ: ಶಾನ್ ಗಂಗೂಲಿ (ಕರ್ನಾಟಕ)–1, ಕಾಲ: 4:30.52, ಶಿವ ಎಸ್. (ಕರ್ನಾಟಕ)–2, ಸಾಯಿ ನಿಹಾರ್ ಬಿಕ್ಕಿನಾ (ತೆಲಂಗಾಣ)–3.

ಮಹಿಳೆಯರು: 200 ಮೀ. ಫ್ರೀಸ್ಟೈಲ್: ಶಿವಾಂಗಿ ಶರ್ಮಾ (ಅಸ್ಸಾಂ)–1, ಕಾಲ: 2:07.10, ಶಿವಾನಿ ಕಟಾರಿಯಾ (ಹರಿಯಾಣ)–2, ಅನ್ಯಾ ವಾಲಾ (ಮಹಾರಾಷ್ಟ್ರ)–3. 200 ಮೀ. ಬ್ಯಾಕ್‌ಸ್ಟ್ರೋಕ್: ರಿಧಿಮಾ ವೀರೇಂದ್ರ ಕುಮಾರ್ (ಕರ್ನಾಟಕ)–1, ಕಾಲ: 2:21.58, ಸೌಬ್ರಿತಿ ಮಂಡಲ್ (ಬಂಗಾಳ)–2, ಶ್ರುಂಗಿ ರಾಜೇಶ್ ಬಾಂದೇಕರ್ (ಗೋವಾ)–3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಚಾಹತ್ ಅರೋರಾ (ಪಂಜಾಬ್)–1, ಕಾಲ: 1:17.01, ಹರ್ಷಿತಾ ಜಯರಾಮ್ (ಆರ್‌.ಎಸ್‌.ಪಿ.ಬಿ)–2, ಲಿನೇಶಾ ಎ.ಕೆ. (ಕರ್ನಾಟಕ)–3. 100 ಮೀ. ಬಟರ್‌ಫ್ಲೈ: ಅಪೇಕ್ಷಾ ಫರ್ನಾಂಡಿಸ್ (ಮಹಾರಾಷ್ಟ್ರ)–1, ಕಾಲ: 1:03.38, ಆಸ್ಥಾ ಚೌಧರಿ (ಅಸ್ಸಾಂ)–2, ದಿವ್ಯಾ ಸತೀಜಾ (ಹರಿಯಾಣ)–3. 400 ಮೀ. ಮೆಡ್ಲೆ: ರಿಚಾ ಶರ್ಮಾ (ಪೊಲೀಸ್)–1, ಕಾಲ: 5:14.69, ಕನ್ಯಾ ನಯ್ಯರ್ (ಮಧ್ಯಪ್ರದೇಶ)–2, ಶಕ್ತಿ ಬಾಲಕೃಷ್ಣನ್–3.

ಪ್ರೀಕ್ವಾರ್ಟರ್‌ಗೆ ಆಕಾಶ್, ಸಂಗ್ವಾನ್

ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್: ಹಿಂದೆ ಸರಿದ ವರಿಂದರ್


ಭಾರತದ ಆಕಾಶ್ ಸಂಗ್ವಾನ್ (ಬಲ) ಹಾಗೂ ಜರ್ಮನಿಯ ಡೇನಿಯಲ್ ಕ್ರೊಟರ್ ನಡುವಣ ಸೆಣಸಾಟ– ಪಿಟಿಐ ಚಿತ್ರ

ಬೆಲ್‌ಗ್ರೇಡ್, ಸರ್ಬಿಯಾ (ಪಿಟಿಐ): ಭಾರತದ ಆಕಾಶ್ ಕುಮಾರ್ ಹಾಗೂ ಆಕಾಶ್ ಸಂಗ್ವಾನ್ ಅವರು ಎಐಬಿಎ ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರೀಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಇದರೊಂದಿಗೆ ದೇಶದ ಬಾಕ್ಸರ್‌ಗಳ ಅದ್ಭುತ ಲಯ ಮುಂದುವರಿದಿದೆ.

54 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ ಆಕಾಶ್ ಕುಮಾರ್ ಅವರಿಗೆ ವಾಕ್‌ಓವರ್ ಸಿಕ್ಕಿತು. ಶುಕ್ರವಾರ ಅವರ ವಿರುದ್ಧ ಕಣಕ್ಕಿಳಿಯಬೇಕಿದ್ದ ಜರ್ಮನಿಯ ಒಮರ್ ಸಲಾಹ್ ಇಬ್ರಾಹಿಂ ಅವರು ಅನಾರೋಗ್ಯದ ಹಿನ್ನೆಲೆಯಲ್ಲಿ ಹಿಂದೆ ಸರಿದರು.

16ರ ಘಟ್ಟದ ಬೌಟ್‌ನಲ್ಲಿ ಆಕಾಶ್ ಅವರಿಗೆ ಪೆರ್ಟೊ ರಿಕೊದ ಪಾಜನ್ ಕೆಲೆಬ್ ಟಿರಡೊ ಸವಾಲು ಎದುರಾಗಿದೆ.

ಗುರುವಾರ ರಾತ್ರಿ ನಡೆದ ಇನ್ನೊಂದು ಬೌಟ್‌ನಲ್ಲಿ 67 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಆಕಾಶ್ ಸಂಗ್ವಾನ್ 4–1ರಿಂದ ಜರ್ಮನಿಯ ಡೇನಿಯಲ್ ಕ್ರೊಟರ್ ಎದುರು ಗೆದ್ದು ಪ್ರೀಕ್ವಾರ್ಟರ್‌ಫೈನಲ್ ತಲುಪಿದರು. 21ರ ಹರೆಯದ ಸಂಗ್ವಾನ್ ಮುಂದಿನ ಬೌಟ್‌ನಲ್ಲಿ ಕ್ಯೂಬಾದ ಕೆವಿನ್ ಬ್ರೌನ್ ಅವರನ್ನು ಎದುರಿಸಲಿದ್ದಾರೆ.

60 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ವರಿಂದರ್ ಸಿಂಗ್ ಕೂಡ ತೀವ್ರ ಜ್ವರದ ಕಾರಣ ಕಣಕ್ಕಿಳಿಯಲಿಲ್ಲ. ಅವರು ಕೋವಿಡ್–19 ಪರೀಕ್ಷೆಗೆ ಒಳಗಾಗಿದ್ದು ವರದಿ 'ನೆಗೆಟಿವ್' ಬಂದಿದೆ.

ಶುಕ್ರವಾರ ರಾತ್ರಿ ನಡೆದ 92 ಕೆಜಿ ವಿಭಾಗದ ಬೌಟ್‌ನಲ್ಲಿ ಗೆದ್ದ ಭಾರತದ ಸಂಜೀತ್ ಕೂಡ ಪ್ರೀಕ್ವಾರ್ಟರ್‌ಫೈನಲ್‌ಗೆ ತಲುಪಿದರು. ಏಷ್ಯನ್ ಚಾಂಪಿಯನ್ ಸಂಜೀತ್ ರಷ್ಯಾದ ಆ್ಯಂಡ್ರಿ ಸ್ಪೋಟ್‌ಸ್ಕಿ ಎದುರು ಜಯಭೇರಿ ಮೊಳಗಿಸಿದರು.

ಪುಣೆ ರೇಸ್

ಪಾರಿಸಿಯನ್ ಗೆಲ್ಲುವ ನಿರೀಕ್ಷೆ

ಈವ್ ಚಾಂಪಿಯನ್ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಪಾರಿಸಿಯನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.00 ಗಂಟೆಗೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಎಕ್ಸಲರೇಟರ್ 4, ಸುಫಿಯಾ 6, ಲಾ ಪೆರೆಗ್ರಿನ 10
2ನೇ ರೇಸ್: ಗೋಲ್ಡನ್ ಗೆಸ್ಟ್ 1, ಏಗಾನ್ 5, ಎಕ್ಸಲೆಂಟ್ ಗೋಲ್ಡ್ 2
3ನೇ ರೇಸ್: ಸನ್‌ರೈಸ್ 6, ಸನ್‌ಲಾರ್ಡ್ 5, ಕೆಪ್ರಿಫ್ಲಾ 1
4ನೇ ರೇಸ್: ಚಾಂಪರ್ಸ್ ಆನ್ ಐಸ್ 6, ಮಾರ್ವಲಸ್ 9, ಸಿಪ್ಲಾಡ್ 10
5ನೇ ರೇಸ್: ಕೊಕೊಮೊ 4, ಥಿಯಾನ್ 1, ಫ್ಲೆಮಿಂಗೊ ಲಂಬಾರ್ಗಿನಿ 3
6ನೇ ರೇಸ್: ಕಮಾರಿಯಾ 4, ನಾರ್ದರನ್ ಲೈಟ್ಸ್ 2, ಐರಿಶ್ ಐಸ್ 10
7ನೇ ರೇಸ್: ಪಾರಿಸಿಯನ್ 6, ಕ್ಯಾಪ್ರಿಸ್ಕ 2, ಗ್ರಾಂಡ್ ಅಕಾರ್ಡ್ 1
8ನೇ ರೇಸ್: ಮೆಡೋರ 9, ಎಕ್ಸ್‌ಪಿಡಿಷನ್ 6, ಟಾರ್ಜಾನ್ 4
9ನೇ ರೇಸ್: ಬೀಮರ್ 2, ಫ್ರೆಡ್ಸ್ ಏಂಜೆಲ್ 10, ರಾನ್ 4.

ಉತ್ತಮ ಬೆಟ್: ಮೆಡೋರ

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
2,3,4,5,6	5,6,7,8,9	3,4,5	6,7,8	7,8,9


ಪಿ.ವಿ.ಸಿಂಧು– ಎಎಫ್‌ಪಿ ಚಿತ್ರ

ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ

ಸೆಮಿಫೈನಲ್‌ಗೆ ಸಿಂಧು

ಪ್ಯಾರಿಸ್ (ಪಿಟಿಐ): ಎರಡು ಒಲಿಂಪಿಕ್ಸ್ ಪದಕ ವಿಜೇತೆ, ಭಾರತದ ಪಿ.ವಿ.ಸಿಂಧು ಅವರು ಫ್ರೆಂಚ್ ಓಪನ್ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶುಕ್ರವಾರ ಅವರು ಮಹಿಳಾ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 21–14, 21–14ರಿಂದ ಥಾಯ್ಲೆಂಡ್‌ನ 8ನೇ ಶ್ರೇಯಾಂಕದ ಆಟಗಾರ್ತಿ ಬುಸಾನನ್ ಒಂಗ್‌ಬಮ್ರುಂಗಪನ್ ಅವರನ್ನು ಮಣಿಸಿದರು. ಕೇವಲ 38 ನಿಮಿಷಗಳಲ್ಲಿ ಅವರಿಗೆ ಜಯ ಒಲಿಯಿತು.

ಕಳೆದ ವಾರ ನಡೆದ ಡೆನ್ಮಾರ್ಕ್ ಓಪನ್ ಟೂರ್ನಿಯಲ್ಲೂ ಸಿಂಧು ಅವರು ಬುಸಾನನ್‌ಗೆ ಸೋಲುಣಿಸಿದ್ದರು.

ಗುರುವಾರ ರಾತ್ರಿ ನಡೆದ ಎರಡನೇ ಸುತ್ತಿನ ಹಣಾಹಣಿಯಲ್ಲಿ ಸಿಂಧು, 21-19, 21-9ರಿಂದ ಡೆನ್ಮಾರ್ಕ್‌ನ ಲೈನ್ ಕ್ರಿಸ್ಟೊಫರ್ಸನ್ ಸವಾಲು ಮೀರಿದ್ದರು.

ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ ಅಭಿಯಾನ ಅಂತ್ಯವಾಯಿತು. ಎಂಟರಘಟ್ಟದ ಪಂದ್ಯದಲ್ಲಿ ಅವರು 17-21 15-21ರಿಂದ ಕೊರಿಯಾದ ಹಿಯೊ ಕ್ವಾಂಗೀ ಎದುರು ಸೋತರು.

ಪುರುಷರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್‌ಶೆಟ್ಟಿ ಅವರು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 21-18 18-21 17-21ರಿಂದ ಮಲೇಷ್ಯಾದ ಆ್ಯರೋನ್ ಚಿಯಾ– ಸೋ ವೋಯಿ ಯಿಕ್ ಎದುರು ಎಡವಿದರು.

ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಸಾತ್ವಿಕ್‌–ಚಿರಾಗ್ 15-21, 21-10, 21-19ರಿಂದ ಭಾರತದವರೇ ಆದ ಎಂ.ಆರ್.ಅರ್ಜುನ್– ಧ್ರುವ ಕಪಿಲ ಅವರನ್ನು ಮಣಿಸಿದ್ದರು.

ಸಿಂಗಲ್ಸ್‌ನಲ್ಲಿ ಸೌರಭ್ ವರ್ಮಾ ಸವಾಲು ಕೊನೆಗೊಂಡಿತು. ಎರಡನೇ ಸುತ್ತಿನ ಸೆಣಸಾಟದಲ್ಲಿ ಅವರು 12–21, 9–21ರಿಂದ ಜಪಾನ್ ಕೆಂಟಾ ನಿಶಿಮೊಟೊ ಎದುರು ಎಡವಿದರು.


ಪ್ರಶಸ್ತಿಯೊಂದಿಗೆ ಅರಿಹಂತ್ ಕೌಲ್ ಹಾಗೂ ಅರ್ಜಾನ್ ಖೊರಾಕಿವಾಲಾ

ಕೆಎಸ್‌ಎಲ್‌ಟಿಎ ಟೆನಿಸ್: ಅರಿಹಂತ್, ಅರ್ಜಾನ್‌ಗೆ ಪ್ರಶಸ್ತಿ

ಬೆಂಗಳೂರು: ಅರಿಹಂತ್ ಕೌಲ್ ಹಾಗೂ ಅರ್ಜಾನ್ ಖೊರಾಕಿವಾಲಾ ಅವರು ಕೆಎಸ್‌ಎಲ್‌ಟಿಎ–ಎಐಟಿಎ ಟಿಎಸ್7 14 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಇಲ್ಲಿ ಶುಕ್ರವಾರ ನಡೆದ ಬಾಲಕರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಬೆಂಗಳೂರಿನ ಅರಿಹಂತ್ 7-6 (7-5), 6-2ರಿಂದ ಯಶ್ ಪಂಚಾಕ್ಷರಿ ಅವರಿಗೆ ಸೋಲುಣಿಸಿದರು. ಬಾಲಕಿಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಮೈಸೂರಿನ ಅರ್ಜಾನ್ 6-3, 6-3ರಿಂದ ಗುರ್ಲೀನ್ ಕೌರ್ ಖನುಜಾ ಎದುರು ಗೆದ್ದು ಸಂಭ್ರಮಿಸಿದರು.

ಬಾಲಕರ ಡಬಲ್ಸ್ ವಿಭಾಗದ ಪ್ರಶಸ್ತಿಯು ಅಭ್ರದೀಪ್ ಭಟ್ಟಾಚಾರ್ಯ ಹಾಗೂ ಶ್ರೀಕರ್ ಧೋನಿ ಜೋಡಿಯ ಪಾಲಾಯಿತು. ಫೈನಲ್ ಪಂದ್ಯದಲ್ಲಿ ಈ ಜೋಡಿಯು ಆದಿತ್ಯ ನಾರಾಯಣನ್ ಮತ್ತು ಪ್ರಕಾಶ್ ಸರಣ್ ವಿರುದ್ಧ 7-6 (4), 6-1ರಿಂದ ಜಯ ಸಾಧಿಸಿದರು.

ಸೃಷ್ಟಿ ಕಿರಣ್ ಹಾಗೂ ತನು ವಿಶ್ವಾಸ್ ಅವರು ಬಾಲಕಿಯರ ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಜಿದ್ದಾಜಿದ್ದಿನ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಇವರಿಬ್ಬರು 6-1, 3-6, 10-7ರಿಂದ ದಿಶಾ ಕುಮಾರ್ ಹಾಗೂ ಕೆ. ಪದ್ಮಾಕುಮಾರ್ ಅವರನ್ನು ಮಣಿಸಿದರು.